# ಜಾನಪದ ಗಂಗೋತ್ರಿ



ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಬೆಂಗಳೂರು. 2

# ಜಾನಪದ ಗಂಗೋತ್ರಿ

ಸಂಪುಟ : ೬ ಸೆಪ್ಟಂಬರ್ ೧೯೯೩ ಸಂಚಿಕೆ : ೨

ಪ್ರಧಾನ ಸಂಪಾದಕ

**ಡಾ: ಜೀ. ಶಂ. ಪರಮಶಿವಯ್ಯ**

ಸಂಪಾದಕ

**ಹ. ಕ. ರಾಜೇಗೌಡ**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**

ಬೆಂಗಳೂರು - ೫೬೦ ೦೦೨

JANAPADA GANGOTHRI - A Folklore Quarterly, Published by Karnataka Janapada and Yakshagana Academy, Nrupatunga Road, Bangalore - 560002. Chief Editor : Dr. J. S. Paramashivaiah Editor: H. K. Raje Gowda Vol-6 Edition-2 September 1993.

ವಾರ್ಷಿಕ ಚಂದಾ : ಮೂವತ್ತು ರೂಪಾಯಿ
ಬಿಡಿ ಸಂಚಿಕೆ : ಎಂಟು ರೂಪಾಯಿ

ಚಂದಾ ಮತ್ತು ಪ್ರತಿಗಳಿಗೆ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

ಮುದ್ರಣ : ಮಂಡ್ಯ ಕಂಪ್ಯೂಟರ್ ಸೆಂಟರ್, ತಾವರೆಗೆರೆ, ಮಂಡ್ಯ.

# ಪ್ರಧಾನ ಸಂಪಾದಕರ ಮಾತು

ಜಾನಪದ ಅಧ್ಯಯನ ವ್ಯಾಪಕವಾಗಿ ಬೆಳೆಯುವಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ಪತ್ರಿಕೆಗಳು ವಹಿಸಿದ ಪಾತ್ರ ಬಹು ದೊಡ್ಡದು. ಈ ವಿಷಯ ವಿದ್ವತ್ತಿನ ಗದ್ದುಗೆಯನ್ನು ಏರುವ ಆರಂಭದ ದಿನಗಳಲ್ಲೇ ಜಾನಪದ ಪತ್ರಿಕೆಗಳು ಹುಟ್ಟಿಕೊಂಡು ಆ ಸಂಬಂಧವಾದ ಲೇಖನಗಳನ್ನು ಪ್ರಕಟಿಸುವುದರ ಮೂಲಕ ವಿದ್ಯಾವಂತರಲ್ಲಿ ಜಾನಪದಾಸಕ್ತಿಯನ್ನು ಕೆರಳಿಸುತ್ತಾ ಬಂದವು. ಕಳೆದ ಶತಮಾನದ ಆದಿಭಾಗದಿಂದಲೂ ಇಂಥ ಪತ್ರಿಕೆಗಳ ಕೊಡುಗೆ ವಿಶಿಷ್ಟವಾದುದಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಅಪಾರ ಸಂಖ್ಯೆಯ ಜಾನಪದ ಪತ್ರಿಕೆಗಳು ಪ್ರಕಟವಾಗುತ್ತಿವೆ. ಅಮೆರಿಕೆಯಲ್ಲಂತೂ ಇವುಗಳ ಸಂಖ್ಯೆ ಅತ್ಯಧಿಕ. ಯೂರೋಪಿನ ಬೇರೆ ಬೇರೆ ದೇಶಗಳಲ್ಲಿ ಆಯಾ ದೇಶಭಾಷೆಯಲ್ಲಿ ಪತ್ರಿಕೆಗಳು ಪ್ರಕಟಗೊಂಡು ಜಾನಪದ ಅಧ್ಯಯನ ರೂಪುಗೊಳ್ಳಲು ಪ್ರೇರಕವಾಗಿವೆ.

ಭಾರತದಲ್ಲಿ ಜಾನಪದ ಅಧ್ಯಯನಕ್ಕೆ ವಿಶೇಷ ಸ್ಥಾನವನ್ನು ನೀಡಿದ ಪತ್ರಿಕೆ, 'The Indian Antiquary'. ಭಾರತದ ಬೇರೆ ಬೇರೆ ಭಾಗಗಳಲ್ಲಿ ಕೆಲಸ ಮಾಡಿದ ವಿದ್ವಾಂಸರು ದಂಡಿಯಾಗಿ ತಮ್ಮ ಸುದೀರ್ಘಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದರು. Asiatic Society Journal, Mythic Society Journalಗಳೂ ಸಹ ಜಾನಪದಕ್ಕೆ ಸೂಕ್ತ ಸ್ಥಾನವನ್ನು ನೀಡಿದವು. ಹೀಗಾಗಿ ಕಳೆದ ಶತಮಾನದಲ್ಲಿ ಜಾನಪದ ಸಂಬಂಧವಾದ ಗ್ರಂಥಗಳು ಪ್ರಕಟವಾಗದಿದ್ದರೂ ಇಂಥ ಸಂಶೋಧನ ಪತ್ರಿಕೆಗಳ ಮೂಲಕ ಅಪೂರ್ವ ಬರಹಗಳು ಬೆಳಕು ಕಂಡವು.

ಭಾರತದ ಜಾನಪದ ಕ್ಷೇತ್ರದಲ್ಲಿ ವಿಶೇಷ ಪ್ರಭಾವವನ್ನು ಬೀರಿದ ' Folklore' ಪತ್ರಿಕೆ ಕಲ್ಕತ್ತಾದಿಂದ ಈ ಶತಮಾನದ ಮಧ್ಯ ಭಾಗದಲ್ಲಿ ಪ್ರಕಟಗೊಂಡಿತು. ಇದರ ಸಂಪಾದಕ .ದಿ. ಶಂಕರಸೇನ್‌ಗುಪ್ತ ಅಪಾರ ಶ್ರಮದಿಂದ 3-4 ದಶಕಗಳ ಕಾಲ ಈ ಪತ್ರಿಕೆಯನ್ನು ನಡೆಸಿಕೊಂಡು ಬಂದರು. ಇದಾದ ಮೇಲೆ Folklore Fellows of India ಸಂಸ್ಥೆಯ ಅಂಗ ಪತ್ರಿಕೆ 'Journal of Indian Folk lorstics' ಮೈಸೂರಿನಿಂದ ಪ್ರಕಟಗೊಂಡಿತು. ಜಾನಪದ ಸಂಶೋಧನೆ ಅಧ್ಯಯನಗಳ ದೃಷ್ಟಿಯಿಂದ ಇದೊಂದು ಮಹತ್ವದ ಪತ್ರಿಕೆ.

ಕನ್ನಡದಲ್ಲಿ ಜಾನಪದ ಸಂಬಂಧವಾದ ಪತ್ರಿಕೆಗಳು ಬೆಳಕು ಕಂಡದ್ದು ೧೯೬೮ ರ ಈಚೆಗೆ. ಈ ಮೊದಲು ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ ಮೊದಲಾದ ಪತ್ರಿಕೆಗಳು ಜಾನಪದಕ್ಕೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಈ ಕ್ಷೇತ್ರದ ಬೆಳವಣಿಗೆಗೆ ಸಹಾಯಕವಾದವು. ಕರ್ನಾಟಕ ಜಾನಪದ ಪರಿಷತ್ತು (ಮೈಸೂರು) ಈ ಸಂಸ್ಥೆ ಆರಂಭಿಸಿದ 'ಜಾನಪದ' ಎಂಬ ಶೀರ್ಷಿಕೆಯ ಪತ್ರಿಕೆ ತುಂಬ ಪ್ರೌಢರೀತಿಯಲ್ಲಿ ಪ್ರಕಟಗೊಳ್ಳತೊಡಗಿದಾಗ ಅನೇಕ ವಿದ್ವತ್‌ಪೂರ್ಣ ಲೇಖನಗಳು ಬೆಳಕು ಕಾಣತೊಡಗಿದವು. ಇದೊಂದು ತ್ರೈಮಾಸಿಕ ಪತ್ರಿಕೆ. ಇದರ ಹತ್ತು ಸಂಚಿಕೆಗಳು ಪ್ರಕಟಗೊಂಡು ನಾನಾ ಕಾರಣಗಳಿಂದಾಗಿ ಇದು ನಿಂತಿತು. ಕರ್ನಾಟಕ ಜಾನಪದ

ಟ್ರಸ್ಟ್(ಈಗ ಕರ್ನಾಟಕ ಜಾನಪದ ಪರಿಷತ್) 'ಜಾನಪದ ಜಗತ್ತು' ಎಂಬ ಶೀರ್ಷಿಕೆಯಲ್ಲಿ ಕಳೆದ ಒಂದುವರೆ ದಶಕದಿಂದ ಪ್ರಕಟಿಸುತ್ತಿರುವ ಪತ್ರಿಕೆ ಒಂದು ಉತ್ತಮ ಪ್ರಯತ್ನವಾಗಿದೆ. ಉಡುಪಿಯ ಪ್ರಾದೇಶಿಕ ಜನಪದ ಕಲೆಗಳ ಅಧ್ಯಯನ ಕೇಂದ್ರ ಇಂಗ್ಲಿಷಿನಲ್ಲಿ ಪ್ರಕಟಿಸುತ್ತಿರುವ 'Prasanga' ಪತ್ರಿಕೆ ಕೂಡ ಹಲವಾರು ವಿಷಯಗಳ ಹಿನ್ನೆಲೆಯಲ್ಲಿ ಗಮನಾರ್ಹವಾದುದಾಗಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ತನ್ನ ಅಂಗ ಪತ್ರಿಕೆಯಾಗಿ 'ಜಾನಪದ ಗಂಗೋತ್ರಿ' ತ್ರೈಮಾಸಿಕವನ್ನು ಪ್ರಕಟಿಸುತ್ತಾ ಬಂದಿದೆ. ನಮ್ಮ ಜಾನಪದ ಪತ್ರಿಕೆಗಳ ಸಾಲಿನಲ್ಲಿ ಇದಕ್ಕೆ ಒಂದು ವಿಶೇಷ ಸ್ಥಾನವಿದೆ. ಜಾನಪದ ಸಂಶೋಧನೆ, ವಿಮರ್ಶೆ ಮೂಲಸಂಗ್ರಹ, ಅಧ್ಯಯನಗಳು ಮುಂತಾದ ನಾನಾ ರೀತಿಯ ಪ್ರಬಂಧಗಳನ್ನೊಳಗೊಂಡ ಈ ಜಾನಪದ ಗಂಗೋತ್ರಿಯ ಸಂಚಿಕೆಗಳು ಜಾನಪದ ವಿದ್ವಾಂಸರು ಸಂಗ್ರಹಿಸಿ ಇಡಬಹುದಾದ ಉತ್ತಮ ಗುಣ ಮಟ್ಟದ ಪತ್ರಿಕೆಯಾಗಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ತನ್ನ ಅನೇಕ ಮುಖ್ಯವಾದ ಕಾರ್ಯಚಟುವಟಿಕೆಗಳ ನಡುವೆ ಇಂಥ ಒಂದು ಸಂಶೋಧನ ಪತ್ರಿಕೆಯ ಪ್ರಕಟಣೆಗೂ ಆದ್ಯ ಗಮನ ನೀಡಿದೆ. ಈ ಪತ್ರಿಕೆಯ ಸಂಪಾದಕರಾಗಿ ಶ್ರೀ ಹ. ಕ. ರಾಜೇಗೌಡರು ತುಂಬ ಶ್ರದ್ಧೆ, ಆಸಕ್ತಿಗಳಿಂದ ಪ್ರತಿ ಸಂಚಿಕೆಯ ಗುಣಮಟ್ಟವನ್ನು ಕಾಪಾಡಿಕೊಂಡು ಬರುವಲ್ಲಿ ತುಂಬ ಆಸಕ್ತಿ ವಹಿಸಿದ್ದಾರೆ. ಆ ಸಾಲಿಗೆ ಈ ಸಂಚಿಕೆಯೂ ಸೇರುತ್ತದೆ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ
ಪ್ರಧಾನ ಸಂಪಾದಕ ಮತ್ತು ಅಧ್ಯಕ್ಷ

* * * * *

# ಸಂಪಾದಕೀಯ

ಕಲೆ, ಸಾಹಿತ್ಯ, ಸಂಸ್ಕೃತಿಗಳು ನಾಡಿನ ಬಹು ಮುಖ್ಯವಾದ ಅಂಗ. ಒಂದು ದೇಶದ ಸರ್ವತೋಮುಖವಾದ ಬೆಳವಣಿಗೆಯಲ್ಲಿ ಇವುಗಳ ಪಾತ್ರ ಹಿರಿದಾದುದು. ಯಾವುದೇ ನೆಲದ ಬೆಳವಣಿಗೆಯನ್ನು ಅಳೆಯುವಲ್ಲಿ ಆ ನೆಲದ ಸಾಂಸ್ಕೃತಿಕ ಬದುಕಿನ ಅಭಿವೃದ್ಧಿಯನ್ನು ಗಮನಿಸುವುದು ಅತ್ಯಾವಶ್ಯಕ. ಆದುದರಿಂದಲೆ ಬಹುಪ್ರಾಚೀನ ಕಾಲದಿಂದಲೂ ಆಡಳಿತದ ಚುಕ್ಕಾಣಿ ಹಿಡಿದವರು, ಶ್ರೀಮಂತರು ಇವುಗಳಿಗೆ ಅಪಾರವಾದ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ನಿರಂಕುಶ ಆಡಳಿತಗಳು ಕೂಡ ಇವುಗಳ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿಲ್ಲ. ನಮ್ಮ ದೇಶದ ರಾಜ ಮಹಾರಾಜರು, ಚಕ್ರವರ್ತಿಗಳ ಅರಮನೆಗಳಲ್ಲಿ ಅವುಗಳಿಗೆ ಅಗ್ರಸ್ಥಾನವಿತ್ತು. ಅನೇಕಾನೇಕ ಸಾಹಿತಿ ಕಲಾವಿದರುಗಳನ್ನು ಇವರು ಪೋಷಿಸುತ್ತಿದ್ದರು. ಕಾರಣ ಇವರು ಯಾವುದೇ ಲೌಕಿಕ ಕೋಟಲೆಗಳಿಲ್ಲದೆ ತಮ್ಮ ತಮ್ಮ ಕೆಲಸಗಳನ್ನು ಮಾಡಲೆಂದು. ಸಂಸ್ಕೃತದ ಕಾಳಿದಾಸನಿಂದ ಕನ್ನಡದ ಪಂಪ ರನ್ನರೆಲ್ಲ ಹೀಗೆ ರಾಜಾಶ್ರಯದಲ್ಲಿದ್ದವರು.

ಜನಪದ ಕಲೆ ಮತ್ತು ಸಾಹಿತ್ಯ ನಮ್ಮ ಜನಜೀವನದ ಮೂಲ ಸ್ರೋತ. ಅದು ಬತ್ತಿದರೆ ಇಡೀ ಸಂಸ್ಕೃತಿಯೇ ನಾಶವಾಗಿ ಬಿಡುತ್ತದೆ. ನಮ್ಮ ದೇಶದಲ್ಲಿ ಉತ್ತರೋತ್ತರ ಅಧಿಕಾರದ ಗದ್ದುಗೆ ಏರಿದ ಅಥವಾ ಅಧಿಕಾರಸ್ಥರನ್ನು ತಮ್ಮ ಪತೋಟಿಯಲ್ಲಿಟ್ಟುಕೊಂಡ ಕೆಲವೇ ಜನರು ಈ ಇಡೀ ಜನಪದವನ್ನು ರಾಜಾಶ್ರಯದಿಂದ ದೂರವಿಟ್ಟರು. ಭಾರತಕ್ಕೆ ಬಂದು ಹೋದ ಅನೇಕ ಪ್ರವಾಸಿಗರು ರಾಜಾಸ್ಥಾನಗಳಲ್ಲಿ ವಿಜೃಂಭಿಸುತ್ತಿದ್ದ ಜನಪದ ಕಲೆ ಮತ್ತು ಸಾಹಿತ್ಯಗಳನ್ನು ಕುರಿತು ಹೇಳಿದ್ದಾರೆ. ಆದರೆ ಮುಂದೆ ಈ ಕಲೆ ಮತ್ತು ಸಾಹಿತ್ಯವನ್ನು ಆಚೆ ತಳ್ಳಿ ಪಟ್ಟಭದ್ರ ಹಿತಾಸಕ್ತ ಶಕ್ತಿಗಳು ರಾಜಾಸ್ಥಾನವನ್ನು ಆಕ್ರಮಿಸಿಕೊಂಡವು. ಆದರೂ ಜನರ ಬದುಕಿನೊಂದಿಗೆ ಹುಟ್ಟಿ ಬಂದ ಇವು ರಾಜಾಶ್ರಯ ತಪ್ಪಿದರೂ ಜನಾಶ್ರಯದಲ್ಲಿ ಗ್ರಾಮಾಂತರಗಳಲ್ಲಿ ಬದುಕಿ ಉಳಿದುಕೊಂಡವು. ಆದರೆ ನಮ್ಮ ಜನರು ಶಿಷ್ಟ ಶಿಕ್ಷಣವನ್ನು ಪಡೆಯಲಾರಂಭಿಸಿದ ಮೇಲೆ ಅವರ ಜೀವನ ಉಚ್ಛ್ರಾಯ ಸ್ಥಿತಿಗೆ ತಲುಪುತ್ತಾ ಹೋದಂತೆ ಮತ್ತೆ ಈ ಜನಪದ ಕಲೆ, ಸಾಹಿತ್ಯಗಳು ಮೂಲೆ ಗುಂಪಾಗತೊಡಗಿದವು. ಜನಪದ ಕಲಾವಿದರು ಜೀವನ ಯಾಪನೆಗಾಗಿ ಭಿಕ್ಷೆ ಮಾಡುವ ಸ್ಥಿತಿ ಉಂಟಾಯಿತು.

ಪಾಶ್ಚಿಮಾತ್ಯ ವಿದ್ವಾಂಸರು ಇವುಗಳು ನಮ್ಮ ಸಂಸ್ಕೃತಿಯ ಮೂಲ ಎಂದು ಅವುಗಳ ಅಧ್ಯಯನ ಆರಂಭಿಸಿದ ಎಷ್ಟೋ ವರ್ಷಗಳ ಮೇಲೆ ನಮ್ಮವರು ಕೆಲವರು ಇವುಗಳತ್ತ ಗಮನಹರಿಸಲಾರಂಭಿಸಿದರು. ಇಂತಹ ಅಧ್ಯಯನ ವ್ಯಾಪಕವಾಗಿಯೇನೂ ಇಂದಿಗೂ ನಡೆಯುತ್ತಿಲ್ಲ. ಇಂದಿಗೂ ನಮ್ಮಲ್ಲಿ ಶಿಷ್ಟ ಕಲೆ ಮತ್ತು ಸಾಹಿತ್ಯಗಳಿಗಿರುವ ಸ್ಥಾನ ಜನಪದ ಸಾಹಿತ್ಯ ಕಲೆಗಳಿಗಿಲ್ಲ. ಇವುಗಳ ಅಧ್ಯಯನ ಆರಂಭಿಸಲು ನಮ್ಮ ಶಿಕ್ಷಣ ಸಂಸ್ಥೆಗಳು ಹಿಂದೆ ಮುಂದೆ ನೋಡುತ್ತಿವೆ. ಪರ ದೇಶದ ಭಾಷೆ, ಸಂಸ್ಕೃತಿಗಳಿಗೆ ಈ ದೇಶದಲ್ಲಿ ಇರುವ ಅವಕಾಶಗಳು ನಮ್ಮವೇ ಆದವುಗಳಿಗಿಲ್ಲ. ಇತ್ತೀಚೆಗೆ ಅಲ್ಲೊಂದು ಇಲ್ಲೊಂದು ವಿಶ್ವವಿದ್ಯಾನಿಲಯಗಳು ಈ ದಿಸೆಯಲ್ಲಿ ಪ್ರಯತ್ನ ನಡೆಸಿವೆಯಾದರೂ ಅದು ಕಾಟಚಾರಕ್ಕೆಂಬಂತೆ ನಡೆಯುತ್ತಿದೆ. ಇದು ತಪ್ಪಬೇಕು. ನಮ್ಮ ಮೂಲ ಕಲೆ ಸಾಹಿತ್ಯಗಳ

ಅರಿವು ಇಡೀ ದೇಶದ ಮಕ್ಕಳಿಗೆ ತಿಳಿದಿರಬೇಕು. ಈ ಜನಪದ ಹಿನ್ನೆಲೆಯ ಬಗ್ಗೆ ಶಿಕ್ಷಣ ನಡೆಯಬೇಕು. ಸ್ವಾತಂತ್ರ್ಯ ಬಂದು ಅರ್ಧ ಶತಮಾನವಾಗುತ್ತಾ ಬಂದರೂ ನಮ್ಮ ಶಿಕ್ಷಣ ಪಾಶ್ಚಿಮಾತ್ಯರು ಆರಂಭಿಸಿದ ರೀತಿಯಲ್ಲೆ ನಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಕೂಡಲೇ ಇದು ಬದಲಾಗಿ ನಮ್ಮ ಸಂಸ್ಕೃತಿಯ ಅಡಿಪಾಯದ ಮೇಲೆ ನಮ್ಮದೇ ಆದ ಶಿಕ್ಷಣ ನೀತಿಯೊಂದು ರೂಪಿತವಾಗಬೇಕು. ಅದರಲ್ಲಿ ನಮ್ಮ ಜನಪದದ ಬೇರುಗಳಿರುವಂತೆ ಎಚ್ಚರಿಕೆ ವಹಿಸಬೇಕು.

ಹ. ಕ. ರಾಜೇಗೌಡ
ಸಂಪಾದಕ

* * * * *

## ಈ ಸಂಚಿಕೆಯಲ್ಲಿ


ಪ್ರಧಾನ ಸಂಪಾದಕರ ಮಾತು iii

ಸಂಪಾದಕೀಯ v

ಕೊಡಗಿನ ಜನಪದ ನೃತ್ಯಗಳು ೧
- ಡಾ. ಡಿ. ಬಿ. ರಾಮಚಂದ್ರಚಾರ್

ಬೋಳಮಾರನಹಳ್ಳಿ ಲಕ್ಷ್ಮೀದೇವಿ ಪೂಜೆ ೧೧
- ಪಿ. ಶಂಕರ ಬಳ್ಳೆಕೆರೆ

ಬುಡಕಟ್ಟು ಸಮೂಹಗಳ ಬದಲಾಗುತ್ತಿರುವ ಆರ್ಥಿಕ ಜೀವನ ೧೪
- ಡಾ. ಅಂಬಳಿಕೆ ಹಿರಿಯಣ್ಣ

ಹಂತಿ, ಹಂತಿಯ ಹಾಡುಗಳು- ಒಂದು ಅಧ್ಯಯನ ೨೭
- ಡಾ. ವಿ. ಜಿ. ಪೂಜಾರ

ಜಾನಪದ ಮುನ್ನೋಟ ೪೧
- ಡಾ. ಡಿ. ಕೆ. ರಾಜೇಂದ್ರ

ಜಾನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ ೫೧
- ಡಾ. ಎಂ. ಎನ್. ವಾಲಿ

ಜಲ ಜಾನಪದ ೫೯
- ಡಾ. ಎಂ. ಜಿ. ಬಿರಾದಾರ

# ಕೊಡಗಿನ ಜನಪದ ನೃತ್ಯಗಳು

-ಡಾ: ಡಿ. ಬಿ. ರಾಮಚಂದ್ರಾಚಾರ್

ಮನುಷ್ಯನ ಮೈ-ಮನಸ್ಸುಗಳು ಆರೋಗ್ಯಪೂರ್ಣವಾಗಿದ್ದು, ಸುಖ-ಸಂತೋಷಗಳು ಪ್ರಾಪ್ತವಾದಾಗ, ಬದುಕು ಉಲ್ಲಾಸಪೂರ್ಣವಾಗುತ್ತದೆ. ಆಗ ಆತ ತನ್ನ ಸುಖ-ಸಂತೃಪ್ತಿ-ಸಂತಸಗಳನ್ನು ತನ್ನ ಅವಯವಗಳ ಚಲನೆಯಿಂದ ಬೇರೆಯವರಿಗೆ ತಿಳಿಸಲು ಯತ್ನಿಸುತ್ತಾನೆ.

ವ್ಯಕ್ತಿಗತವಾದ ಈ ಉಲ್ಲಾಸ, ಸಮೂಹಗತವಾದಾಗ, ಕೂಗು ಧ್ವನಿಯಾಗುತ್ತದೆ. ಚಪ್ಪಾಳಿ ತಾಳವಾಗುತ್ತದೆ. ಕುಣಿತ ನೃತ್ಯವಾಗುತ್ತದೆ. ಆಗ ಮಾತು ಗೌಣ. ಅಂಗಾಂಗಗಳ ಚಲನೆಯ ಹೊಂದಾಣಿಕೆಯೇ ಅಭಿನಯವಾಗಿ, ಮಾತಿನ ಕೆಲಸವನ್ನು ನಿರ್ವಹಿಸುತ್ತದೆ.

ವ್ಯಕ್ತಿ ತನ್ನ ಕೈ-ಕಾಲುಗಳ ಚಲನೆಯನ್ನು ಲಯತಾಳಗಳ ಶಿಸ್ತಿಗೆ ಒಳಪಡಿಸಿಕೊಂಡಾಗ ಸಾಮಾನ್ಯ ಕುಣಿತ ಕಲೆಯಾಗಿ ಮಾರ್ಪಾಡು ಹೊಂದುತ್ತದೆ.

ಪ್ರಪಂಚದ ಎಲ್ಲಾ ಭಾಗಗಳಲ್ಲೂ ಸಮುದಾಯ ತನ್ನ ಮೊದಲ ಕಲಾಭಿಮಾನಿಗೆ ಆಯ್ದುಕೊಂಡ ವಿಧಾನವೇ ನೃತ್ಯ ಭಾಷೆ. ಇದೇ ಎಲ್ಲಾ ನಾಟಕಗಳ ಉಗಮ ಸ್ಥಾನ.

ಇಂದು ನಮಗೆ ತಿಳಿದಿರುವಂತೆ ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ನಾಟಕಗಳು ಗ್ರೀಕ್ ನಾಟಕಗಳು. ಈ ನಾಟಕಗಳ ಆವಿರ್ಭಾವಕ್ಕೆ ಕಾರಣವಾಗಿದ್ದಿರ ಬಹುದಾದ ನೃತ್ಯದ ಬಗ್ಗೆ "Greek dancing used bodily motion to convey thought; as in speech the tongue articulates words, so in dancing the body swayed and gesticulated meaning - " Every motion a word" such dancing united with speech and music to make ballad dance"[1]. ಎಂಬುದಾಗಿ ಆರ್. ಜಿ. ಮೌಲ್ಟನ್ ಅವರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಭಾರತದಲ್ಲೂ ನಾಗರಿಕ ಪ್ರಪಂಚದ ಶಿಷ್ಟ ನೃತ್ಯ. ಪ್ರಕಾರಗಳು ಹಾಗೂ ನಾಟಕ ಆವಿಷ್ಕಾರ ಹೊಂದುವ ಮೊದಲು ಜನಪದರು ನೃತ್ಯ ವಿಶೇಷಗಳ, ಸಂವಾದ ಕೌಶಲಗಳ, ಹಾಡುಗಬ್ಬಗಳ ರೂಪದಲ್ಲಿ ತಮ್ಮ ಅನುರಾಗ, ಆತಂಕಗಳ ಅನುಭವಗಳನ್ನು ಅಭಿವ್ಯಕ್ತ ಪಡಿಸಲು ಪ್ರಯತ್ನಿಸಿದ್ದರು ಎಂಬುದು ನಿರ್ವಿವಾದ.

ಜನಪದ ಕಲೆ ನಾಗರಿಕ ಕಲೆಯಾಗಿ ವಿಕಾಸ ಪಡೆದರೂ, ಮೂಲ ಜಾನಪದ ಸಾಂಸ್ಕೃತಿಕ ಸಂಪತ್ತು ವಿನಾಶದ ಹಾದಿ ಹಿಡಿಯದೆ - ತನ್ನ ನೈಜತೆಯನ್ನುಳಿಸಿಕೊಂಡು ಇಲ್ಲಿಯವರೆಗೆ - ನಾಗರಿಕ ಕಲೆಯ ಜೊತೆಯಲ್ಲಿಯೇ ಬೆಳೆದು ಬಂದಿದೆ. ಅದಕ್ಕೆ ಮುಖ್ಯ ಕಾರಣ ಭಾರತ ಹಳ್ಳಿಗಳ ದೇಶವಾಗಿ ಉಳಿದದ್ದೇ ಆಗಿದೆ. ಆದುದರಿಂದಲೇ ನಾಗರಿಕ ಎಂದು ಕರೆದುಕೊಳ್ಳುವ ವ್ಯಕ್ತಿಯಲ್ಲೂ ಅಂತರ್‌ಪ್ರಜ್ಞೆಯಾಗಿ ಜಾನಪದ ಪ್ರಜ್ಞೆ ಕೆಲಸ ಮಾಡುತ್ತಿದೆ.

---

1. R. G. Moulton, - The Ancient classical Drama.

[Fundamentally Folk culture is working as a "collective sub conseious" in every urban human being].

ಭರತ ಖಂಡದ ಜನಪದ ನೃತ್ಯಗಳನ್ನು ಅವಲೋಕಿಸಿದಾಗ, ಅವುಗಳನ್ನು ಮುಖ್ಯವಾಗಿ ಮೂರು ವರ್ಗಗಳಾಗಿ ವಿಂಗಡಿಸಬಹುದು ಎಂದೆನಿಸುತ್ತದೆ. ಅವು ಯಾವುವೆಂದರೆ

೧. ಬೇಟೆಗೆ ಅಥವಾ ಸಮರಕ್ಕೆ ಹೊರಡುವ ಮೊದಲು ಉತ್ಸಾಹದ ಅಭಿವ್ಯಕ್ತಿಯ ಸಾಧನವಾಗಿ ಬೇಟೆ ಅಥವಾ ಯುದ್ಧದಲ್ಲಿ ಪಡೆದ ವಿಜಯದ, ಸಂಭ್ರಮದ ಆಚರಣೆಗಾಗಿ, ಮೂಢಿ ಬಂದ ನೃತ್ಯಗಳು.

೨. ಕೃಷಿ ಜೀವನದ ಏಕತಾನತೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ ಅಥವಾ ಉತ್ತಮ ಫಸಲು ಕೈಸೇರಿದ ಸಂತೃಪ್ತಿ, ಸಂತೋಷಗಳ ಅಭಿವ್ಯಕ್ತಿಗಾಗಿ ಹುಟ್ಟಿದ ನೃತ್ಯಗಳು

೩. ನಿಗೂಢ ಪ್ರಕೃತಿಯ ಶಕ್ತಿಯ ಬಗ್ಗೆ ಉಂಟಾದ ಭಯ-ಭಕ್ತಿ ಹಾಗೂ ಕೃತಜ್ಞತೆಗಳ ಪ್ರಕಟನೆಗಾಗಿ ಹುಟ್ಟಿದ ಧಾರ್ಮಿಕ ಹಾಗೂ ದೈವತಾರಾಧನೆಯ ನೃತ್ಯಗಳು.

ಕರ್ನಾಟಕ ಎಂಬ ಭೂ ವಿಸ್ತೀರ್ಣದಲ್ಲಿ ಮುಖ್ಯವಾಗಿ ತುಳು, ಕನ್ನಡ, ಭಾಷಾವಲಯಗಳು ಸಂಗಮಗೊಂಡು - ಇಲ್ಲಿಯ ಕನ್ನಡ ಜಾನಪದ ಅತ್ಯಂತ ವೈವಿಧ್ಯಪೂರ್ಣವಾಗಿದೆ. ಬೆಟ್ಟ-ಗುಡ್ಡಗಳಿಂದಲೂ, ಆಳವಾದ ಕಮರಿ, ಕಣಿವೆಗಳಿಂದಲೂ, ದಟ್ಟವಾದ ಕಾಡು, ನದಿಗಳಿಂದಲೂ ಕೂಡಿದ ಪ್ರದೇಶದಲ್ಲಿ ಪರಸ್ಪರರ ಸಂಪರ್ಕ ಕಷ್ಟ ಸಾಧ್ಯವಾಗಿದ್ದರಿಂದ ವಿವಿಧ ಪ್ರದೇಶದ ಜನ ತಮ್ಮ ತಮ್ಮ ಮನರಂಜನೆಗಾಗಿ, ದೈವತಾರಾಧನೆಗಾಗಿ, ತಮ್ಮ ತಮ್ಮ ಪ್ರದೇಶದ ಮೇಲ್ಮೈ ಲಕ್ಷಣಕ್ಕೆ ಅನುಗುಣವಾಗಿ ವಿವಿಧ ರೀತಿಯ ನೃತ್ಯಗಳನ್ನು ರೂಪಿಸಿಕೊಳ್ಳುವುದು ಅನಿವಾರ್ಯವಾಯಿತು.

ಹೀಗಾಗಿ ಕರ್ನಾಟಕದಲ್ಲಿಯೇ ಸುಮಾರು ನಲವತ್ತು ವಿವಿಧ ಬಗೆಯ ನೃತ್ಯಗಳನ್ನು ವಿದ್ವಾಂಸರು ಗುರ್ತಿಸಿದ್ದಾರೆ. ಮೇಲೆ ಸೂಚಿಸಿದ ಮೂರು ರೀತಿಯ ವರ್ಗೀಕರಣಕ್ಕೂ ಅನ್ವಯಗೊಳ್ಳುವ ನೃತ್ಯಗಳೂ ನಮ್ಮಲ್ಲಿವೆ.

ಕರ್ನಾಟಕದಲ್ಲಿನ ಕೊಡವ ಭಾಷಾವಲಯ ಅಂದರೆ ಕೊಡಗು ಪ್ರದೇಶದಲ್ಲಿನ ನೃತ್ಯಗಳ ಪರಿಚಯ ಪ್ರಸ್ತುತ ಲೇಖನದ ಉದ್ದೇಶ.

ಕನ್ನಡ ವಿಷಯ ವಿಶ್ವಕೋಶದಲ್ಲಿ ಕೊಡಗಿನ ಜನಪದ ನೃತ್ಯಗಳ ಬಗ್ಗೆ ಪ್ರಸ್ತಾಪಿಸುತ್ತಾ, ಉಮ್ಮತ್ತಾಟ್, ಬೊಳ್‌ಕಾಟ್, ಪರಿಯಕಳಿ, ಹುತ್ತರಿ ಕೋಲಾಟಗಳನ್ನು ಮಾತ್ರ ಉದಾಹರಿಸಿದ್ದಾರೆ. ಉಮ್ಮತ್ತಾಟ್ ಮತ್ತು ಬೊಳ್‌ಕಾಟ್‌ಗಳ ಬಗ್ಗೆ ಸ್ವಲ್ಪ ವಿವರಣೆ ದೊರೆಯುತ್ತದೆ.

"ಬೊಳ್‌ಕಾಟ್, ಕೊಂಬಾಟ್, ವಾಲಗತ್ತಾಟ್, ಪೀಲಿಯಾಟ್, ಕೋಲಾಟ್, ಚೌರಿಯಾಟ್, ಚೂಳಿಯಾಟ್, ರೆಕ್ಕೆಯಾಟ್, ಕೋಲ್‌ಕಳಿ, ಪರಿಯಕಳಿ, ಪಡೆಕಳಿ, ಕಪ್ಪೆಯಾಟ್, ಪಾಂಬಾಟ್ ಮುಂತಾದ ಕೊಡವ ಪುರುಷರ ಕುಣಿತಗಳು ; ಉಮ್ಮತ್ತಾಟ್, ತಳಿಯತ್ತಾಟ್, ಕುಮ್ಮಚ್ಚಿಯಾಟ್, ಮೊದಲಾದ ಕುಡಿಯ ಮತ್ತು ಕೊಡವ ಮಹಿಳೆಯರ

ಕುಣಿತಗಳು ; ಯರವ ಗಂಡಸರ ಯರವಾಟ್, ಯರವ ಹೆಂಗಸರ ಮಂದಿಯಾಟ್, ಕುರುಬ ಗಂಡಸರ ಸುಗ್ಗಿಯ ಕುಣಿತ, ಕೋಲಾಟ, ಗಾಣಿಗ ಗಂಡಸರ ಕುಣಿತ, ಪಣಿಯ ಗಂಡಸರ ಕುಣಿತ, ಜೋಗಿ ಕುಣಿತ" ಗಳನ್ನು ಗುರ್ತಿಸಬಹುದಾಗಿದೆ.[1] ಇವುಗಳಲ್ಲದೆ ಕೊಡವ ಮಾಪಿಳ್ಳೆಯವರ "ದಪ್ಪುರಾವತೆ" (ಕುಣಿತ) ಜಮ್ಮ ಕೊಡವರ ಸುಗ್ಗಿಯ ಕುಣಿತ, ಮಲೆಯರ ಮತ್ತು ಪಣಿಕರ ಭೂತ ಕುಣಿತ. ಪೂಜಾಕುಣಿತಗಳನ್ನು ಸೇರಿಸಿಕೊಳ್ಳಬಹುದಾಗಿದೆ. ಅಂದರೆ ಕೊಡವ ಭಾಷಾ ಪ್ರದೇಶವೊಂದರಲ್ಲೇ ಇಪ್ಪತ್ತೆಂಟು ಬಗೆಯ ನೃತ್ಯ ವಿಶೇಷಗಳನ್ನು ಗುರ್ತಿಸಬಹುದಾಗಿದೆ. ಶ್ರೀಮತಿ ತುಳಸಿದೇವಿಯವರ ಪ್ರಕಾರ "ಉಮ್ಮತ್ತಾಟ್ ಮೂಲ ಜಾನಪದ ನೃತ್ಯವಲ್ಲ ಎಂದರೂ, ಈಗ ಅದು ಅತ್ಯಂತ ಜನಪ್ರಿಯ ನೃತ್ಯವಾಗಿರುವುದರಿಂದ ಅದನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಈ ಇಪ್ಪತ್ತೆಂಟು ನೃತ್ಯಗಳೂ ಇಂದು ಜೀವಂತವಾಗಿಲ್ಲ ಅವುಗಳಲ್ಲಿ ಕೇವಲ ಹೆಸರು ಮಾತ್ರ ಉಳಿದು ನೃತ್ಯವಿಧಾನ ಮರೆಯಾಗಿರುವ ನೃತ್ಯಗಳು ಬಹಳ.

ಈ ಲೇಖನದಲ್ಲಿ ಇಂದು ಜನ ಸಮುದಾಯದಲ್ಲಿ ಉಳಿದಿರುವ ನೃತ್ಯಗಳನ್ನು ಕುರಿತು ಮಾತ್ರ ವಿವರಿಸಲು ಯತ್ನಿಸಿದೆ.

**ಉಮ್ಮತಾಟ್:**

ಇದು ಮಹಿಳೆಯರ ನೃತ್ಯ. ಅಮೃತ ಹಂಚುವ ಸಮಯದಲ್ಲಿ ವಿಷ್ಣು-ಮೋಹಿನಿಯಾಗಿ ದೈತ್ಯರಿಗೆ ವಂಚಿಸಲು 'ಉಮೆಯ ಲಾಸ್ಯ'ವನ್ನು ನೃತ್ಯವನ್ನಾಗಿಸಿ ಅಸುರರನ್ನು ಆಕರ್ಷಿಸಿ -ಅಮೃತ ಹಂಚಿದನಂತೆ.

ಆ ನೃತ್ಯದ ರೂಪವೇ ಉಮ್ಮತ್ತಾಟ್ ಎಂಬುದು ಹಿರಿಯರ ಹೇಳಿಕೆ.

ಸೌಂದರ್ಯವತಿಯರು ಜರಿಯ ಅಂಚಿನ ಸೀರೆಯನ್ನು ಕೊಡವ ಪದ್ಧತಿಯಂತೆ ಬೆನ್ನ ಮೇಲೆ ಸೆರಗಿನ ಕುಚ್ಚು ಬರುವಂತೆ ಉಟ್ಟು, ಚಿನ್ನದ ಆಭರಣಗಳನ್ನು ಧರಿಸಿ, ಹಣೆಗೆ ಕುಂಕುಮವಿಟ್ಟು, ಮಣಿಮಾಲೆಯನ್ನು ವಕ್ಷಪ್ರದೇಶದ ಸೊಬಗು ಹೆಚ್ಚುವಂತೆ ಧರಿಸಿ, ಕೆಂಪು ವಸ್ತ್ರದಿಂದ ತಲೆಯನ್ನು ಕಟ್ಟಿ, ಕೈಗಳಲ್ಲಿ ಕಂಚಿನ ತಾಳಗಳನ್ನು ಹಿಡಿದು, ಬಳೆಯ ಝೇಂಕಾರಕ್ಕೆ ತಾಳದ ಶಬ್ದವನ್ನು ಸೇರಿಸುತ್ತಾ, ಬೆಳಗುತ್ತಿರುವ ದೀಪಸ್ತಂಭದ ಸುತ್ತಾ ಪ್ರದಕ್ಷಿಣಾಕಾರದಲ್ಲಿ ಗೆಜ್ಜೆಯ ನಾದದೊಡನೆ ಹೆಜ್ಜೆಯನ್ನು ಸಮೀಕರಿಸಿ, ನಡೆಸುವ ಈ ನೃತ್ಯ ನಯನ ಮನೋಹರ.

ಸಾಮಾನ್ಯವಾಗಿ ಹಾಡುವ ಕಲಾವಿದೆ, ನರ್ತನಗೈಯುವ ಕಲಾವಿದರಿಂದ ದೂರ ನಿಂತು ಹಾಡುತ್ತಾಳೆ. ಜೊತೆಗೂಡುವಂತೆ ಎಷ್ಟು ಜನರಾದರೂ ನೃತ್ಯದಲ್ಲಿ ಭಾಗವಹಿಸಬಹುದು. ಪ್ರತಿ ಹಾಡಿಗೂ ಕುಣಿಯುವ ಗತ್ತು - ಭಂಗಿಗಳು ವ್ಯತ್ಯಾಸಗೊಳ್ಳುತ್ತವೆ. ಒಮ್ಮೆ ತಮ್ಮಷ್ಟಕ್ಕೇ ತಾಳ ಹಾಕುತ್ತಾ ಹೆಜ್ಜೆ, ಹಾಕಿ, ಹಿಂದೆಮುಂದೆ ಬಳುಕಿದರೆ ; ಮತ್ತೊಮ್ಮೆ ಇಬ್ಬಿಬ್ಬರು ಎದುರಾಗಿ ತಾಳಕೊಡುತ್ತಾರೆ. ಇನ್ನೊಮ್ಮೆ

---

1. ಕೊಡಗಿನ ತುಳಸಿದೇವಿ ವಿರಾಜಪೇಟೆಯ ತಾಲ್ಲೋಕು ದರ್ಶನ.

ಎಡಕ್ಕೊಮ್ಮೆ ಬಲಕ್ಕೊಮ್ಮೆ ತಿರುಗಿ ಎದುರು- ಬದುರು ತಾಳ ಕೊಡುತ್ತಾರೆ. ಕೆಲವೊಮ್ಮೆ ಕೆಲವರು ಕುಳಿತು, ಮತ್ತೆ ಕೆಲವರು ನಿಂತು ತಾಳ ಕೊಡುತ್ತಾರೆ. ಯಾವ ಭಂಗಿಯಲ್ಲಿದ್ದರೂ ಚಲನೆ ವೃತ್ತಾಕಾರದಲ್ಲಿ ಸಾಗುತ್ತಲೇ ಇರುತ್ತದೆ. ತಾಳದ ಗತಿ ತ್ವರಿತವಾದಾಗ ಮಾತ್ರ ಕಲಾವಿದರ ಚಲನೆಯೂ ತ್ವರಿತಗೊಂಡು ಕುಣಿತದ ಆಕರ್ಷಣೆ ಮತ್ತಷ್ಟು ಹೆಚ್ಚುತ್ತದೆ. ಈ ನೃತ್ಯದಲ್ಲಿ ಸುಮಾರು ಏಳು ಬಗೆಯ ತಾಳವೈವಿಧ್ಯವನ್ನು ಗುರ್ತಿಸಬಹುದಾಗಿದೆ.

'ಕಾವೇರಮ್ಮ ದೇವಿ ತಾಯಿ ಕಾಪಾಡೆಂಗಳಾ' ಎಂಬ ಪ್ರಾರ್ಥನೆಯೊಡನೆ ಪ್ರಾರಂಭವಾಗುವ ನೃತ್ಯಗೀತೆ,'ಬಂದಾರಾ ಬಂದ್ ಕೆಲ್ಲಾ' ಎಂದು ಅತಿಥಿ ಸತ್ಕಾರವನ್ನು ಕುರಿತು 'ಲೇ ಲೋ ಲೇ ಲೋ ಲೆ ಲ್ಲಾ ' ಎಂದು ನೃತ್ಯದ ಲಯವನ್ನು ಕುರಿತು, 'ತೇನಾ ತೇನಾ ತೇನುಂಡಾ ತೇನ ' ಎಂಬುದಾಗಿ ಪ್ರಕೃತಿಯನ್ನು ಕುರಿತು ಮುಂದುವರಿದು 'ನಮೋ ನಮಸ್ತೆ ನಮೋ ನಮೋ ' ಎಂಬುದಾಗಿ ನೃತ್ಯದ ವೀಕ್ಷಕರಿಗೆ ವಂದನೆ ಸಲ್ಲಿಸಿ ಕಡೆಗೆ 'ಮಂಗಳಂ ಜಯ ಮಂಗಳಂ' ಎಂಬುದಾಗಿ ಕಾವೇರಿ ಮಾತೆಯ ಮಂಗಳ ಸ್ತುತಿಯೊಡನೆ ಮುಕ್ತಾಯಗೊಳ್ಳುತ್ತದೆ.

ಭರತ ನಾಟ್ಯ ಅಥವಾ ಕಥಕ್ಕಳಿ ಕಲಾವಿದೆಯರಂತೆ ಉಮ್ಮತ್ತಾಟದ ಕಲಾವಿದೆಯರು ಸಂಪೂರ್ಣವಾಗಿ ಜರಿ ಹಾಗೂ ಚಿನ್ನಾದಾಭರಣಗಳಿಂದ ಅಲಂಕೃತರಾಗಿರುತ್ತಾರೆ. ಅವರುಗಳು ನಿಲ್ಲುವ ನಿಲುವು, ಹಾಕುವ ತಾಳದ ಗತ್ತು, ಹೆಜ್ಜೆಯ ಗಾಂಭೀರ್ಯಗಳೂ ಸಹ ಶಿಷ್ಟ ಸಂಪ್ರದಾಯಕ್ಕೆ ಹತ್ತಿರವಾಗುತ್ತದೆ.

ಶಿಷ್ಟ ಹಾಗೂ ಜನಪದಗಳ ಸುಂದರ ಸಂಲಗ್ನವನ್ನು ನಾವು ಉಮ್ಮತ್ತಾಟ್‌ನಲ್ಲಿ ಗುರ್ತಿಸಬಹುದಾಗಿದೆ. ಹೀಗೆ ವೇಷ, ಭೂಷಣ, ಗತ್ತು - ಗಾಂಭೀರ್ಯ, ತಾಳ - ಲಯಗಳಲ್ಲಿ ಶಿಷ್ಟ ಸಂಪ್ರದಾಯಕ್ಕೆ ಹತ್ತಿರವಾದರೂ, ಹಾಡುವ ಹಾಡು, ಆ ಹಾಡುಗಳ ಮೂಲಾಶಯ (motif) ಮತ್ತು ನೃತ್ಯದಲ್ಲಿನ ಸರಳತೆಗಳು ಜನಪದಕ್ಕೆ ಹತ್ತಿರವಾದುವು. ಶಿಷ್ಟಕಲೆಯಲ್ಲಿನ ಸಂಕೀರ್ಣತೆ ಇದರಲ್ಲಿ ಇಲ್ಲದಿರುವುದೇ ಮುಖ್ಯವಾಗಿ ಇದನ್ನು ಜನಪದ ನೃತ್ಯವನ್ನಾಗಿ ಉಳಿಸಿದೆ.

**ಬೊಳ್‌ಕಾಟ್:**

ಬೊಳಕ್ ಎಂದರೆ ಬೆಳಕು, ಉಮ್ಮತ್ತಾಟ್ ಅಂತೆಯೇ ಇದು ಸಹ ಕುತ್ತುಂಬೊಳಿಚ (ಉರಿಯುತ್ತಿರುವ ದೀಪಸ್ತಂಭ) ದ ಸುತ್ತಲೂ ಕುಣಿಯುವ ಆಟವಾಗಿದೆ. ವಿಷ್ಣು ಭಸ್ಮಾಸುರನನ್ನು ಸಂಹಾರ ಮಾಡಿದ ಸಮಯದಲ್ಲಿ ಮೂವತ್ತೆರಡು ಬಗೆಯ ನೃತ್ಯಗಳನ್ನು ಪ್ರದರ್ಶಿಸಿದನಂತೆ ಅದರ ಪ್ರತಿರೂಪವೇ ಬೊಳಕಾಟ್ ಎಂಬುದು ಅದರ ಬಗ್ಗೆ ಇರುವ ಐತಿಹ್ಯ. ಕೊಡವರ ವೀರ ನೃತ್ಯಗಳಲ್ಲಿ ಇದು ಪ್ರಮುಖವಾದುದು. ಇದರಲ್ಲಿ ಹದಿನೈದರಿಂದ ಇಪ್ಪತ್ತರ ತನಕ ಕಲಾವಿದರು ಭಾಗವಹಿಸುತ್ತಾರೆ.

ಕಲಾವಿದರು ಕೊಡವರ ವಿಶೇಷ ದಿನದ ಉಡುಪನ್ನು ಧರಿಸಿ ಸೊಂಟದಲ್ಲಿ ಪೀಚೆ ಕತ್ತಿಯನ್ನು ಸಿಕ್ಕಿಸಿ, ಎಡಕೈಯಲ್ಲಿ ಚಾಮರ, ಬಲಕೈಯಲ್ಲಿ ಅಗಲವಾದ ವಡಿ ಕತ್ತಿಯನ್ನು ಹಿಡಿದು ರಂಗಕ್ಕೆ ಇಳಿಯುತ್ತಾರೆ. ಎಲ್ಲರೂ ಬೊಳಕ್ ಸುತ್ತ ವೃತ್ತಾಕಾರದಲ್ಲಿ ನಿಲ್ಲುತ್ತಾರೆ.

ತಂಡದ ನಾಯಕ ಹಾಡಿನೊಂದಿಗೆ ನೃತ್ಯವನ್ನು ಪ್ರಾರಂಭಿಸುತ್ತಾನೆ. ಆಗ ಎಲ್ಲರೂ ಚಾಮರಗಳನ್ನು ಬೀಸುತ್ತಾ ನಾಯಕನನ್ನು ಅನುಸರಿಸುತ್ತಾರೆ. ಕೊಡವರ ವೀರ-ಸಾಹಸಗಳನ್ನು ಕುರಿತ ಅಥವಾ ಕೊಡಗಿನ ಪ್ರಸಿದ್ಧ ಮನೆತನಗಳ ಇತಿಹಾಸವನ್ನು ಹಾಡಾಗಿ ಹಾಡುತ್ತಾರೆ. ಮೇಳ ನಾಯಕ ಕೇಂದ್ರದಲ್ಲಿದ್ದು ಕುಣಿತವನ್ನು ನಿರ್ದೇಶಿಸುತ್ತಾನೆ. ಕುಣಿತಕ್ಕೆ ಸಾಂಪ್ರದಾಯಕ 'ದುಡಿ' ಹಿಮ್ಮೇಳವನ್ನು ಒದಗಿಸುತ್ತದೆ. 'ದುಡಿ' ಯ ಹಿಮ್ಮೇಳದಲ್ಲಿ ಕುಣಿದರೆ ಅದಕ್ಕೆ ಕಪ್ಪೆ ಆಟ ಎನ್ನುತ್ತಾರೆ.

ಸಾಂಪ್ರಾದಾಯಿಕ ವಾದ್ಯ ಸಂಗೀತದ ಹಿಮ್ಮೇಳದಲ್ಲಿ ಕುಣಿದರೆ ಅದು ಬೋಳಕಾಟ್ ಎಂದೆನಿಸುತ್ತದೆ. ಈಗ ಹಿಂದಿನ ಮೂವತ್ತೆರಡು ಬಗೆಯ ನೃತ್ಯಗಳು ಪ್ರಚಾರದಲ್ಲಿಲ್ಲ. ನಮಸ್ತೆಆಟ್, ಚಾರಿಆಟ್, ಕರ್ತಿಆಟ್, ಪೀಚೆಕರ್ತಿಆಟ್, ಕೈಡವುಕ್‌ಆಟ್, ವಾಲಗಿತ್ತಾಟ್ ಮುಂತಾದ ಹದಿನೇಳು ಬಗೆಯ ನೃತ್ಯಗಳು ಚಾಲ್ತಿಯಲ್ಲಿವೆ. ಇದು ಮೂಲತ: ಯುದ್ಧ ನೃತ್ಯವಾದರೂ ಇತ್ತೀಚಿಗೆ ದೇವತಾರಾಧನೆಯ ನೃತ್ಯವಾಗಿ ಪರಿವರ್ತನೆ ಹೊಂದುತ್ತಿದೆ. ಉದಾಹರಣೆಗೆ ಇತ್ತೀಚಿಗೆ ಈ ನೃತ್ಯದ ಸಂದರ್ಭದಲ್ಲಿ ಹಾಡುವ " ತಮ್ಮಾದೇವಿ ದೇವಿ ತಾ ಜಯದೇ ಯೋ ಶಂಭೋ ಮಾದೇವೋ ಜಯಂತೀಯೊ' ಎಂಬ ಹಾಡನ್ನು ಗಮನಿಸಬಹುದಾಗಿದೆ.

**ಚೌರಿ ಆಟ್:**

ಇದನ್ನು ಕೈತಲೆಆಟ್ ಅಥವಾ ಬಿಲ್ಲಾಟ್ ಎಂದೂ ಕರೆಯುತ್ತಾರೆ. ಈ ಕುಣಿತಕ್ಕೆ ಇಂತಿಷ್ಟೇ ಜನರಿರಬೇಕೆಂಬ ನಿಯಮವಿಲ್ಲ.

ಬಿಳಿಯ ಕುಪ್ಪುಸ ತೊಟ್ಟು, ದಟ್ಟಿ ಉಟ್ಟು ತಲೆಗೆ ರುಮಾಲು ಇಟ್ಟು ಕೈಯಲ್ಲಿ ಚೌರಿ ಹಿಡಿದು ಕುಣಿಯುವ ಕಲಾವಿದರಿಗೆ 'ಪರೆ' ಅಥವಾ ಮೇದರ ಡೋಲು ಮತ್ತು ಜಾಗಟೆ ಅಥವಾ ಜಾಗಟೆ ಆಕಾರದ ಕಂಚಿನ ತಟ್ಟೆ - ಹಿಮ್ಮೇಳವನ್ನು ಒದಗಿಸುತ್ತವೆ. ಜಾಗಟೆಯನ್ನು ಒಂದುವರೆ ಅಡಿ ಉದ್ದದ ಕೋಲಿನಿಂದ ತಾಡಿಸುತ್ತಾರೆ. ಜಾಗಟೆಯನ್ನು ಐದಾರು ವಿಧದಲ್ಲಿ ಬಡಿದು ವಿವಿಧ ಶಬ್ಧಗಳನ್ನು ಹೊರಡಿಸುತ್ತಾರೆ. ಅದಕ್ಕೆ ಐದಾರು ಬಗೆಯ ನೃತ್ಯದ ಭಂಗಿಗಳನ್ನು ಈ ಕುಣಿತದಲ್ಲಿ ಗಮನಿಸಬಹುದಾಗಿದೆ.

**ಕೊಂಬಾಟ್ ಮತ್ತು ಪೀಲಿಯಾಟ್:**

ಪ್ರಾಣಿಗಳ ಕೊಂಬನ್ನು ಕೈಯಲ್ಲಿ ಹಿಡಿದು, ಅದನ್ನೇ ಭರ್ಜಿಯಂತೆ ಉಪಯೋಗಿಸಿಕೊಂಡು ವಿವಿಧ ರೀತಿಯಲ್ಲಿ ತಿರುಗಿಸುತ್ತಾ, ತಿವಿಯುವಂತೆ ನಟಿಸುತ್ತಾ ಕುಣಿಯುವ ನೃತ್ಯ. ಇದರಲ್ಲಿ ಮೂರು ರೀತಿಯ ವೈವಿಧ್ಯಗಳನ್ನು ಗಮನಿಸಬಹುದು. ಕೊಂಬಿನ ಬದಲು ನವಿಲುಗರಿಯ ಕಂತೆಗಳನ್ನು ಹಿಡಿದು ಕುಣಿದರೆ ಅದು ಪೀಲಿಯಾಟ್ ಎಂದೆನಿಸುತ್ತದೆ.

ಭಸ್ಮಸುರನ ಸಂಹಾರ ಕಾಲದಲ್ಲಿ ಮೋಹಿನಿ ಪ್ರದರ್ಶಿಸಿದ ಎರಡು ವಿಶೇಷ ನೃತ್ಯಗಳೆಂದು ಇವುಗಳ ಬಗ್ಗೆ ಕತೆ ಪ್ರಚಲಿತವಿದೆ. ಕುಣಿಯುವ ಕಲಾವಿದರು ಬಿಳಿ ಅಥವಾ

ಕಪ್ಪು ಕುಪ್ಪುಸವನ್ನು ಧರಿಸಿ, ಸೊಂಟಕ್ಕೆ ಕೆಂಪು ರೇಷ್ಮೆ ವಸ್ತ್ರವನ್ನು ಸುತ್ತಿ, ತಲೆಯ ಮೇಲೆ ರುಮಾಲನ್ನು ಇಟ್ಟು ಅಂಲಕೃತರಾಗಿರುತ್ತಾರೆ.

ಮೇದರ ಗಂಟೆಯ ನಾದದ ಹಿಮ್ಮೇಳದಲ್ಲಿ ಸಣ್ಣ ಚೌರಿ ಮತ್ತು ಸಣ್ಣ ಕೊಂಬುಗಳನ್ನು ಹಿಡಿದು ಕುಣಿಯುವುದಕ್ಕೆ ಬಿಲ್ಲಾಟ್ ಎನ್ನುತ್ತಾರೆ. ಈ ನೃತ್ಯಗಳನ್ನು ಸಾಮಾನ್ಯವಾಗಿ ದೇವತಾರಾಧನೆಯ ಸಂದರ್ಭದಲ್ಲಿ ಪ್ರದರ್ಶಿಸುತ್ತಾರೆ.

ಈ ನೃತ್ಯಗಳಲ್ಲಿ ಭಾಗವಹಿಸುವ ಕಲಾವಿದರು ವ್ರತನಿಷ್ಠರಾಗಿರುತ್ತಾರೆ. ಇವರನ್ನು 'ಕರಿಬೊಟ್ಟು ಹಾಕಿದವರು' ಎನ್ನುತ್ತಾರೆ. (ದೇವಾಲಯದ ಮುಂಭಾಗದಲ್ಲಿ ದೇವರ ಮಂಗಳಾರತಿಯನ್ನು ಇಡುವ ಸ್ಥಳದಿಂದ ಕಪ್ಪನ್ನು ತೆಗೆದು ಹಣೆಗೆ ಹಚ್ಚಿಕೊಂಡು ಇಷ್ಟು ದಿನಗಳವರೆಗೆ ಮಾಂಸಾಹಾರ, ಮದ್ಯಪಾನ, ಸ್ತ್ರೀ ಸಂಗ ಮಾಡುವುದಿಲ್ಲವೆಂದು ವ್ರತ ಹಿಡಿದವರು. ಈ ನೃತ್ಯಗಳ ಹಿಮ್ಮೇಳವಾಗಿ ಬಳಸುವ ಡೋಲಿಗೆ ಪಡುವತ್ ಮಣಿ ಎನ್ನುತ್ತಾರೆ. ಇದನ್ನು ನುಡಿಸುವವರನ್ನೂ ಸಹ ಪಡುವತ್‌ಮಣಿಗಳೆಂದು ಸಂಭೋದಿಸುತ್ತಾರೆ. ಇವರು ಸಾಮಾನ್ಯವಾಗಿ ಮೇದರ ಜಾತಿಗೆ ಸೇರಿದವರು. ಇವರು ವಂಶ ಪಾರಂಪರ್ಯವಾಗಿ ಈ ವೃತ್ತಿಯನ್ನು ಅನುಸರಿಸುತ್ತಾ ಬಂದವರು.

ಒಂದೊಂದು ನೃತ್ಯಕ್ಕೆ ಬೇರೆ ಬೇರೆಯಾದ ತಾಳಲಯಗಳನ್ನು ಹೊಂದಿಸುತ್ತಾ ಹೋದಂತೆ, ನೃತ್ಯ ಮಾಡುವವರು ಹೆಜ್ಜೆಯ ದಿಕ್ಕು, ಹಾಗೂ ವೇಗಗಳನ್ನು ಹೆಚ್ಚು-ಕಡಿಮೆ ಮಾಡುತ್ತಾ ಲಯಬದ್ಧವಾಗಿ ಕುಣಿಯುತ್ತಾರೆ.

ಕರಿಬೊಟ್ಟು ಹಾಕಿದವರಲ್ಲೇ ಕೆಲವರು ದೇವತೆಯನ್ನು ಕುರಿತ ಸ್ತುತಿ ಪದ್ಯವನ್ನು ಲಾವಣಿ ಧಾಟಿಯಲ್ಲಿ ಹಾಡುತ್ತಾ ಜೊತೆಗೆ ದುಡಿ ಬಾರಿಸುತ್ತಾ ಇರುತ್ತಾರೆ.

**ಪರಿಯ ಕಳಿ:**

ಇದು ಯುದ್ಧದ ಅಣಕು ನೃತ್ಯ. ಇದು ಕೋಲಾಟದ ಮುಂದಿನ ಹೆಜ್ಜೆ. ಇದರಲ್ಲಿ ಭಾಗವಹಿಸುವ ಕಲಾವಿದರು ಕೋಲಾಟದ ಕಲಾವಿದರಂತೆಯೇ ಸಂಪ್ರದಾಯದ ಉಡುಪಿನಿಂದ ಅಲಂಕೃತರಾಗಿರುತ್ತಾರೆ. ಕೋಲಾಟಕ್ಕೆ ಬಳಸುವ ಬೆತ್ತಗಳನ್ನೇ ಇಲ್ಲೂ ಬಳಸುತ್ತಾರೆ.

ಪರಿಯ ಕಳಿಯಲಿ ಎರಡು ಕೈಗಳಲ್ಲೂ ಐದಾರು ಅಡಿಗಳ ಬೆತ್ತವನ್ನು ಹಿಡಿದು ಒಂದನ್ನು ಹೊಡೆಯಲು ಮತ್ತೊಂದನ್ನು ಎದುರಾಳಿಯ ಹೊಡೆತವನ್ನು ತಡೆಯಲು ಬಳಸುತ್ತಾರೆ. ಇದು ಸಮೂಹ ನೃತ್ಯ. ಮೊಳಕಾಲ ಕೆಳಗೆ ಹೊಡೆಯಬಾರದೆಂಬ ನಿಯಮವಿದೆ. ಕುಣಿತ ನಿಲ್ಲತಕ್ಕದೆಂದು ಗೊತ್ತಾದಾಗ ಮೇದ 'ಪರೆ' ಹೊಡೆಯುತ್ತಾನೆ.

ತಟ್ಟೆ ಪರಿಯ ಕಳಿಯಲ್ಲಿ ಇಬ್ಬರು ಮಾತ್ರ ಭಾಗವಹಿಸುತ್ತಾರೆ. ಹೊಡೆತವನ್ನು ತಡೆಯಲು ಕೋಲಿನ ಬದಲು ಬಿದಿರಿನ ಗುರಾಣಿಯನ್ನು ಬಳಸುತ್ತಾರೆ. ಉಳಿದಂತೆ ಪರಿಯಕಳಿಯ ಎಲ್ಲ ನಿಯಮಗಳೂ ಇದಕ್ಕೂ ಅನ್ವಯವಾಗುತ್ತದೆ. ಯಾರಿಗೆ ತಟ್ಟೆ ಪರಿಯ ಕಳಿಗೆ ಭಾಗವಹಿಸಲು ಇಷ್ಟ, ಧೈರ್ಯ, ಶಕ್ತಿ ಇದೆಯೋ ಆತ

'ನಾ ಬಾಳ್; ನೀ ಬಾಳ್
ಎಡಕೊಡೆ ಇಳಿವ ಚಂಜ್ಞಾದಿಬಾಳ್
ಇಗ್ಗುತಪ್ಪ ಬಾಳ್
ಬಯತೂರಪ್ಪಬಾಳ್

ಬಾಳ್ ಬಾಳಿರೆ ಬಾಳ್'' ಎನ್ನುತ್ತಾ ಪ್ರತಿಸ್ಪರ್ಧಿಯನ್ನು ಆಹ್ವಾನಿಸುತ್ತಾನೆ. ಆಗ ಆತನ ಜೊತೆ ಸ್ಪರ್ಧಿಸಲು ಬಯಸುವವನು ಇದೇ ರೀತಿ ಉಚ್ಚರಿಸಿ ಹೋರಾಟ ಪ್ರಾರಂಭಿಸುತ್ತಾನೆ.

**ಹುತ್ತರಿ ಕುಣಿತ:**

ಪುತ್ತರಿ ಹಬ್ಬದ ಅಂಗವಾಗಿ ಊರಿನ ದೇವಸ್ಥಾನದ ಮಂದ್‌ನಲ್ಲಿ ಒಂದು ವಾರ ಕೋಲಾಟ ನಡೆಯುತ್ತಿತ್ತು. ಹಬ್ಬಕ್ಕೆ ನಾಲ್ಕೈದು ದಿನಗಳ ಮೊದಲು ಗ್ರಾಮದ ಯುವಕರೂ, ಹಿರಿಯರೂ ಗ್ರಾಮದ ಮಂದ್‌ನಲ್ಲಿ ಸೇರಿ ಕೋಲಾಟದ ಅಭ್ಯಾಸವನ್ನು ನಡೆಸುತ್ತಾರೆ. ಇದಕ್ಕೆ 'ಈದ್' ಎಂದು ಹೆಸರು. ಕಲೆಗಾರರು ವಾದ್ಯಗಾರರೊಂದಿಗೆ 'ಈದ್' ಗೆ ಬಂದಾಗ

'ಬಾಳ್ ಬಾಳೀನ್ನಡ ಜಬ್ಬೂಮಿ ಬಾಳೋ
ಜಬ್ಬೂಮಿ ಮೀದಲ್ ಪೂಮಂದ್ ಬಾಳೋ
ಪೂಮಂದ್ ಮೀದಲ್ ದೇವಯ್ಯ ಬಾಳೋ
ದೇವಂ ಗೊತ್ತಾ ಚಾರ ಪಾಡಿಚೊ ನಂಗ
ಆಚಾರ ಪಾಡಿತ್ ಪಾಟ್ ಬೆಕ್ಕನ ಎಂಗ'

[ಒಳ್ಳೆಯ ಭೂಮಿಯ ಮೇಲೆ ಒಳ್ಳೆಯ ಜೀವನ ಮಾಡು ಒಳ್ಳೆಯ ಭೂಮಿಯ ಮೇಲೆ ದೇವಯ್ಯ ನೀನು ಬಾಳು ದೇವರಿಗೆ ಒಪ್ಪುವಂಥ ಆಚಾರ ವಿಚಾರಗಳನ್ನು ನಾವು ಹಾಡುವೆವು] ಎಂದು ಹಾಡಿ ನಿಲ್ಲಿಸುತ್ತಾರೆ ವಾದ್ಯಗಾರರು. ಆಗ ಪೊಯಿಲೇ ಪೊಯಿಲೇ ಎಂಬ ಪಲ್ಲವಿಯೊಂದಿಗೆ ಕುಣಿತ ಪ್ರಾರಂಭವಾಗುತ್ತದೆ. ಈ ಹಾಡುಗಳಲ್ಲಿ ದೇವರ ಆಶೀರ್ವಾದವನ್ನು ಬೇಡುವ ; ವಾದ್ಯಗಾರರಿಗೂ, ನೃತ್ಯದವರಿಗೂ ಸಲಹೆಗಳನ್ನು ಕೊಡುವ ; ಸರಸ ಹಾಗೂ ಹಾಸ್ಯ ಪ್ರಸಂಗಗಳು ನಿರೂಪಿತವಾಗುತ್ತವೆ.

ಒಂದನೆ ಸುತ್ತಿನಲ್ಲಿ ಕೈಯಲ್ಲಿ ಕೋಲು ಹಿಡಿದು, ಎರಡೂ ಕೈಗಳನ್ನೂ ವಿಶಾಲವಾಗಿ ಚಾಚುವರು. ಬಲ ಹಾಗೂ ಎಡಕಾಲುಗಳನ್ನು ಲಘು ನೃತ್ಯಗತಿಯಲ್ಲಿ ಚಲಿಸಿ, ದೇಹದ ಬಳುಕನ್ನು ಲಲಿತವಾಗಿ ತೋರಿ, ಒಮ್ಮೆ ಮುಂದೆ, ಒಮ್ಮೆ ಹಿಂದೆ, ಒಮ್ಮೆ ಪಾರ್ಶ್ವ ಹೀಗೆ ಹೆಜ್ಜೆ ಹಾಕುತ್ತಾ ವೃತ್ತಾಕಾರದಲ್ಲಿ ಚಲಿಸುವರು.

ಎರಡನೆ ಸುತ್ತಿನಲ್ಲಿ ಪರಸ್ಪರರ ಕೋಲುಗಳ ಬಡಿತ ಶುರುವಾಗುತ್ತದೆ. ಪಾರ್ಶ್ವಕ್ಕೆ ಮುಂಬದಿಗೆ, ಮೇಲ್ಬದಿಗೆ ಕೋಲು ಹೊಡೆಯುತ್ತಾರೆ. ಇದು ತುಸು ವಿರಾಮದ ಹೊಡೆತ.

ಮೂರನೆಯ ಸುತ್ತಿನಲ್ಲಿ ಮುಂಬದಿ ಮತ್ತು ಹಿಂಬದಿಯ ಕೋಲುಗಾರರಿಗೆ ಕೋಲು ತಾಗಿಸಿಕೊಡುತ್ತಾರೆ. ಅದಕ್ಕೆ ಅನುಗುಣವಾಗಿ ಪದಗತಿಯಲ್ಲಿ ತಿರುವು ತೋರುತ್ತಾರೆ. ಪಕ್ಕಕ್ಕೆ ಹೊರಳಿ ಎಡಕೈಯಲ್ಲಿ ಮುಂದಿನವರಿಗೆ, ಬಲಕೈಯಲ್ಲಿ ಹಿಂದಿನವರಿಗೆ ಕೋಲು ಕೊಡುತ್ತಾರೆ. ಎದುರು-ಬದುರಾಗಿ, ಹಿಂದಿನವರೊಡನೆ ಒಂದು ಬಾರಿ, ಮುಂದಿನವರೊಡನೆ ಒಂದು ಬಾರಿ ಕೋಲು ಕೊಡುತ್ತಾ ಕ್ರಮ ಕ್ರಮವಾಗಿ ವೇಗವನ್ನು ಹೆಚ್ಚಿಸುತ್ತಾ ಹೋಗುತ್ತಾರೆ.

ನಾಲ್ಕನೆ ಸುತ್ತಿನ ಕೋಲಾಟದಲ್ಲಿ ಚೈತನ್ಯದ ಬುಗ್ಗೆಯಂತೆ ಇಬ್ಬಿಬ್ಬರು, ನಾಲ್ವರು ನಾಲ್ವರು ಪರಸ್ಪರ ಕೋಲು ಕೊಡುತ್ತಾ ವೃತ್ತಾಕಾರದಲ್ಲಿ ಚಲಿಸುವ ವ್ಯಕ್ತಿಗಳಲ್ಲಿ ತರುಣರ ಕೈ ಚುರುಕು ಎದ್ದು ಕಾಣುತ್ತದೆ. ಹೀಗೆ ಸಾಗುತ್ತಾ ಕ್ರಮೇಣ ವೇಗ ತಗ್ಗಿಸಿ ನಿಲುಗಡೆಗೆ ಬರುತ್ತಾರೆ.

ಈ ನೃತ್ಯಗಳಿಗೆ ವಾಲಗ ಹಾಗೂ ಡೋಲು ಹಿಮ್ಮೇಳವಾಗಿರುತ್ತವೆ.

ಕೊಟ್ಟಡಾ ಮೇದ, ನೀ ಊದ್ ಪೋಲೆಯಾ
ಪೊಯಿಲೇ ಪೊಯಿಲೇ

ಎಂದು ಪ್ರಾರಂಭವಾಗುವ ಹುತ್ತರಿ ಕೋಲಾಟದ ಹಾಡು ಮೂಡ್ ನೋವೇತ್ ಮರುಳಾತೆ ಬಾಲ ಪೊಯಿಲೇ ಪೊಯಿಲೇ ಮೂಡ್ ಬೊಳ್‌ತಂಡ್ ಒಳಲುಂಡ್ ಕಪ್ಪು ಪೊಯಿಲೇ ಪೋಯಿಲೇ ಎಂದು ಬುದ್ಧಿ ಮಾತನ್ನು ಯುವಕರಿಗೆ ಹೇಳುತ್ತಾ ಆಡುವ ಬಾಲಂಡ ಕಾಲೊಂದ್ ಚೊಟ್ಟಿ

ನೋಟುವ ಪೊಂಗಡ ಕಣ್ಣೊಂದ್ ಚೊಟ್ ಎಂದು ಹಾಸ್ಯ ಮಾಡುತ್ತಾ ಮುಂದುವರಿಯುತ್ತದೆ.

ಕಡೆಗೆ ಬಪ್ಪಕ ಪುತ್ತರಿ ಬಣ್ಣತ್ ಬಾತ್
ಪೋಪಕ ಪುತ್ತರಿ ಎಣ್ಣೆತೆ ಪೋತೆ
ದಮ್ಮಯ್ಯ ಪುತ್ತರಿ ಒಮ್ಮಲ್ಲಿ ಪೋತ್

ಎನ್ನುವ ವಿರಹದ ನೋವಿನಲ್ಲಿ ಮುಕ್ತಾಯಗೊಳ್ಳುತ್ತದೆ. ಕೊಡವರ ಕುಣಿತಗಳಲ್ಲೆಲ್ಲಾ ಹುತ್ತರಿ ಕೋಲಾಟ ಅತ್ಯಂತ ಉಲ್ಲಾಸಮಯವೂ, ಸುಂದರವೂ ಆದುದು. ಉಮ್ಮತ್ತಾಟ್‌ನಲ್ಲಿ ಗಮನಿಸಿದಂತೆ ಇಲ್ಲಿಯೂ ಶಿಷ್ಟ ಹಾಗೂ ಜಾನಪದಗಳ ಸುಂದರ ಸಂಗಮವನ್ನು ಗುರ್ತಿಸಬಹುದಾಗಿದೆ.

ಕುರುಬರ ಕೋಲಾಟದ ವೇಗ ಮತ್ತು ಚುರುಕು ಇಲ್ಲಿ ಕಾಣದಿದ್ದರೂ, ಪ್ರಾರಂಭದಿಂದ ಕಡೆಯವರಿಗೂ ಸಂಯಮ ಪೂರ್ಣವಾದ ಶಿಸ್ತಿನ ನಡಗೆಯನ್ನು ಗಮನಿಸಬಹುದು. ಇದು ಸುಗ್ಗಿಯ ಕುಣಿತವಾದರೂ, ದೇವಸ್ಥಾನದ ಮಂದ್‌ನಲ್ಲಿ ಸಾಕಷ್ಟು ಭಯ- ಭಕ್ತಿ-ಶ್ರದ್ಧೆಗಳಿಂದಲೇ ನಡೆಸುವ ಈ ನೃತ್ಯದಲ್ಲಿ ದೇವತಾರಾಧನೆಯ ಭಾವವನ್ನು ಕಾಣಬಹುದಾಗಿದೆ.

**ಯರವರ ಕುಣಿತ :**

ಎರವರಲ್ಲೂ ಸುಗ್ಗಿಯ ಕುಣಿತವಿದೆ. ಇದನ್ನು ಅವರು ಎರಕದ ಕುಣಿತವೆನ್ನುತ್ತಾರೆ. ಅವರ ಕುಣಿತಕ್ಕೆ ಯಾವ ಜಾಗವಾದರೂ, ಯಾವ ದಿನವಾದರೂ ಸರಿ. (ಅಂದರೆ ಸುಗ್ಗಿಯೇ ಬರಬೇಕು ಎಂದಿಲ್ಲ) ಸಾಮಾನ್ಯವಾಗಿ ಅವರು ವಾಸಮಾಡುವ ಜಾಗದಲ್ಲಿ ಪ್ರತಿದಿನ ರಾತ್ರಿ ಬೆಂಕಿಯ ಸುತ್ತ ಕುಣಿಯುವುದು ಸಾಮಾನ್ಯ ದೃಶ್ಯ. ಹಿರಿಯ-ಕಿರಿಯರೆನ್ನುವ ; ಹೆಣ್ಣು - ಗಂಡೆನ್ನುವ ಯಾವ ಅಡ್ಡಿ ಆತಂಕಗಳು ಇಲ್ಲದೆ ಕುಣಿಯುವ ಮನಸ್ಸಿರುವ , ಕುಣಿಯುವ ತಾಕತ್ತಿರುವ ಎಲ್ಲರೂ ಕುಣಿತದಲ್ಲಿ ಪಾಲ್ಗೊಳ್ಳುತ್ತಾರೆ. ಕುಣಿತಕ್ಕೆ ವೇಷಭೂಷಣಗಳ, ತಿಥಿ-ವಾರ-ನಕ್ಷತ್ರಗಳ ನಿಯಮಗಳಾವುವು ಇಲ್ಲ.

ಕುಣಿಯುವ ಸಮಯದಲ್ಲಿ ತಮ್ಮ ಧಣಿಗಳನ್ನು ಛೇಡಿಸುವ - ಹಾಸ್ಯಪ್ರಧಾನವಾದ ಹಾಡುಗಳನ್ನು ಹಾಡುತ್ತಾರೆ.

ಉದಾ:ಬಾ ಬಾಚಿಯಬ್ಬೆ ಬಬ್ಬಾ ಬಾಚಿಯಬೇ
ಪುತ್ತರಿ. ಚತ್ತೆಕು ನಾನೇ ಪೋಣು
ಮಂಗಲ ಚತ್ತೆಕು ನಾನೇ ಪೋಣು
ಕೋಲು ಬೆಟ್ಟುವ ನಾನೇ ಪೋಣು
ಮಾದ ಚತ್ತೆಕು ನಾನೇ ಪೋಣು. ಇತ್ಯಾದಿ.

ಈ ಕುಣಿತಕ್ಕೆ ಹಿಮ್ಮೇಳವಾಗಿ ಎರಡು ಚೀನಿ ವಾದ್ಯ ಮತ್ತು ಎರಡು ದುಡಿಗಳನ್ನು ಬಳಸುತ್ತಾರೆ. ( ಚೀನಿ ಎನ್ನುವುದು ಬಿದಿರಿನ ಊದುವ ವಾದ್ಯ. ಊದುವ ಜಾಗದಲ್ಲಿ ತಾಳೆ ಮಡಿಕೆಯ ಪೀಪಿಯನ್ನು ಸಿಕ್ಕಿಸಿರುತ್ತಾರೆ)

**ಕುರುಬರ ಕೋಲಾಟ:**

ಕುರುಬರು ಎರವರಂತೆಯೇ ತಮ್ಮ ವಾಸಸ್ಥಳದ ಸಮೀಪ ಬೆಂಕಿಯ ಸುತ್ತ, ರಾತ್ರಿಯ ಹೊತ್ತು ಪದ ಹೇಳಿಕೊಂಡು ಕುಣಿಯುತ್ತಾರೆ.

ಸುಮಾರು ಒಂದುವರೆ ಅಡಿಯ ಕೋಲನ್ನು ಅತಿ ಕುಶಲತೆಯಿಂದ ತಿರುಗಿಸುತ್ತಾ, ಕೋಲಿಗೆ ಕೋಲು ಕೊಡುತ್ತಾ, ವೃತ್ತಾಕಾರವಾಗಿ ಚಲಿಸುತ್ತಾ ನಡಿಸುವ ಈ ನೃತ್ಯದಲ್ಲಿ 'ವೇಗ' ಅತ್ಯಂತ ಆಕರ್ಷಕ.

**ಜಮ್ಮ ಕೊಡವರ ನೃತ್ಯ:**

ಕೊಡಗಿನ ಗೌಡರು ಅಥವಾ ಜಮ್ಮ ಕೊಡವರು ಎಂದು ಗುರ್ತಿಸಲ್ಪಡುವ ಇವರು ಏಳು ಸಾವಿರ ಸೀಮೆಯ (ಶನಿವಾರಸಂತೆ) ನಿವಾಸಿಗಳು. ಹುತ್ತರಿಯ ನಂತರ ಹತ್ತು-ಹದಿನೈದು ಜನ ಎರಡೂ ಕೈಗಳಲ್ಲೂ ಬಿಚ್ಚುಗತ್ತಿ (ಬಾಳಗತ್ತಿ) ಗಳನ್ನು ಹಿಡಿದು ವೈವಿಧ್ಯಮಯವಾಗಿ ತಿರುಗಿಸುತ್ತಾ, ಹಿಮ್ಮೇಳದ ಡೋಲಿನ ತಾಳಕ್ಕೆ ಅನುಸಾರವಾಗಿ ನೃತ್ಯ ಮಾಡುತ್ತಾರೆ. ಇದರಲ್ಲಿ ಸುಮಾರು ಆರು ರೀತಿಯ ಒಳ ಪ್ರಭೇದಗಳನ್ನು ಗಮನಿಸಬಹುದಾಗಿದೆ. ಇದನ್ನು ಅವರು ಸುಗ್ಗಿಯ ಕುಣಿತವೆನ್ನುತ್ತಾರೆ. ಆದರೆ ಇದರಲ್ಲಿ ಪ್ರಾಚೀನ ಯುದ್ಧದ ವೀರ-ಶೌರ್ಯಗಳು ಹಾಗೂ ಕತ್ತಿಯ ವರಸೆಗಳು ಪ್ರತಿಬಿಂಬಿತವಾಗುವುದರಿಂದ ಇದನ್ನು ಯುದ್ಧ ನೃತ್ಯದ ಗುಂಪಿಗೆ ಸೇರಿಸಬಹುದಾಗಿದೆ.

**ದಪ್ಪುರಾವತಿ:**

ಹಿಂದೆ ಕೊಡವರೇ ಆಗಿದ್ದು- ಟಿಪ್ಪುವಿನ ಕಾಲದಲ್ಲಿ ಬಲಾತ್ಕಾರದ ಮತಾಂತರಕ್ಕೆ ಗುರಿಯಾದ ಕೊಡವ ಮಾಪಿಳ್ಳೆ ಜನಾಂಗ ತಮ್ಮ ದೇವತಾರಾಧನೆಯ ಅಂಗವಾಗಿ, ಕಂಜರವನ್ನು ಹೋಲುವ 'ದಪ್ಪು' ವೆನ್ನುವ ಚರ್ಮದ ವಾದ್ಯವನ್ನು ಕೈಯಲ್ಲಿ ತಟ್ಟುತ್ತಾ, ಮಲೆಯಾಳಿ ಭಾಷೆಯ ಹಾಡನ್ನು ಹಾಡುತ್ತಾ ವಿಶಿಷ್ಟವಾದ ನರ್ತನವನ್ನು ಪ್ರದರ್ಶಿಸುತ್ತಾರೆ. 'ದಪ್ಪು'ವನ್ನು ವಿವಿಧ ರೀತಿಯಲ್ಲಿ ತಿರುಗಿಸುತ್ತಾ, ಒಮ್ಮೊಮ್ಮೆ ಬಹು ಮಂದವಾಗಿ, ಕೆಲವೊಮ್ಮೆ ಬಹು ತೀವ್ರವಾಗಿ ಕುಣಿಯುತ್ತಾರೆ.

## ಭೂತದ ಕುಣಿತ:

ಕೊಡಗಿನ ನಿವಾಸಿಗಳಾಗಿರುವ ಮಲೆಯರು ಮತ್ತು ಪಣಿಯರು ದಕ್ಷಿಣ ಕನ್ನಡದ ಭೂತಾರಾಧನೆಯನ್ನು ಕೊಡಗಿಗೆ ತಂದಿದ್ದಾರೆ. 'ತೆರೆ' ಕಟ್ಟುವುದು ಎಂದು ಕರೆಯುವ ಭೂತದ ಕೋಲಗಳನ್ನು ನಡೆಸುತ್ತಾರೆ. ಆ ಸಮಯದಲ್ಲಿ ಕೆಲವರು ಮುಖಕ್ಕೆ ಬಣ್ಣಗಳನ್ನು ಬಳಿದುಕೊಂಡು, ತಲೆ ಮತ್ತು ಸೊಂಟವನ್ನು ಅಡಕೆ ಮತ್ತು ತೆಂಗಿನ ಹೊಂಬಾಳೆಗಳಿಂದ ಅಲಂಕರಿಸಿಕೊಂಡು, ನಾದಸ್ವರ ಮತ್ತು ಚಂಡೆ ವಾದ್ಯಗಳ ಹಿಮ್ಮೇಳದಲ್ಲಿ ಕುಣಿಯುತ್ತಾರೆ. ಈ ಸಂದರ್ಭದಲ್ಲಿ ಮಲೆಯಾಳಿ ಅಥವಾ ತುಳು ಭಾಷೆಯ ಹಾಡುಗಳನ್ನು ಹಾಡುತ್ತಾರೆ.

## ಪೂಜಾ ಕುಣಿತ:

ಕೊಡಗಿನ ಸುಮಾರು ದೇವಸ್ಥಾನಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಊರದೇವರ ಹಬ್ಬದ ಸಮಯದಲ್ಲಿ ದೇವರ ಆವೇಶಕ್ಕೆ ಒಳಗಾದ ಪೂಜಾರಿ, ದೇವರ ಉತ್ಸವಮೂರ್ತಿ (ತಡಂಬು) ಯನ್ನು ತಲೆಯ ಮೇಲೆ ಹೊತ್ತು ಚಂಡೆ ವಾದ್ಯದ ಧ್ವನಿಗೆ ತಕ್ಕಂತೆ ಕುಣಿಯುತ್ತಾನೆ.

## ವಾಲಗತ್ತಾಟ್:

ಇದು ನೃತ್ಯವಲ್ಲ. ಕೊಡಗಿನ ಎಲ್ಲಾ ಜಾನಪದ ಕಲೆಗಳಿಗೂ ಹಿಮ್ಮೇಳವನ್ನು ಒಗಿಸುವ ವಾದ್ಯಗೋಷ್ಠಿ ಕೊಡವರ ಎಲ್ಲಾ ಶುಭ, ಅಶುಭ ಕಾರ್ಯಗಳಿಗೆ ಇರಲೇಬೇಕಾದ ಅನಿವಾರ್ಯವಾದ ಅಂಗ. ಡೋಲು, ಪರೆ, ಮೋರಿ, ಕಂಚಿನ ತಾಳ, ವಾಲಗಗಳನ್ನೊಳಗೊಂಡ ಈ ವಾದ್ಯ ವೃಂದವನ್ನು ಅನೂಚಾನವಾಗಿ ನಡೆಸಿಕೊಂಡು ಬಂದಿರುವವರು ಪರಿಜನರು. ಕೊಡಗಿನ ವಿವಿಧ ನೃತ್ಯಗಳಿಗೆ ಬೇರೆ ಬೇರೆ ಪ್ರತ್ಯೇಕ ವಾದ್ಯಗಳು ಹಿಮ್ಮೇಳವನ್ನು ಒದಗಿಸಿದರು. ಈ ವಾಲಕ ಗೋಷ್ಠಿ ಮಾತ್ರ ಎಲ್ಲಾ ನೃತ್ಯಗಳಲ್ಲೂ ಕಡ್ಡಾಯವಾಗಿ ಇದ್ದೇ ಇರುತ್ತದೆ. ಆದ್ದರಿಂದ ಇದನ್ನು ಇಲ್ಲಿ ಪ್ರಸ್ತಾಪಿಸಿದೆ.

ಪಾಶ್ಚಾತ್ಯರ ನೇರ ಸಂಪರ್ಕಕ್ಕೆ ಬಂದು ಅವರ ಪ್ರಭಾವ ವಲಯಕ್ಕೆ ಒಳಗಾದರೂ, ತಮ್ಮ ಜಾನಪದ ಆಚಾರ, ವಿಚಾರ, ಕಲೆ, ಕಲ್ಪನೆಗಳನ್ನು ಬಿಟ್ಟುಕೊಡದೆ, ತಮ್ಮ ಊಟ, ಉಡಿಗೆ, ತೊಡಿಗೆಗಳಲ್ಲಿ ತಮ್ಮತನವನ್ನುಳಿಸಿಕೊಂಡಿರುವ ಅತ್ಯಂತ ಆಧುನಿಕರಾದ ಅಪರೂಪ ಜನಾಂಗ ಕೊಡವ ಜನಾಂಗ.

ಯಂತ್ರ ನಾಗರೀಕತೆಯ ಪ್ರಭಾವದಲ್ಲಿ ತಮ್ಮತನವನ್ನು ಸಂಪೂರ್ಣ ಬಿಟ್ಟುಕೊಟ್ಟು ನಗರೀಕರಣಕ್ಕೆ ಮಾರುಹೋಗುತ್ತಿರುವ ಇತರ ಜನಾಂಗಗಳಿಗೆ ಕೊಡವ ಜನಾಂಗ ಆದರ್ಶವಾಗಿ ನಿಲ್ಲಬಲ್ಲದು.

* * * * *

# "ಬೋಳಮಾರನಹಳ್ಳಿ ಲಕ್ಷ್ಮೀದೇವಿಯ ಪೂಜೆ"

-ಪಿ. ಶಂಕರ ಬಳ್ಳೇಕೆರೆ. ಎಂ. ಎ.

ಕರ್ನಾಟಕದಲ್ಲಿ ಜನಪದ ದೇವತೆಗಳಿಲ್ಲದ ಗ್ರಾಮವೇ ಇಲ್ಲವೆಂದು ಹೇಳಬಹುದು. ಈ ದೇವತೆಗಳಿಗೆ ಹಿಂದಿನಿಂದ ಬಂದ ಪದ್ಧತಿ, ನಂಬಿಕೆ ಆಚರಣೆಗಳಿದ್ದು ಹಬ್ಬ ಹರಿದಿನಗಳನ್ನು ನಡೆಸಿಕೊಂಡು ಬರಲಾಗುದೆ. ಆದರೂ ಈ ದೇವತೆಗಳಿಗೆ ನಿತ್ಯ ಪೂಜೆಗಳು ನಡೆಯಬೇಕೆಂದಿಲ್ಲ. ವರ್ಷದ ಯಾವುದೋ ಸಂದರ್ಭಗಳಲ್ಲಿ ಹಬ್ಬ-ಹರಿದಿನಗಳಲ್ಲಿ ನಡೆಯುತ್ತದೆ. ಶಿಷ್ಟದೇವತೆಗಳಿಗಿರುವಂತೆ ದೊಡ್ಡ ದೊಡ್ಡ ಆಲಯಗಳೂ ಇರುವುದಿಲ್ಲ. ಊರಿನ ಹೊರಗೆ ಮರದ ಕೆಳಗೋ, ಏರಿಯ ಮೇಲೊ ಇವುಗಳ ಸ್ಥಾನಗಳು. ಶಿಷ್ಟ ದೇವತೆಗಳಿದ್ದರೂ ಇವರನ್ನು ಕಾಯುವುದು ಈ ಗ್ರಾಮ ದೇವತೆಗಳೆ. ಊರಿಗೆ ಮಳೆ ಬರದಿದ್ದರೆ ಕಾಯಿಲೆಗಳು ಬಂದರೆ, ಊರಿಗೆ ಅನಿಷ್ಟಗಳಾದರೆ ಬಲಿಕೊಟ್ಟು ಪರ ಮಾಡುತ್ತಾರೆ.

ಈ ಜನಪದ ದೇವತೆಗಳಿಗೆ ಪೂಜಾರಿಗಳು ಹೆಚ್ಚಾಗಿ ಶೂದ್ರರೆ ಆಗಿರುತ್ತಾರೆ. ಕೆಲವು ವೇಳೆ ಬೇರೆಯವರು ಆಗಿರಬಹುದು. ಈ ದೇವತೆಗಳಿಗೆ ಮಂತ್ರಗಳ ಉಪಾಚಗಳು ಕೂಡ ಇರುವುದಿಲ್ಲ. ನೀರು ಹಾಕಿ, ಹೂವು ಮುಡಿಸಿ, ಕೋಳಿಯೋ, ಕುರಿಯೋ ಬಲಿಕೊಟ್ಟರಾಯಿತು.

ಯುಗಾದಿ ಕಳೆದ ಏಳನೆಯ ದಿನಕ್ಕೆ ರಂಗದಹಬ್ಬ ಎಂದು ಸಾರಿಸಿ ಬಿಡುತ್ತಾರೆ. ರಂಗ ಸ್ಥಳದಲ್ಲಿ 'ಕರುಕಾಕಿ' ಬಿಡುತ್ತಾರೆ. ಆ ದಿನಗಳಲ್ಲಿ ರಂಗದಹಬ್ಬ ಮುಗಿಯುವವರೆಗೂ ಯಾರು ಪಾದರಕ್ಷೆಗಳನ್ನು ಹಾಕಿಕೊಂಡು ರಂಗಸ್ಥಳದಲ್ಲಿ ತಿರುಗುವಂತಿಲ್ಲ. ರಂಗದ ಹಬ್ಬದ ದಿನ ಊರಿಗೆ ಹೊಸ ಕಳೆ ತುಂಬುತ್ತದೆ. ಊರಿಗೆ ಪರ ಊರಿಂದ ನೆಂಟರಿಷ್ಟರು ಊರಿನವರು ಬರತೊಡಗುತ್ತಾರೆ. ಮಕ್ಕಳು ಹೊಸ ಬಟ್ಟೆಗಳನ್ನು ಹಾಕಿಕೊಂಡು, ಊರಿನ ಒಳಗೆ ಹೊರಗೆಲ್ಲಾ ಅವರದೆ ಸಡಗರ. ರಂಗಸ್ಥಳದ ಸುತ್ತ ಆಗಲೆ ಬಲೂನು (ಉಸಿರು ಬುಂಡೆ) ಕೊಳಲು, ಪೀಪಿಗಳು, ಪುರಿ, ಮಿಠಾಯಿ, ಅಂಗಡಿಗಳು ಬಂದಿವೆ.

ಕೃಷ್ಣರಾಜಪೇಟೆ ತಾಲೋಕಿನ ಬೋಳಮಾರನಹಳ್ಳಿಯ ಲಕ್ಷ್ಮಿದೇವಿ ದೇವಸ್ಥಾನದ ಹತ್ತಿರ ತುಂಬಿದ್ದಾರೆ ಜನ. ಪೂಜೆ ಆಗಲೆ ಸುರುವಾಗಿದೆ. ಲಕ್ಷ್ಮಿದೇವಿಯ ಒಕ್ಕಲಿನವರು ಸಂಜೆಗೆ ಮುಂಚೆ ಬಂದಿದ್ದಾರೆ. ಪೂಜಾರಿ ಹುಡುಗ ದೇವಸ್ಥಾನದಿಂದ ಕಳಸವನ್ನು ಹೊತ್ತು ಒಬ್ಬನೆ ಕೆಲವು ದೀಪದೊಂದಿಗೆ ಕೆರೆಗೆ ಹೋಗಿ ತೊಳೆದುಕೊಂಡು ಬಂದು ರಂಗದ ಕುರ್ಜಿನ ಮೇಲಿಡುತ್ತಾನೆ. ದೇವಸ್ಥಾನದಿಂದ ಉತ್ಸವ ಮೂರ್ತಿಯನ್ನು ಹೊರಕ್ಕೆ ತಂದು ಪೂರ್ಣವಾಗಿ ಹೂವಿನಿಂದ ಅಲಂಕಾರ ಮಾಡಿರುತ್ತಾನೆ. ಗೌಡ ಪೂಜಾರಿ ಪೂಜೆ ಸಲ್ಲಿಸಿದ ಮೇಲೆ ಮೂರ್ತಿ ಹೊರಡುತ್ತದೆ. ಒಂದು ವಿಶೇಷ ಮೂರ್ತಿಯನ್ನು ಹೊತ್ತ ನಾಲ್ಕು ಜನರೂ ಕೂಡ ಬಗ್ಗಿ ಉಯ್ಯಾಲೆಯಾಡಿಸಿದಂತೆ ತೂಗುತ್ತಾ ಮೂರ್ತಿಯನ್ನು ಹೊತ್ತು ತರುತ್ತಾರೆ. ಹಿರಿಯರು, ಹಾಡುಗಾರರು ದೇವರ ಮಹಿಮೆಯನ್ನು ಕೂಗಿ ಕೂಗಿ ಹಾಡುತ್ತಾರೆ. ನಿಮಿಷ ನಿಮಿಷಕ್ಕೂ ಹೆಗಲು ಬದಲಾಯಿಸಿಕೊಂಡು ಐವತ್ತರಿಂದ ಎಪ್ಪತ್ತು ಅಡಿ ಇರುವ ದೂರವನ್ನು

ಸಾಗಲು ಒಂದು ಗಂಟೆಗೂ ಹೆಚ್ಚು ಕಾಲ ತೆಗೆದುಕೊಳ್ಳುತ್ತಾರೆ. ಸ್ನಾನ ಮಾಡಿದ ಪ್ರತಿಯೊಬ್ಬರು. ದೇವರಿಗೆ ಸೇವೆ ಸಲ್ಲಿಸುತ್ತಾರೆ.

ಉತ್ಸವ ಮೂರ್ತಿಯನ್ನು ಹೊತ್ತು ತಂದು ರಂಗದ ಸುತ್ತ ಸುತ್ತಿ ಕುರ್ಜಿನ ಮೇಲಿಡುತ್ತಾರೆ. ಅಂದಿನಿಂದ ರಂಗ ಕುಣಿಯಲು ಆರಂಭ ಮಾಡುತ್ತಾರೆ. ಆಗ ಮಡಿವಾಳಶೆಟ್ಟಿ ಪಂಜಿನ ಸೇವೆಯನ್ನು ಮಾಡುತ್ತಾನೆ. ಗ್ರಾಮದ ಜನರು ಅಲ್ಲಿಯ ಮೂರ್ತಿಗೆ ಪೂಜೆ ಮಾಡಿಸಿಕೊಳ್ಳುತ್ತಾರೆ. ಪೂಜೆ ಮುಗಿದ ಮೇಲೆ ಉತ್ಸವ ಮೂರ್ತಿ ಮೂಲ ಸ್ಥಳಕ್ಕೆ ಹೋಗುತ್ತದೆ.

ಈ ಲಕ್ಷ್ಮಿದೇವಿಗೆ ಒಂದು ಕತೆಯಿದೆ. ಈ ದೇವತೆ ಈ ಬೋಳಮಾರನಹಳ್ಳಿಯ ಗ್ರಾಮದೇವತೆಯಲ್ಲ. ಇದು ಬಹಳ ವರ್ಷಗಳ ಹಿಂದೆ ಇದೇ ಊರಿನ ಪಕ್ಕದಲ್ಲಿರುವ ಆನಗೋಳಕ್ಕೆ ಸೇರಿದ್ದು. ಆದರೆ ಆ ಗ್ರಾಮದ ಜನರು ಸರಿಯಾಗಿ ಪೂಜೆ ಸಲ್ಲಿಸದ ಕಾರಣ ಈ ದೇವತೆ ಈ ಊರಿಗೆ ಬಂದು ನೆಲೆಸಿದ್ದಳಂತೆ. ಯಾರೇ ಬಂದು ಕರೆದರೂ ಪುನ: ಹೋಗಲಿಲ್ಲವಂತೆ. ಕೊನೆಗೆ ಆನೆಗೊಳದವರೆ ಇವಳ ಹಬ್ಬದ ದಿನ ಬಂದು ಪೂಜೆ ಸಲ್ಲಿಸಿಕೊಂಡು ಹೋಗುತ್ತಿದ್ದಾರಂತೆ. ಹಿಂದಿನ ದಿನಗಳಲ್ಲಿ ಜಾತ್ರೆಯಂತೆ ನಡೆಯುತ್ತಿತ್ತಂತೆ. ಆದರೆ ಮಂಡಲ ಪಂಚಾಯತಿ ಬಂದ ಮೇಲೆ ಇದರ ವೈಭವ ಕಡಿಮೆಯಾಗಿದೆ.

ಉತ್ಸವ ಮೂರ್ತಿ ಹೋದ ನಂತರ ರಂಗದ ಕುಣಿತ ಆರಂಭವಾಗುತ್ತದೆ. ರಂಗದ ವಿವಿಧ ಭಂಗಿಗಳಲ್ಲಿ ಕುಣಿದ ನುರಿತ ಕಲಾವಿದರು ಬಹಳ ಮಂದಿ ಇದ್ದಾರೆ. ಅಷ್ಟೆ ಏಕೆ ಓದಿ ವಿದ್ಯಾವಂತರಾಗಿ ನೌಕರಿ ಮಾಡುತ್ತಿರುವವರು ಕೂಡ ಬಹಳ ಚೆನ್ನಾಗಿ ತಮ್ಮ ಹಿಂದಿನ ದಾಟಿಯನ್ನು ಬಿಡದೆ ಕುಣಿಯುತ್ತಾರೆ. ಕುರ್ಜನ್ನು ಒಂದು ಸುತ್ತು ಸುತ್ತುತ್ತಿರುತ್ತಾರೆ. ಮಿಲಿಟರಿ ಸಿಪಾಯಿಯಂತೆ ದೊಡ್ಡವರು ನಂತರ ಚಿಕ್ಕವರು ಎಂಬಂತೆ ಸಾಲಿನಲ್ಲಿ ಕುಣಿಯುತ್ತಾರೆ. ಬರೀ ಕುಣಿತದಿಂದ ಬೇಸರವಾಗಬಾರದೆಂದು ಮಧ್ಯ ಮಧ್ಯ ಹಲವಾರು ರೀತಿಯ ಹಾಸ್ಯಗಳನ್ನು ತಂದು ನಕ್ಕು ನಗಿಸುತ್ತಾರೆ. ಇದು ನಿರಂತರವಾಗಿ ನಡೆಯುತ್ತಿರುತ್ತದೆ. ರಂಗಕುಣಿತ.

ಈ ಕಡೆ ದೇವಸ್ಥಾನದ ಪೂಜಾರಿ ಬಾಯಿಗೆ ಕೆಂಪು ಬಟ್ಟೆಯನ್ನು ಸುತ್ತಿಕೊಂಡು ಪೂಜೆ ಮಾಡುತ್ತಿರುತ್ತಾನೆ. ಇವನ "ಘಟ" (ಮಣ್ಣಿನ ಚಿಕ್ಕ ಗಡಿಗೆ ಅದಕ್ಕೆ ಹೊಂಬಾಳೆಯನ್ನು ತುಂಬಿರುತ್ತಾರೆ. ಒಳಗೆ ನೀರಿರುತ್ತದೆ)ವನ್ನು ಪೂಜಿಸುತ್ತಿರುತ್ತಾನೆ ಅಷ್ಟೊತ್ತಿಗೆ ಸಮಯ ಎರಡು-ಮೂರು ಗಂಟೆ ದಾಟಿರುತ್ತದೆ. ಮಕ್ಕಳು ಕೂಡ ನಿದ್ರೆ ಮಾಡದೆ ದೇವರು ಬರುವುದನ್ನು ಕಾಯುತ್ತಿರುತ್ತಾರೆ. ಎಲ್ಲರೂ ದೇವಸ್ಥಾನಕ್ಕೆ ಬರುತ್ತಾರೆ. ಮಹಾ ಮಂಗಳಾರತಿ ನಡೆಯುತ್ತದೆ. ಈ ಘಟವನ್ನು ಇನ್ನು ಮೈನೆರೆಯದ ಬಾಲೆಯ ಮೇಲೆ ಹೊರಿಸುತ್ತಾರೆ. ಅವಳು ಬೆಳಿಗ್ಗೆಯಿಂದ ಏನು ತಿನ್ನದೆ ಹಸಿದಿರುತ್ತಾಳೆ. ಆ ಘಟದ ಮುಂದೆ ಗುಡ್ಡರು ಚಕ್ರವಾದಿ ಬಳೆಯನ್ನು ಬಡಿದುಕೊಂಡು ದೇವರನ್ನು ಒಲೈಸುತ್ತಾರೆ. ಪೂಜಾರಿಯು ಆ ಘಟವನ್ನು ತಂದು ಹೆಣ್ಣು ಮಗಳ ತಲೆಯ ಮೇಲಿಡುತ್ತಾನೆ.

ಗುಡ್ಡರು ಒಲ್ಸೆಸುತ್ತಾ ಒಲ್ಸೆಸುತ್ತಾ ಆ ಹುಡುಗಿಯ ಮೇಲೆ ದೇವರು ಮೈದುಂಬುತ್ತದೆ. ಸ್ನಾನ ಮಾಡಿದ ಇಬ್ಬರು ಆ ಘಟವನ್ನು ಹಿಡಿದುಕೊಳ್ಳುತ್ತಾರೆ. ಆ ಮೈದುಂಬಿದ ಹುಡುಗಿ ತನ್ನ ತಲೆಯನ್ನು ಹಿಂದಕ್ಕೂ ಮುಂದಕ್ಕೂ ಮಾಡುತ್ತಿರುತ್ತದೆ. ಮುಂದೆ ಉತ್ಸವ ಮೂರ್ತಿ ರಂಗಕ್ಕೆ ಬಂದು ನಿಲ್ಲುತ್ತದೆ.ಆದರೆ ಅದನ್ನು ನೆಲಕ್ಕೆ ಇಡುವಂತಿಲ್ಲ ನಾಲ್ಕು ಜನ ಹೊತ್ತುಕೊಂಡು ಇರುತ್ತಾರೆ. ಗುಡ್ಡರು ಬಂದು ಇವರನ್ನು ಒಲ್ಸೆಸುತ್ತಾರೆ. ಆಗ ಇವರು ಕೂಡ ಉಯ್ಯಾಲೆ ಕುಣಿಯುತ್ತಾರೆ.

ಉತ್ಸವ ಮೂರ್ತಿಯ ಹಿಂದೆ ಈ ದೇವತೆ ಬರುತ್ತದೆ. ಬಾರಿ ರಭಸವಾಗಿ ತಲೆಯನ್ನು ಹಿಂದಕ್ಕೂ-ಮುಂದಕ್ಕೂ ಮಾಡಿಕೊಂಡು ಕುಣಿದುಕೊಂಡು ರಂಗಸ್ಥಳದ ಪಕ್ಕದಲ್ಲಿರುವ ನರಸಿಂಹ ದೇವಾಲಯದ ಬಾಗಿಲಿಗೆ ಬಂದು ನಿಲ್ಲುತ್ತದೆ. ಅಲ್ಲಿಂದ ಹಿಂದಕ್ಕೆ ಹಿಂದೂ ಮುಂದಾಗಿಯೇ ಹಿಂದಿನ ದಾರಿ ನೋಡದೆ ತನ್ನ ಮೂಲ ಸ್ಥಾನಕ್ಕೆ ಬರುತ್ತದೆ. ಅಲ್ಲಿಂದ ಪುನ: ನರಸಿಂಹ ದೇವಾಲಯಕ್ಕೆ ಬಂದು ಬಾಗಿಲಲ್ಲಿ ನಿಂತು ಹಿಂದೆ ಮುಂದಾಗಿ ಮೂಲಸ್ಥಾನಕ್ಕೆ ಬರುತ್ತದೆ. ಆ ವೇಳೆಗೆ ನಾಲ್ಕರ ಜಾವ ಕಳೆದಿರುತ್ತದೆ. ಈ ದೇವತೆ ಹೀಗೆಯೆ ಸೂರ್ಯ ಮೂಡುವ ತನಕ ನಡೆಯುತ್ತಿರುತ್ತದೆ ಕೊನೆಯಲ್ಲಿ ನರಸಿಂಹ ದೇವಾಲಯದ ಹತ್ತಿರ ಪೂಜೆ ನಡೆಯುತ್ತದೆ. ಆಗ ದೇವತೆಯನ್ನು ತಮ್ಮಗಿಷ್ಟವಾದ ಪ್ರಶ್ನೆ ಕೇಳಿ ಉತ್ತರಗಳನ್ನು ಪಡೆದುಕೊಳ್ಳುತ್ತಾರೆ. ಅಲ್ಲಿಂದ ದೇವತೆ ಹೊರಡಲು ಅಣಿಯಾಗುತ್ತದೆ.

ಅಷ್ಟರಲ್ಲಿ ದೇವರು ಕೆರೆಯ ಹತ್ತಿರ ಇರುವ ದೇವಸ್ಥಾನಕ್ಕೆ ಬರುತ್ತದೆ. ದಾರಿಯಲ್ಲಿ ಸಿಗುವ ಮನೆಗಳ ಜನರು ಮನೆಯ ಮುಂದೆ ಗುಡಿಸಿ ನೀರಾಕಿ ರಂಗೋಲೆ ಇಟ್ಟಿರುತ್ತಾರೆ. ಎಲ್ಲಾ ಮನೆಗಳ ಮುಂದೆ ಪೂಜೆ ಮುಗಿಸಿ ಕೊಂಡು ದೇವಸ್ಥಾನದ ಹತ್ತಿರ ಬರುವಷ್ಟರಲ್ಲಿ ಗಂಟೆ ಎಂಟಾಗಿರುತ್ತದೆ. ದೇವಸ್ಥಾನದ ಸುತ್ತ ಸುತ್ತಿ ಕೊನೆಗೆ ಪೂಜೆ ಮುಗಿದ ಕೂಡಲೆ ಪೂಜಾರಿ ಮೈದುಂಬಿದ ಹೆಣ್ಣು ಮಗಳ ಮುಖಕ್ಕೆ ದೇವರ ತೀರ್ಥವನ್ನು ಹಾಕುತ್ತಾರೆ. ಆಗ ಆ ಹುಡುಗಿಗೆ ಪ್ರಜ್ಞೆ ಬಂದು ಸುಸ್ತಾಗಿ ಕೂರುತ್ತದೆ. ಎಲ್ಲಾರೂ ಆ ಹುಡುಗಿಗೆ ಗಾಳಿಯನ್ನು ಹಾಕುತ್ತಾರೆ. ನಂತರ ಪೂಜೆಯನ್ನು ಮಾಡಿಸಿಕೊಂಡು ಮನೆಗೆ ತೆರಳುತ್ತಾರೆ.

ರಂಗ ಅಲ್ಲಿಗೆ ಮುಗಿಯುವುದಿಲ್ಲ. ಬೆಳಗಿನ ರಂಗ ಆರಂಭವಾಗುತ್ತದೆ. ರಂಗದಲ್ಲಿ ಪುನಃ ಹೊಸಬರು ಹಳಬರು ಕುಣಿಯುತ್ತಾರೆ. ಆಮೇಲೆ ಪಾಳೆಗಾರಿಕೆ, ವೇಷ, ಹುಲಿವೇಷ ಹಾಕಿಕೊಂಡು ಊರಸುತ್ತ ದೇವರ ಮೆರವಣಿಗೆ ತರುತ್ತಾರೆ. ಮರಗಾಲು ಕುಣಿಯುವವರು ಇದ್ದಾರೆ. ಸಂಜೆ ವಿಶೇಷವಾದ ಭೋಜನ ಮಾಡಿಕೊಂಡು ಹಬ್ಬಕ್ಕೆ ಮಂಗಳ ಹಾಡುತ್ತಾರೆ.

* * * * *

# ಬುಡಕಟ್ಟು ಸಮೂಹಗಳ ಬದಲಾಗುತ್ತಿರುವ ಆರ್ಥಿಕ ಜೀವನ

ಡಾ. ಅಂಬಳಿಕೆ ಹಿರಿಯಣ್ಣ

ಸಾಮಾಜಿಕ ಅಸಮಾನತೆಗಳು ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಕೈಕೊಳ್ಳುವ ಕ್ರಮಗಳು ಮಾನವ ಸಮಾಜದ ಸಮಾನಾಂಶ (Universals) ಗಳಾಗಿವೆ. ಆದರೆ ಈ ಸಂಬಂಧದ ವೈಜ್ಞಾನಿಕ ಅಧ್ಯಯನ ಆರಂಭವಾಗಿರುವುದು ಈಚಿನ ಬೆಳವಣಿಗೆ. ಒಂದು ಸಾಮಾಜಿಕ ಸ್ಥಿತಿಯಿಂದ ಮತ್ತೊಂದು ಸಾಮಾಜಿಕ ಸ್ಥಿತಿಗೆ ಕಸಬು, ಸಾಮಾಜಿಕ ಸ್ಥಾನಮಾನ, ಐಶ್ವರ್ಯ ಮತ್ತು ಅಧಿಕಾರ- ಹೀಗೆ ನಾಲ್ಕು ಪ್ರಮುಖ ಕಾರಣಗಳಿಗಾಗಿ ಸ್ಥಿತ್ಯಂತರಕ್ಕೊಳಗಾಗುವ ಮಾನವ ಗುಂಪುಗಳ ಸಾಮಾಜಿಕ ಚಲನೆ ಪ್ರಕ್ರಿಯೆ (Social mobility) ಕುತೂಹಲಕರ ವಿಷಯವಾಗಿದ್ದು ಅಧ್ಯಯನ ಯೋಗ್ಯವಾಗಿದೆ.

ಆಂಗ್ಲರ ಆಡಳಿತ ಭಾರತಕ್ಕೆ ಔದ್ಯೋಗಿಕತೆಯನ್ನು ತಂದ ನಂತರ ಇಲ್ಲಿ ಸಾಮಾಜಿಕ ಸಂಚಲನ ಪ್ರಕ್ರಿಯೆ ಹೆಚ್ಚು ಮಹತ್ತರವಾಗಿ ನಡೆಯಿತು. ಕೆಲವು ಸಾಮಾಜಿಕ ಅನಿಷ್ಟಗಳನ್ನು (ಉದಾ. ತನ್ನ ಸದಸ್ಯರನ್ನು ಜಾತಿಯಿಂದ ಹೊರಹಾಕುವುದು ಇತ್ಯಾದಿ) ಹೋಗಲಾಡಿಸಲು, ಸ್ಥಳೀಯ ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳಲು ಅನುಕೂಲವಾಗುವಂತೆ, ಕಾನೂನು ಕಾಯಿದೆಗಳನ್ನು ಜಾರಿಗೆ ತರಲಾಯಿತು. (ಶ್ರೀನಿವಾಸ್: ೧೯೬೩) ೧೯೪೭ರ ಸ್ವಾತಂತ್ರ್ಯ ಹಾಗೂ ಸಂವಿಧಾನಾತ್ಮಕ ಮತ್ತು ಶಾಸನಬದ್ಧ ಅನುಕೂಲಗಳು ಈ ಪ್ರಕ್ರಿಯೆಯನ್ನು ಮತ್ತಷ್ಟು ಚುರುಕುಗೊಳಿಸಿದವು. ಕೈಗಾರಿಕೀಕರಣ ಮತ್ತು ಆಧುನಿಕ ಶಿಕ್ಷಣಗಳಿಂದ ಶ್ರೇಣೀಕೃತ ಜಾತಿ ವ್ಯವಸ್ಥೆ ಮತ್ತು ವೃತ್ತಿರಚನೆಗಳ ನಡುವಿನ ಅಪಸರಣ ಕ್ಷೀಣಿಸಿ ಜಾತ್ಯಾತೀತ ಕಸಬುಗಳ ಹುಟ್ಟಿಗೆ ಕಾರಣವಾಯಿತು. ಮುಂದೆ ಅದು ಮಾನವ ಸಮುದಾಯಕ್ಕೆ ಹೊಸ ಬಗೆಯ ಜ್ಞಾನ ಮತ್ತು ಕೌಶಲಗಳನ್ನು ದೊರಕಿಸಿಕೊಡಲು ಸಹಾಯಕವಾಯಿತು. ಔದ್ಯೋಗಿಕ ಶೋಧಗಳು ಸಮಾಜದ ಕೆಳಗಿನ ಸ್ತರದ ಜನರು ಸುಲಭವಾಗಿ ನಿರ್ವಹಿಸಲು ಸಾಧ್ಯವಾಗುವ ಉದ್ಯೋಗವಕಾಶಗಳನ್ನು ಕಲ್ಪಿಸಿದವು. ಜೊತೆ ಜೊತೆಯಲ್ಲೇ ಹೊಸ ಸ್ಥಾನಮಾನಗಳನ್ನೂ ಸೃಷ್ಟಿಸಿದವು. ಇದು ಪ್ರತಿಯೊಂದು ಮಾನವ ಗುಂಪು ಕೂಡ ಜಾತಿ ಕಸಬಿನಿಂದ ಜಾತ್ಯಾತೀತ ಕಸಬಿಗೆ ಹೋಗಲು ಅನುವು ಮಾಡಿಕೊಟ್ಟಿತು. ಕೈಗಾರಿಕೀಕರಣದಿಂದಾದ ಈ ಸಾಮಾಜಿಕ ಚಲನೆ ಮಾನವ ಗುಂಪುಗಳು ಜಾತಿ ವರ್ತುಲದಿಂದಾಚೆಗೆ ಬರುವಂತೆ ಆಗಿದ್ದು ಹೆಚ್ಚುಗಾರಿಕೆಯೇ ಸರಿ. ಎಲ್ಲ ಬಗೆಯ ವೃತ್ತಿಗುಂಪುಗಳ, ರಕ್ತಸಂಬಂಧಿಗಳ ಸಂದರ್ಭಗಳಿಂದ ಮುಕ್ತಗೊಂಡು ಅಧಿಕಾರಶಾಹಿ ತತ್ವದ ಆಧಾರದ ಮೇಲೆ ಕೈಗಾರಿಕೆಗಳು ಸಂಘಟಿತವಾದವು. ಪರಂಪರಾಗತ ವೃತ್ತಿಗಳನ್ನು ಕೈಬಿಟ್ಟು ಹೊಸ ವೃತ್ತಿಯನ್ನು ಅವಲಂಬಿಸಲೇಬೇಕಾದ ಅನಿವಾರ್ಯತೆ ಎದುರಾಯಿತು. ಉತ್ತಮ ಜಾತಿಗೆ ಸೇರಿದ ಜನತೆಗೆ ಸಿಗುತ್ತಿದ್ದ ಸ್ಥಾನಮಾನಗಳನ್ನು ಸಮಾಜದ ಕೆಳವರ್ಗವೂ ದೊರಕಿಸಿಕೊಳ್ಳುವ ಯತ್ನ ಆರಂಭಗೊಂಡಿತು. ಶಿಕ್ಷಣವು ಈ ಸಾಮಾಜಿಕ ಚಲನೆಗೆ ಪ್ರಮುಖವಾದ ಒಂದು ಸಾಂಸ್ಥಿಕ ಮಾರ್ಗವಾಗಿ ಒದಗಿ ಬಂದಿತು. ಅದು ಹೊಸ

ಮೌಲ್ಯಗಳನ್ನೇ ಅಲ್ಲದೆ ಹೊಸ ಹೊಸ ಕೌಶಲಗಳನ್ನೂ ತಂದುಕೊಟ್ಟಿತು. ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ನಡೆದ ಈ ಬದಲಾವಣೆ ಕ್ರಮೇಣ ಜಾತಿ ಸಮಾಜಗಳು ಮುಕ್ತವರ್ಗ ವ್ಯವಸ್ಥೆಗೆ ಪರಿವರ್ತನೆ ಹೊಂದಲು ಪ್ರೇರಣೆ ಒದಗಿಸಿತು. ಅದರಲ್ಲಿ ಕಸಬು, ಒಂದು ಪ್ರಬಲ ಆಸರೆಯಾಯಿತು.

ಜಾತಿ ಮತ್ತು ವೃತ್ತಿಗಳ ಸಂಬಂಧದ ಬದಲಾವಣೆ ನಾಲ್ಕು ಮುಖಗಳಲ್ಲಿ ಸಂಭವಿಸುತ್ತದೆ:

೧. ಪರಂಪರಾಗತ ವೃತ್ತಿಯಲ್ಲೇ ಮೇಲೇರಿ ಮೇಲು ಜಾತಿಯ ಕಸಬುಗಳನ್ನು ಅಳವಡಿಸಿಕೊಳ್ಳುವುದು

೨. ಜಾತಿ ಮುಕ್ತ ವೃತ್ತಿಯ ಅವಲಂಬನೆ

೩. ಪರಂಪರಾಗತ ಜಾತಿ ಕಸಬನ್ನು ತೊರೆದು ಸಮಾಜದ ಕೆಳವರ್ಗದ ಕಸಬನ್ನು ಅವಲಂಭಿಸುವುದು

೪. ಪರಂಪರಾಗತ ವೃತ್ತಿಯಲ್ಲಿ ಮುಂದುವರೆದು ಜಾತಿ ಕಸಬನ್ನು ಮುಂದುವರೆಸಿಕೊಂಡು ಹೋಗುವುದು

ಸಾಮಾಜಿಕ ಸ್ಥಾನಮಾನದ ಧೃಷ್ಟಿಯಿಂದ ಮೊದಲ ಎರಡು ಗುಂಪಿನಲ್ಲಿ ಬದಲಾವಣೆಯ ದಿಕ್ಕು ಊರ್ಧ್ವಮುಖವಾಗಿದ್ದರೆ ಕೊನೆಯ ಎರಡರಲ್ಲಿ ಅಧೋಮುಖವಾಗಿ ಸಾಗುವುದು ಗೋಚರಕ್ಕೆ ಬರುತ್ತದೆ. ಜಾತಿ ಶ್ರೇಣಿ, ವೃತ್ತಿಗೌರವ, ಶಿಕ್ಷಣ ಸೌಲಭ್ಯ, ಕೈಗಾರಿಕಾ ಕ್ಷೇತ್ರದ ಸೇವೆ- ಇವುಗಳ ವಿಸ್ತರಣೆಯಿಂದ ಮೊದಲಿನ ಎರಡರಲ್ಲಿ ಮಹತ್ತರ ಬದಲಾವಣೆ ಸಾಧಿತವಾಗುತ್ತದೆ.

ಜಾತಿ ಮತ್ತು ವೃತ್ತಿಯ ನಡುವಣ ಸಂಬಂಧದಲ್ಲಿನ ಬದಲಾವಣೆಯಲ್ಲಿ ಸಾಮಾಜಿಕ ಆರ್ಥಿಕ ಅಂಶಗಳು ಗಮನಾರ್ಹ ಪಾತ್ರವಹಿಸುತ್ತವೆ. ಬದಲಾವಣೆಯನ್ನು ತೀವ್ರಗೊಳಿಸುವ ಇಲ್ಲವೆ ಕುಂಠಿತಗೊಳಿಸುವ ಅಂಶಗಳಲ್ಲಿ ಮಾನವ ಗುಂಪಿನ ವೃತ್ತಿ, ಅದು ಪಡೆದ ಶಿಕ್ಷಣ, ಭೂ ಒಡೆತನ, ಆ ಪ್ರದೇಶದ ಅಭಿವೃದ್ಧಿ ಸ್ಥಿತಿಗತಿಗಳು ಮುಖ್ಯವಾದವು.

ಸಾಂಪ್ರದಾಯಿಕವಾಗಿ ಜಾತಿ ಶ್ರೇಣಿಗಳಲ್ಲಿ ಮೇಲಿನ ಶ್ರೇಣಿಯಲ್ಲಿರುವವರು ಸಾಮಾನ್ಯವಾಗಿ ಉನ್ನತ ಸ್ಥಾನಮಾನ, ಗೌರವಗಳನ್ನು ತಂದುಕೊಡುವ ವೃತ್ತಿಗಳನ್ನೇ ಕೈಕೊಳ್ಳುವುದು ಸಾಮಾನ್ಯ. ಅಂತೆಯೇ ಕೆಳದರ್ಜೆಯ ಕಸಬುಗಳೆಂದು ಪರಿಗಣಿತವಾದವನ್ನು ಕೀಳುಜಾತಿಗೆ ಸೇರಿದವರೇ ನಿರ್ವಹಿಸುವುದು ಸ್ವಾಭಾವಿಕವಾಗಿತ್ತು. ಬದಲಾದ ಸನ್ನಿವೇಶದಲ್ಲಿ, ಕೈಗಾರಿಕೀಕರಣ ಮತ್ತು ಆಧುನೀಕರಣದಿಂದಾಗಿ ಸಾಕಷ್ಟು ಬದಲಾವಣೆಗಳಾಗಿದ್ದರೂ ಬಹುಸಂಖ್ಯಾತರು ಇನ್ನೂ ತಂತಮ್ಮ ಪರಂಪರಾಗತ ವೃತ್ತಿಯಲ್ಲೇ ಮುಂದುವರೆದಿರುವುದು ವಾಸ್ತವ ಸಂಗತಿ. ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಜಾತಿಕಸಬನ್ನು ತೊರೆದು ಹೋದವರಲ್ಲಿ ಬಹುಮಟ್ಟಿಗೆ ಜಾತಿ ಶ್ರೇಣೀಕರಣದ ಅತ್ಯಂತ ಕೆಳಗಿನ ಸ್ತರಕ್ಕೆ ಸೇರಿದ ಜನರೇ ಹೆಚ್ಚು. ಈ ಪರಿಸ್ಥಿತಿಯಲ್ಲಿ ಮುಂದುವರಿದ ಸಮಾಜಗಳ ಜನತೆಗೆ ತಮ್ಮ ಸಮಾಜದಲ್ಲಿನ ಮೊದಲಿನ

ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದು ಕಷ್ಟಕರವಾಗಿದೆ. ಹೀಗೆ ಊರ್ಧ್ವಗಾಮಿ ಸಂಚಲನೆಯನ್ನು ಅಂತ್ಯಜರಲ್ಲೇ ನಿಚ್ಚಳವಾಗಿ ಗುರುತಿಸಬಹುದು.

ಪ್ರಕೃತ ಅಧ್ಯಯನವು ವೃತ್ತಿ ಮತ್ತು ಜಾತಿ ಕಟ್ಟಿನಿಂದ ಕಳಚಿಕೊಳ್ಳುತ್ತಿರುವ ಬುಡಕಟ್ಟು ಗುಂಪುಗಳು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದನ್ನು ಸ್ಪಷ್ಟಪಡಿಸುವ ಪ್ರಯತ್ನ ಮಾಡುತ್ತದೆ

* * *

ಭಾರತದ ಬುಡಕಟ್ಟುಗಳು ಅನೇಕ ಶತಮಾನಗಳಿಂದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ನ್ಯೂನತೆಗಳನ್ನು ಅನುಭವಿಸುತ್ತಾ ಬಂದಿವೆ. ಅನಾದಿ ಕಾಲದಿಂದಲೂ ಅವು ಸಾಂಸ್ಕೃತಿಕ ಒಂಟಿತನವನ್ನು ಅನುಭವಿಸಿದ್ದರ ಪರಿಣಾಮವಾಗಿ ಸಮಾಜದ ಮುಂದುವರಿದ ವರ್ಗಗಳ ಶೋಷಣೆಗೆ ಗುರಿಯಾಗಿ ಹಿಂದುಳಿಯಬೇಕಾಯಿತು. ಔದ್ಯೋಗಿಕತೆಯ ಪ್ರವೇಶ ಆದ ಮೇಲೂ ಬಹುಕಾಲದವರೆಗೆ ಅವರನ್ನು ದರಿದ್ರ ಕೂಲಿಕಾರರನ್ನಾಗಿ ನೇಮಿಸಿಕೊಂಡು ದುಡಿಸಿಕೊಳ್ಳಲಾಯಿತು. ತೀವ್ರ ಅವಮಾನ, ಹಸಿವು, ಗಂಭೀರ ಸ್ವರೂಪದ ರೋಗರುಜಿನಗಳಿಗೆ ತುತ್ತಾಗಿರುವ ಬುಡಕಟ್ಟು ಜನತೆ ನಿಜವಾಗಿಯೂ ವಟ್ಟ ದಾರಿದ್ರ್ಯದ ಬದುಕನ್ನೇ ಬದುಕುತ್ತಿದೆ. ತೀವ್ರಗತಿಯ ಆಧುನೀಕರಣ ಮತ್ತು ಕೈಗಾರಿಕೀಕರಣ ದೇಶದಲ್ಲಿ ಅರಣ್ಯಪ್ರದೇಶವನ್ನು ಕಿರಿದುಗೊಳಿಸಿತು. ಇದು ಬುಡಕಟ್ಟು ಜನರ ಜೀವನೋಪಾಯಕ್ಕೆ ಪ್ರತಿಕೂಲವಾಯಿತು. ಪುನರ್‌ವಸತಿ ಮತ್ತು ಪುನರ್ ಬಂಡವಾಳ ಯೋಜನೆಗಳು ಅವರನ್ನು ಕಾಡಿನಿಂದ ಬಯಲಿಗೆ ಸ್ಥಳಾಂತರಗೊಳಿಸಿ ಅವರ ಒಂಟಿತನವನ್ನು ಇಲ್ಲವಾಗಿಸಿದವು. ಸಾರಿಗೆ ಸಂಪರ್ಕಗಳು ಸ್ಥಿತಿಯನ್ನು ಕೊಂಚ ಸುಧಾರಿಸಿದವು.

ಕರ್ನಾಟಕದ ಬುಡಕಟ್ಟು ಜನರ ಸಮಸ್ಯೆಗಳು ಬೇಗೂರು ಅರಣ್ಯ ಕ್ಷೇತ್ರದ ಸಂಪಾದನೆಗಾಗಿ ಮದ್ರಾಸ್ ಪ್ರಾಂತ್ಯ ೧೮೬೪ ರಲ್ಲಿ ಬುಡಕಟ್ಟು ಜನರನ್ನು ನೇಮಿಸಿಕೊಂಡಾಗಲೇ ಆರಂಭವಾಯಿತು. ಇದು ಅರಣ್ಯ ಸಂಪನ್ಮೂಲಗಳ ವ್ಯಾಪಕ ಶೋಷಣೆಯ ಆರಂಭವೇ ಆಗಿತ್ತು. ಬುಡಕಟ್ಟು ಜನರನ್ನು ಮರಗಾಡು ಇಲ್ಲದಂತೆ ಮಾಡಲು ಅತ್ಯಂತ ಕಡಿಮೆ ಕೂಲಿಗೆ ನೇಮಿಸಿಕೊಳ್ಳಲಾಯಿತು. ಅಂದಿನಿಂದ ಕರ್ನಾಟಕದ ಬುಡಕಟ್ಟು ಸಮೂಹಗಳು ನಾನಾ ರೀತಿಯ ನ್ಯೂನತೆಗಳು ಮತ್ತು ಕೊರತೆಗಳನ್ನು ನಿರಂತರವಾಗಿ ಅನುಭವಿಸಬೇಕಾಯಿತು. (ವಿ. ಟಿ. ಪಾಟೀಲ್: ೧೯೮೮ :-೨೭೦)

* * *

ಪ್ರಕೃತ, ಇಂಗ್ಲಿಷಿನ Tribe ಗೆ ಸಂವಾದಿಯಾಗಿ ಕನ್ನಡದಲ್ಲಿ ಬುಡಕಟ್ಟು ಪದ ಪ್ರಯೋಗದಲ್ಲಿದೆ. ವಾಸ್ತವವಾಗಿ Tribe ಪ್ರಯೋಗ ಅಸಂಖ್ಯ ವಿವರಣೆಗಳಿಗೆ ಎಡೆಕೊಟ್ಟಿರುವಂಥದು. ಅಸಂಖ್ಯ ವಿದ್ವಾಂಸರು ಅಸಂಖ್ಯ ರೀತಿಯಲ್ಲಿ ಅದನ್ನು ನಿರ್ವಹಿಸಿರುವುದೇ ಅದಕ್ಕೆ ಆಧಾರ. ಸದ್ಯ ವಿದ್ವಾಂಸರು ಹೆಚ್ಚು ದೋಷಗಳಿಲ್ಲದ ವ್ಯಾಖ್ಯೆ ಎಂದು ಪ್ರಸ್ತಾಪಿಸಿರುವ ಆಂಡ್ರೆ ಬೆಟೀಲ್ಲೆ ಅವರ ವಿವರಣೆಯನ್ನೇ ಇಲ್ಲಿ ಪುನರುದ್ಧರಿಸಬಹುದು. ಆಂಡ್ರೆ ಅವರು Tribe ನ್ನು ನಿರ್ವಚಿಸಿರುವುದು ಹೀಗೆ -

'A Society having a clear linguistic boundary and generally a well difined political boundary' (೧೯೭೭:೧೦). ಈ ನಿರ್ವಚನವು ಯಾವುದೇ ಒಂದು ಬುಡಕಟ್ಟನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರೂಪಿತವಾದದ್ದಲ್ಲ. ಅಷ್ಟೇ ಅಲ್ಲ, ಕರ್ನಾಟಕದ ಬುಡಕಟ್ಟುಗಳ ಸ್ವರೂಪವನ್ನು ಮನಗಂಡಾಗ ಈ ನಿರ್ವಚನವನ್ನು ಒಪ್ಪುವುದು ಕಷ್ಟವಾಗುತ್ತದೆ.

ಸದ್ಯ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಒಟ್ಟು ೬೨ ಬುಡಕಟ್ಟುಗಳನ್ನು ಗುರುತಿಸಲಾಗಿದೆ.[1] ಈ ಎಲ್ಲ ಬುಡಕಟ್ಟು ಜನರೂ ಇಂದಿನ ರೀತಿಯ ನಾಗರಿಕ ಪ್ರಪಂಚದಿಂದ ದೂರವೇ ಉಳಿದವರು. ತಮ್ಮದೇ ಆದ ಜೀವನ ವಿಧಾನವನ್ನು ರೂಪಿಸಿಕೊಂಡು ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದವರು. ಇತರ ಮಾನವ ಸಮುದಾಯಗಳಷ್ಟೇ ಅಥವಾ ಅದಕ್ಕೂ ಮಿಗಿಲಾಗಿ ಸ್ವಾಭಿಮಾನ ಮತ್ತು ಆತ್ಮಶಕ್ತಿಯನ್ನು ಗಳಿಸಿಕೊಂಡವರು. ಒಟ್ಟಿನಲ್ಲಿ ಬೆಟ್ಟಗುಡ್ಡಗಳಲ್ಲಿ ನೆಲೆಸಿರುವ ಈ ಬುಡಕಟ್ಟು ಜನಗಳ ಸಂಸ್ಕೃತಿ ಅನನ್ಯವಾದುದು. ಪ್ರತಿಯೊಂದು ಬುಡಕಟ್ಟು ಕೂಡ ತನಗೇ ವಿಶಿಷ್ಟವಾದ ಉಪಭಾಷೆ, ನಂಬಿಕೆ ಸಂಪ್ರದಾಯಗಳು, ಸಾಹಿತ್ಯ ಕಲೆ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಪ್ರದರ್ಶಿಸುತ್ತದೆ. ಈ ಒಂದೊಂದು ಬುಡಕಟ್ಟು ಒಂದು ಸ್ಪಷ್ಟ ಭಾಷಿಕ ಎಲ್ಲೆಯನ್ನು ಗುರುತಿಸಿಕೊಳ್ಳುವ ಹಾಗೂ ಸಾಮಾನ್ಯವಾಗಿ ಒಂದು ನಿಶ್ಚಿತ ರಾಜಕೀಯ ಸರಹದ್ದನ್ನು ಹೊಂದಿರುವ ಏಕಪಕ್ಷೀಯ ಗುಂಪೇ ಆಗಿದೆ. (Uniiateral group).

ಬದಲಾದ ಪರಿಸ್ಥಿತಿಯಲ್ಲಿ, ಈ ಬುಡಕಟ್ಟು ಸಮೂಹಗಳು ಪರಂಪರಾಗತ ವೃತ್ತಿಯೊಡನೆ ಬೇರೆ ಹವ್ಯಾಸಗಳಲ್ಲೂ ತೊಡಗಿರುವುದನ್ನು ಕಾಣುತ್ತೇವೆ. ಸರದಿ ಕೃಷಿ (Shift cultivation), ಬೇಟೆ, ಜೇನುಸಾಕಾಣಿಕೆ, ಬುಟ್ಟಿ ಹೆಣೆಯುವಿಕೆ, ಬಿದಿರುಕೆಲಸ, ಕಮ್ಮಾರಿಕೆ, ಕೃಷಿ ಇವೇ ಮುಂತಾದ ವೃತ್ತಿಗಳಲ್ಲಿ ತೊಡಗಿದ್ದಾರೆ. ಬಹು ಪಾಲು ಸಂಖ್ಯಾತ ಬುಡಕಟ್ಟು ಜನರು ವ್ಯವಸಾಯ ವೃತ್ತಿ ಮತ್ತು ಕೃಷಿ ಕಾರ್ಮಿಕರಾಗಿರುವುದು ಸತ್ಯ. ಉಳಿದವರು ತಮಗೆ ಪ್ರಿಯವಾದ ಅರಣ್ಯದ ಕೆಲಸವಲ್ಲೇ ಮುಂದುವರೆದಿದ್ದಾರೆ. ಕಾಡಿನ ಗುತ್ತಿಗೆದಾರರಿಗೆ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿಕೊಡುವ ಕಾರ್ಮಿಕರಾಗಿಯೂ ಕೆಲಸ

---

1 ೧. ಕೊಡಗು ಬೆಳಗಾಂ ಬಿಜಾಪುರ ಧಾರವಾಡ ಉತ್ತರ ಕನ್ನಡ ದಕ್ಷಿಣ ಕನ್ನಡ ಗುಲಬರ್ಗಾ ರಾಯಚೂರು ಬೀದರ್ ಮತ್ತು ಮೈಸೂರು ಜಿಲ್ಲೆಗಳಲ್ಲಿ ನೆಲೆಸಿರುವವರೆಂದರೆ; ೧. ಗೌಡ್ಲು ೨. ಹಕ್ಕಿಪಿಕ್ಕಿ ೩. ಹಸಲರು ೪. ಇರುಳಿಗರು ೫. ಜೇನುಕುರುಬರು ೬. ಕಾಡುಕುರುಬರು ೭ ಮಲೈಕುಡಿ ೮. ಮಾಲೇರು ೯. ಸೋಲಿಗರು. ಬೆಳಗಾಂ ಬಿಜಾಪುರ ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡು ಬರುವವರು: ೧೦. ಬರ್ದ ೧೧. ಬವಾಚ ೧೨. ಭಿಲ್ ೧೩. ಚೋದ್ಧರ ೧೪. ಧಂಕ ೧೫. ದೋಡಿಯಾ ೧೬. ದುಬ್ಲ ೧೭. ಗಮಿತ್ ೧೮. ಗೊಂಡ ೧೯ ಕಥೋಡಿ ೨೦. ಕೊಕ್ಣ ೨೧. ಕೋಲಿಧೋರ್ ೨೨. ನಾಯ್ಕಡ ೨೩ ಪಾಂಧಿ ೨೪ ಪಟೇಲಿಯಾ ೨೫ ಪೊಮ್ಲಾ ೨೬. ರಥಾವ ೨೭. ವಾರ್ಲಿ ೨೮. ವಿಚೋಲಿಯಾ ಗಲಬರ್ಗಾ ಬೀದರ್ ಮತ್ತು ರಾಯಚೂರುಗಳಲ್ಲಿ ನೆಲೆಸಿರುವವರು: ೨೯ ಭಿಲ್ ೩೦ ಚೆಂಚು ೩೧. ಗೋಂಡ್ ೩೨. ಕೋಯಾ ದಕ್ಷಿಣಕನ್ನಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡು ಬರುವವರು ೩೩ ಆದಿವಾನ್ ೩೪. ಆರಾನದನ್ ೩೫. ಇರುಳರ್ ೩೬. ಕಾಡಾರ ೩೭. ಕಮ್ಮಾರ ೩೮. ಕಟ್ಟುನಾಯಿಕನ್

ನಿರ್ವಹಿಸುವವರಿದ್ದಾರೆ. ಬದಲಾದ ಸಾಮಾಜಿಕ ಆರ್ಥಿಕ ಪರಿಸರ(milieu) ಹಾಗೂ ಕೈಗಾರೀಕರಣದ ಪರಿಣಾಮದಿಂದಾಗಿ ಅನೇಕರು ತಮ್ಮ ಮೂಲಸ್ಥಾನಗಳನ್ನು ತೊರೆದು ಜಾತಿಕಸಬುಗಳನ್ನು ಕೈ ಬಿಟ್ಟಿದ್ದಾರೆ. ಅಂತೆಯೇ ಅವರ ಆರ್ಥಿಕ ಜೀವನವೂ ಬದಲಾಗಿದೆ. ಈ ಜನರ ಆರ್ಥಿಕ. ವ್ಯವಸ್ಥೆಯ ಗುಣಾತ್ಮಕ (qualitative) ಹಾಗೂ ಪರಿಮಾಣಾತ್ಮಕ (quantitative) ಮುಖಗಳನ್ನು ಗುರುತಿಸಲು ಈ ಕೆಳಗಿನ ನಾಲ್ಕು ಅಂಶಗಳನ್ನು ಲಕ್ಷಿಸಬಹುದು:

೧. ಜೀವನೋಪಾಯ ಮೂಲಗಳು

೨. ಆರ್ಥಿಕ ಚಟುವಟಿಕೆಗಳಲ್ಲಿ ಕೆಲಸದ ವಿಂಗಡಣೆ ವಯಸ್ಸು ಮತ್ತು ಲಿಂಗ ವ್ಯತ್ಯಯ

೩. ಪರಂಪರಾಗತ ವೃತ್ತಿಗಳು ಮತ್ತು ಅವಲಂಬಿಸಿದ ಹೊಸ ವೃತ್ತಿಗಳು

೪. ಆರ್ಥಿಕ ಚಟುವಟಿಕೆಯ ಮೇಲೆ ಬಡತನದ ಪ್ರಭಾವ

ಸಾಂಸ್ಕೃತಿಕ ಶ್ರೀಮಂತಿಕೆಯನ್ನು ತಕ್ಕಷ್ಟು ಮೂಲ ಸ್ವರೂಪದಲ್ಲೇ ಕಾಯ್ದುಕೊಂಡು ಬಂದಿರುವ ಸೋಲಿಗರ ಬದಲಾಗುತ್ತಿರುವ ಆರ್ಥಿಕ ಜೀವನ ಈ ಮೇಲೆ ಹೇಳಿದ ಕಾರಣಕ್ಕಾಗಿ ಅಭ್ಯಾಸಯೋಗ್ಯವಾಗಿದೆ. ಸೋಲಿಗರ ಪ್ರಧಾನ ವೃತ್ತಿ, ಬಲು ಸಾಂಪ್ರದಾಯಿಕವಾದುದು - 'ಕೆತ್ಲು ಬೇಸಾಯ' ವ್ಯವಸ್ಥಿತ ರೀತಿಯ ಬೇಸಾಯ ಕ್ರಮವನ್ನು ಈ ಸೋಲಿಗರು ಅರಿಯರು. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ತಮ್ಮ ಕುಡುಗೋಲು ಮತ್ತು ಕಳೆಗುದ್ದಲಿಗಳಿಂದ ನೆಲವನ್ನು ಕೆರೆದೊ ಅಗೆದೋ ತಕ್ಕಮಟ್ಟಿಗೆ ಹದಮಾಡಿ ರಾಗಿ ತೊಗರಿ ಅವರೆ ಹರಳು ಮುಂತಾದುವನ್ನು ಬಿತ್ತಿ ಬೆಳೆಯುವುದುಂಟು. ಎಷ್ಟೋ ವೇಳೆ ಅವರು ಬೆಳೆದ ಬೆಳೆ ಕೈಗೆ ಬರುವ ಸಮಯದಲ್ಲಿ ಆನೆಗಳ ತುಳಿತಕ್ಕೆ ಸಿಕ್ಕು ಅವರ ಶ್ರಮ ನಿರರ್ಥಕವಾಗುವುದುಂಟು. ಆದರೂ ಬೇಸರವಿಲ್ಲದೆ ಈ ಜನ ಕೆತ್ಲು ಬೇಸಾಯವನ್ನು ಮುಂದುವರಿಸುವುದು ಸಾಮಾನ್ಯ.[2]

ಈ ಕೆತ್ಲು ಬೇಸಾಯದಿಂದಷ್ಟೇ ಇವರ ಹೊಟ್ಟೆಪಾಡು ಸಾಗುವುದಿಲ್ಲ. ಅದಕ್ಕಾಗಿ ಅವರು ಕಾಡಿನಲ್ಲಿ ದೊರಕುವ ಪದಾರ್ಥಗಳನ್ನೂ ಶೇಖರಿಸುತ್ತಾರೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ತೆರನ ಕಾಡಿನ ಗೆಡ್ಡೆಗೆಣಸುಗಳನ್ನೂ ಅಳಲೆಕಾಯಿ, ನೆಲ್ಲಿಕಾಯಿ, ಅಂಟುವಾಳದಕಾಯಿ ಜೇನು ಮುಂತಾದುವನ್ನು ಶೇಖರಿಸುತ್ತಾರೆ. ಆದರೆ ಈ ಎಲ್ಲವನ್ನೂ ಆ ಸುತ್ತಿನ ಹಳ್ಳಿಯ ಜನರು ಅತ್ಯಂತ ಕಡಿಮೆ ಬೆಲೆಗೆ ಲಪಟಾಯಿಸಿ ಬಿಡುತ್ತಾರೆ. ಈಗ ಸಹಕಾರ ಸಂಘಗಳು

---

1 ೩೯. ಕೊಂಡ ಕಾಪ್ಪನ್ ೪೦. ಕೊಂಡ ರೆಡ್ಡಿಗಳು ೪೨. ಕೋಟ, ೪೩. ಮೇಲ್ಕಡಿ ೪೪. ಕುರಿಚ್ಚನ್ ೪೫. ಕುರುಮಾನ್ಸ್ ೪೬. ಮುಚ್ಚಮಸಲರು ೪೭ ಮಲವೇಕುಡಿ ೪೮. ಮಲಸರ್ ೪೯. ಮುಡುಗರ್ ೫೦. ಪಳ್ಳಿಯನ್ ೫೧ ಪಣೆಯನ್ ೫೨. ಪುಲಯನ್ ೫೩. ಸೋಲಿಗ ೫೪. ತೊದವ ೫೫. ಕಣೆಯನ್ ದಕ್ಷಿಣಕನ್ನಡ ಮತ್ತು ಕೊಡಗು ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡು ಬರುವವರೆಂದರೆ: ೫೬. ಮರಾಟಿ ೫೭. ಕೊರಮ ೫೮. ಕುಡಿಯ ೫೯. ಕುರುಬ ೬೦. ಮರಾಠ ೬೧. ಮೇದರು ೬೨ ಎರವರು

2 ಕಾಡಿನಲ್ಲಿ ನೆಲೆಸಿರುವ ಈ ಜನ ಕಾಡು ಸವರಿ ಸುಟ್ಟು ಆ ಜಾಗದಲ್ಲಿ ರಾಗಿ ಜೋಳ ಬೆಳೆಯುತ್ತಿದ್ದರು.'ಕುಮ್ರಿ ಬೇಸಾಯ' ಎಂದು ಕರೆಯುತ್ತಿದ್ದರಂತೆ.

ಅಸ್ತಿತ್ವಕ್ಕೆ ಬಂದಿರುವುದರಿಂದ ಅರಣ್ಯ ಸಂಪನ್ಮೂಲಗಳನ್ನು ನೇರವಾಗಿ ಅಲ್ಲಿಗೆ ಮಾರುವ ಪರಿಪಾಠ ರೂಢಿಯಾಗುತ್ತಿದೆ.

ಸೋಲಿಗರು, ಹೊಟ್ಟೆಪಾಡಿಗಾಗಿ ಇನ್ನೂ ಅನೇಕ ಉದ್ಯೋಗಗಳ ಬೆನ್ನು ಹತ್ತಬೇಕಾಗಿದೆ. ಮುಖ್ಯವಾಗಿ ಕಾಡು ಮತ್ತು ಸಮಾಜದಿಂದ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಬೇರೆಲ್ಲ ಕಸಬುಗಳಿಗಿಂತ ಕಾಡಿನಲ್ಲಿ ತರಕಾರಿ, ಹಣ್ಣುಹಂಪಲು ಬೆಳೆಯುವುದು, ಚಾಪೆ ಬುಟ್ಟಿ ಮುಂತಾದುವನ್ನು ಹೆಣೆಯುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ತಾವು ಬೆಳೆದ ತರಕಾರಿ ಹಣ್ಣುಹಂಪಲು ಚಾಪೆ ಬುಟ್ಟಿ ಮುಂತಾದವುಗಳನ್ನು ತಲೆಯ ಮೇಲೆ ಹೊತ್ತು ಕಾಲುನಡಗೆಯಲ್ಲೇ ಕಾಡನ್ನು ದಾಟಿ ಹಳ್ಳಿಯ ಸಂತೆಗೆ ಹೋಗುತ್ತಾರೆ. ಕಾಡಿನಿಂದ ತಂಧ ವಸ್ತುಗಳನ್ನು ಮಾರಿ ಬಂದ ಹಣದಿಂದ ತಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುತ್ತಾರೆ. ಮೊದಲಿಗೆ ಕಾಡಿನಿಂದ ಶೇಖರಿಸಿದ ಪದಾರ್ಥಗಳನ್ನು ಹಣಕ್ಕೆ ಮಾರದೆ ಅವಶ್ಯಕ ವಸ್ತುಗಳ ವಿನಿಮಯಕ್ಕೆ ಬಳಸಿಕೊಳ್ಳುತ್ತಿದ್ದರು.[3] ಈಗ ಆ ಪದ್ಧತಿ ಸಂಪೂರ್ಣ ಮಾಯವಾಗಿದೆ.

ಕಾಡಿನಲ್ಲಿ ಯಾವ ಯಾವ ಕಾಲದಲ್ಲಿ ಯಾವ ಯಾವ ಪದಾರ್ಥಗಳು ಯಥೇಚ್ಛವಾಗಿ ದೊರಕುತ್ತವೆ ಎಂಬುದನ್ನು ಸೋಲಿಗರು ಚೆನ್ನಾಗಿ ಬಲ್ಲರು. ಅವರು ಕಾಡಿನ ಗಿಡಮೂಲಿಕೆಗಳ ಸಂಗ್ರಹಣೆಯಲ್ಲೂ ಪರಿಣಿತರು. ವಿವಿಧ ಜಾತಿಯ ಪ್ರಾಣಿಗಳ ಕೋಡುಗಳು, ಮೂಳೆಗಳು, ಚರ್ಮ, ದೇಹದ ಅಪೂರ್ವ ಭಾಗಗಳು ಮುಂತಾದವುಗಳ ಸಂಗ್ರಹಕ್ಕೆ ವಿಶೇಷ ಗಮನ ನೀಡುತ್ತಾರೆ. ಅತಿಮಾನುಷ ಶಕ್ತಿ ಹಾಗೂ ಮಾಂತ್ರಿಕ ಮೌಲ್ಯಕ್ಕಾಗಿ ಅವನ್ನು ಶೇಖರಿಸಿ ಗ್ರಾಮಾಂತರ ಪ್ರದೇಶದ ಜನರೊಡನೆ ವಸ್ತು ವಿನಿಮಯ ಮಾಡಿಕೊಳ್ಳುವ ಪದ್ಧತಿಯುಂಟು. ನಿಸರ್ಗದೊಡನೆ ಅವರ ನಿಕಟ ಸಂಪರ್ಕ ಹಳ್ಳಿಗರು ಅವರನ್ನು ಮಾಟಮಂತ್ರಾಚರಣೆಗಳಿಗೂ ಬಳಸಿಕೊಳ್ಳುವಂತೆ ಮಾಡಿದೆ. ಎಷ್ಟೋ ಸಂದರ್ಭಗಳಲ್ಲಿ ಅಂಥ ಚಟುವಟಿಕೆಗಳಲ್ಲಿ ಪರಿಣತಿ ಸಾಧಿಸುವುದಕ್ಕಾಗಿ ಹಳ್ಳಿಗರು ಸೋಲಿಗರ ಶಿಷ್ಯರಾಗುವುದುಂಟು.

ಕಾಡುಗಳಲ್ಲೇ ಇರುವುದರಿಂದ ಸೋಲಿಗರು ಉತ್ತಮ ಬೇಟೆಗಾರರೂ ಹೌದು. ಕಾಡುಮೃಗಗಳ ಸ್ವಭಾವವನ್ನು ಅವರು ಚೆನ್ನಾಗಿ ಅರಿತಿದ್ದಾರೆ. ಕಡವೆ, ಸಾರಂಗ, ಹಂದಿ, ಕಾಡೆಮ್ಮೆ ಮುಂತಾದುವನ್ನು ಅವರು ಸುಲಭವಾಗಿ ಬೇಟೆಯಾಡುತ್ತಾರೆ.

ಪುರುಷರು ಮಾತ್ರ ಬೇಟೆಯಾಡುವುದು ಸಾಮಾನ್ಯ. ಒಂಟಿಯಾಗಿಯೊ ಗುಂಪಿನಲ್ಲೊ ಬೇಟೆಗೆ ಹೋಗುತ್ತಾರೆ. ಹಗಲು ಮತ್ತು ರಾತ್ರಿ - ಎರಡೂ ಹೊತ್ತು ಬೇಟೆ ನಡೆಸುವುದು ರೂಢಿ. ಕಾಡಿನಲ್ಲಿ ಬಹುವೇಗವಾಗಿ ಸಂಚರಿಸಬಲ್ಲರು. ಎದುರಿನಲ್ಲೇ ಕಾಡಾನೆ ಬಂದರೂ ಸುಲಭವಾಗಿ ತಪ್ಪಿಸಿಕೊಂಡು ಹೋಗುವ ಚತುರರು ಅವರು. ಬಿಲ್ಲು ಬಾಣ ಉಪಯೋಗಿಸುವುದರಲ್ಲೂ ಇವರು ನಿಸ್ಸೀಮರು. ಸುಯೋಜಿತ ಬೇಟೆ ತಂತ್ರಗಳೂ ಇವರಿಗೆ ಗೊತ್ತಿವೆ: ಪ್ರಾಣಿಗಳ ಕಡೆಯಿಂದ ಗಾಳಿ ಬೀಸುವ ದಿಕ್ಕಿನಲ್ಲಿ ಜಿಂಕೆ ಚರ್ಮವನ್ನು ಹೊದ್ದುಕೊಂಡು ಮುಂಗಾಲಿನಿಂದ ನೆಲ ಕೆರೆಯುತ್ತಾ ಮೇಯುವ ಹಾಗೆ ನಟಿಸಿ ಬೇರೆ

---

3. ವಾಣಿಜ್ಯ ವಿಧಾನಗಳಲ್ಲಿ ಬಹು ಪ್ರಾಚೀನವಾದುದೆಂದರೆ ವಸ್ತುಗಳ ವಿನಿಮಯ (Barter).

ಪ್ರಾಣಿಗಳ ಬೇಟೆಯಾಡುತ್ತಾರೆ. ಬೇಟೆಯಾಡುವವರ ಕಡೆಯಿಂದ ಗಾಳಿಯು ಪ್ರಾಣಿಗಳ ಕಡೆ ಬೀಸಿದರೆ ವಾಸನೆ ಹಿಡಿದು ಅವು ಪರಾರಿಯಾಗಬಹುದು ಎಂದು ಪ್ರಾಣಿಗಳ ಕಡೆಯಿಂದ ಗಾಳಿ ಬೀಸುವ ದಿಕ್ಕನಲ್ಲಿ ಈ ಬೇಟೆಯ ಸಂಚನ್ನು ಕೈಗೊಳ್ಳುತ್ತಾರೆ.

ಬೇಟೆಯ ಕಾರಣಕ್ಕಾಗಿ, ಕೆಲವು ಸಂದರ್ಭಗಳಲ್ಲಿ, ಸೋಲಿಗರು ಮೂಲಸ್ಥಾನ ಬಿಟ್ಟು ಬೇರೆಡೆಗೆ ವಲಸೆ ಹೋಗುವುದುಂಟು. ಆದರೆ ತಮ್ಮ ಸರಹದ್ದನ್ನು ದಾಟಿ ಹೋಗದಿರುವುದು ನಿಯಮ.

ಇತ್ತೀಚಿಗೆ ಕೆಲವು ಸೋಲಿಗರು ನೆರೆಹೊರೆಯ ಹಳ್ಳಿಗಳಿಗೆ ಹೋಗಿ ರೈತರ ಆಳುಮಕ್ಕಳಾಗಿ ದುಡಿಯುತ್ತಿದ್ದಾರೆ. ದಿನಗೂಲಿಗಳಾಗಿಯೊ ಒಂಟಿಯಾಗಿಯೊ ಹೋಗಿ ದುಡಿಯುತ್ತಾರೆ. ಅವರು ಹೀಗೆ ಕೃಷಿ ಕಾರ್ಮಿಕರಾಗಿ ಹೋಗುವುದರ ಉದ್ದೇಶ ಮುಂಗಾರಿನಲ್ಲಿ ಹೊಟ್ಟೆ ಹೊರೆಯಲು ಬೇಕಾದ ದವಸ ಧಾನ್ಯಗಳನ್ನು ಶೇಖರಿಸಿಟ್ಟುಕೊಳ್ಳುವುದು. ಹಳ್ಳಿಗೆ ಬಂದಾಗ ಹಳ್ಳಿಯ ಸರಹದ್ದಿನಾಚೆ ಗುಡಿಸಲು ನಿರ್ಮಿಸಿಕೊಂಡು ವಾಸಮಾಡುತ್ತಾರೆ. ಅನೇಕ ವೇಳೆ ರೈತರಲ್ಲಿ ಸಾಲಸೋಲ ಮಾಡಿ ಹಳ್ಳಿಯ ವ್ಯವಹಾರದಲ್ಲಿ ತೊಡಗಿ ಅಲ್ಲಿಯೇ ನೆಲೆಸಿರುವ ನಿದರ್ಶನಗಳಿವೆ. ಹೀಗೆ ಅನೇಕ ಕುಟುಂಬಗಳು ತಮ್ಮ ಮೂಲಸ್ಥಾನದಿಂದ ಕಳಚಿಕೊಂಡಿವೆ.

ಇಷ್ಟಾದರೂ ಅವರ ಆರ್ಥಿಕ ಚಟುವಟಿಕೆಗಳು ಜಡತನದಿಂದ ನರಳುತ್ತಿವೆ ಎಂದೇ ಹೇಳಬೇಕಾಗಿದೆ:

೧. ಕಾಡಿನಲ್ಲಿ ನೆಲೆಸಿರುವ ಈ ಬುಡಕಟ್ಟು ಸಮೂಹ ಮೂಲಸ್ಥಾನದಿಂದ ಕದಲದೆ ಜೀವನ ನಡೆಸಬಯಸುವುದು

೨. ಭೂಮಿಯ ಫಲವತ್ತತೆಯನ್ನು ಅನುಸರಿಸಿ 'ಕೆತ್ಲು' ಬೇಸಾಯಕ್ಕೆ ತೊಡಗದಿರುವುದು

೩. ಕಾಡಿನ ಸಂಪನ್ಮೂಲಗಳನ್ನು ಅತ್ಯಲ್ಪ ಬೆಲೆಗೆ ಖಾಸಗಿಯವರಿಗೆ ಮಾರುವುದು

೪. ಕೃಷಿ ಕಾರ್ಮಿಕರಾಗಿ ಹಳ್ಳಿಗಳಿಗೆ ಹೋದವರು ದುಷ್ಚಟಗಳಿಗೆ ಬಲಿಯಾಗಿ ಸಾಲಸೋಲದಲ್ಲಿ ಮುಳುಗುವುದು

೫. ಹೊಸ ಆರ್ಥಿಕ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವುದು

ಈ ಬಗೆಯ ಜಡತನವನ್ನು ದೂರ ಮಾಡಲು ಕೆಳಗೆ ಕಾಣಿಸಿದ ಕೆಲವು ಪರಿಹಾರ ಕ್ರಮಗಳನ್ನು ಕೈಗೊಳ್ಳಬಹುದು:

೧. ಹೆಚ್ಚು ಕಾಲ ಬಾಳುವಂತಹ ವಾಸದ ಮನೆಗಳನ್ನು ಕಟ್ಟಿಕೊಡುವುದು

೨. ಎಲ್ಲೆಲ್ಲಿ ಸಾಧ್ಯವೊ ಅಲ್ಲಲ್ಲಿ ಕೃಷಿಗೆ ಯೋಗ್ಯವಾದ ಭೂಮಿಯನ್ನು ವಿತರಿಸುವುದು

೩. ಕಾಡಿನ ಸಂಪನ್ಮೂಲಗಳ ಶೇಖರಣೆ ಕ್ರಮಬದ್ಧವಾಗಿರುವಂತೆ ನೋಡಿಕೊಳ್ಳುವುದು

೪. ಶೇಖರಿಸಿದ ಸಾಮಗ್ರಿಗಳ ಮಾರಾಟಕ್ಕೆ ಸಹಕಾರ ಸಂಘಗಳನ್ನು ಸ್ಥಾಪಿಸುವುದು

೫. ಹೊಸ ಆರ್ಥಿಕ ಚಟುವಟಿಕೆಗಳ ಸಂಬಂಧ ಸೂಕ್ತ ರೀತಿಯಲ್ಲಿ ತರಬೇತಿ ನೀಡುವುದು

ಈ ಸೋಲಿಗರೇ ಅಲ್ಲದೆ ಕರ್ನಾಟಕದ ಉಳಿದ ಬುಡಕಟ್ಟು ಜನರೂ ಬದಲಾದ ಪರಿಸ್ಥಿತಿಯಲ್ಲಿ ವಿಭಿನ್ನ ಮಾದರಿಯ ಜೀವನ ಕ್ರಮವನ್ನು ರೂಢಿಸಿಕೊಳ್ಳುತ್ತಿದ್ದಾರೆ. ಈ ಎಲ್ಲ

ಬುಡಕಟ್ಟು ಜನರಲ್ಲೂ, ಇಂದು, ಚಹಾ ಜನಪ್ರಿಯವಾಗಿದೆ. ರಸ್ತೆ ಬದಿ ಚಹಾ ಅಂಗಡಿಗಳನ್ನು ತೆರೆದಿರುವ ನಿದರ್ಶನಗಳೂ ಇವೆ. ಕೈಮಗ್ಗದ ಬಟ್ಟೆಗಳಿಗೆ ಬದಲಾಗಿ ಮಿಲ್ ಬಟ್ಟೆಗಳ ಧೋತಿ, ಸೀರೆಗಳನ್ನು ಧರಿಸುತ್ತಿದ್ದಾರೆ. ಸಾಂಪ್ರದಾಯಿಕ ಶಿಕ್ಷಣದ ಪ್ರವೇಶ ಪಡೆದವರೇ ಅಲ್ಲದೆ ಇತರರು ಕೂಡ ಮೈಗೆ ಅರೆತೋಳಿನ ಅಂಗಿ ಹಾಕುವುದನ್ನು ರೂಢಿಸಿಕೊಂಡಿದ್ದಾರೆ. ಚಿಕ್ಕ ಹೆಣ್ಣುಮಕ್ಕಳಿಗೆ ಲಂಗ ತೊಡಿಸುತ್ತಾರೆ. ಕೊರಳಿಗೆ ಮಣಿಸರಗಳನ್ನೂ ಕಿವಿಗೆ ಒಡವೆಗಳನ್ನು ತೊಡಿಸುತ್ತಾರೆ. 'ಗುಂಗು' ಬಳಸುವುದಕ್ಕೆ ಬದಲಾಗಿ ಬಟ್ಟೆ ಛತ್ರಿಗಳನ್ನು ಬಳಸುತ್ತಾರೆ. ಹೆಚ್ಚು ಕಡಿಮೆ ಎಲ್ಲ ಮನೆಗಳಲ್ಲೂ ರೇಡಿಯೊಗಳಿವೆ. ಕೆಲವು ನೆಲೆಗಳಂತೂ ವಿದ್ಯುದೀಕರಣಕ್ಕೊಳಗಾಗಿವೆ. ಬಹುತೇಕ ಎಲ್ಲ ಮುಖ್ಯ ನೆಲೆಗಳಲ್ಲೂ ಶಾಲೆಗಳಿವೆ.

ನಗರ ಸಂಪರ್ಕದಿಂದಾಗಿ ಬುಡಕಟ್ಟು ಸಮೂಹದ ಸ್ತ್ರೀಯರಲ್ಲಿ ಗಾಜಿನ ಬಳೆಗಳೂ ಜನಪ್ರಿಯವಾಗಿವೆ. ಸಾಬೂನು, ಹಣಿಗೆ, ಚಪ್ಪಲಿಗಳೂ ಸುಪರಿಚಿತ, ಹಚ್ಚೆ ಹುಯ್ಯಿಸಿಕೊಳ್ಳುವುದು ಮಾಯವಾಗುತ್ತಿದೆ. ಬುಡಕಟ್ಟು ಸಮೂಹದ ಮಕ್ಕಳಂತೂ ನಗರದ ಬಗೆ ಬಗೆಯ ಬಣ್ಣದ ಸಲಕರಣೆಗಳಿಂದ ಆಕರ್ಷಿತರಾಗಿದ್ದಾರೆ. ಪೆನ್ನು, ಬ್ಯಾಟರಿ, ಕನ್ನಡಕ ಕ್ಯಾಮೆರಾ ಇತ್ಯಾದಿಗಳ ವ್ಯಾಮೋಹ ಹೆಚ್ಚಾಗುತ್ತಿದೆ.

ಮತಾಂತರ ಮತ್ತು ಶಿಕ್ಷಣದ ಪ್ರವೇಶ ಜನಪದ ಕುಣಿತ ಮಣಿತಗಳ ಮೇಲೆ ಕೂಡ ಪ್ರಭಾವ ಬೀರಿವೆ. ಶಾಲೆಗೆ ಹೋಗುವ ಮಕ್ಕಳು ಪರಂಪರಾಗತ ಕುಣಿತವನ್ನು ಹಳೆಯ ಪ್ಯಾಷನ್ ಎಂದೇ ತಿಳಿಯುತ್ತವೆ. ಹೊರಗಿನಿಂದ ಬುಡಕಟ್ಟು ನೆಲೆಗಳಿಗೆ ಬೋಧನೆಗೆ ಹೋಗುವ ಅಧ್ಯಾಪಕರುಗಳು ಕೂಡ, ಕೆಲವೊಮ್ಮೆ, ಬುಡಕಟ್ಟಿನ ಕಲೆಗಳನ್ನು ತಿರಸ್ಕಾರದಿಂದ ಕಾಣುತ್ತಾರೆ. ಅವು ಲೈಂಗಿಕ ಸ್ವೇಚ್ಛಾಚಾರಕ್ಕೆ ದಾರಿ ಮಾಡಿಕೊಡುತ್ತವೆ ಎಂದು ತಪ್ಪಾಗಿ ಗ್ರಹಿಸುತ್ತಾರೆ. ಹೀಗಾಗಿ ಎಷ್ಟೋ ಬುಡಕಟ್ಟು ನೆಲೆಗಳ ಮಕ್ಕಳು ಪರಂಪರಾಗತ ಆಟೋಟಗಳನ್ನು ಮರತೇ ಬಿಟ್ಟಿವೆ.

ಸಾರಿಗೆ ಸಂಪರ್ಕದ ಅನುಕೂಲ ಇರುವೆಡೆಗಳಲ್ಲಿ ಬುಡಕಟ್ಟು ಜನರು ಅತ್ಯಂತ ವೇಗವಾಗಿ ಚಲಿಸುವ ಬಸ್ಸುಗಳಲ್ಲೂ ಪ್ರಯಾಣಿಸುತ್ತಾರೆ. ಇಲ್ಲದೆಡೆಗಳಲ್ಲಿ ಎಷ್ಟೇ ದೂರವಾದರೂ ಕಾಲ್ನಡಿಗೆಯಲ್ಲೇ ನಡೆದು ಹೋಗುತ್ತಾರೆ. ಈಗೀಗ ಸಾಕಷ್ಟು ಸಂಖ್ಯೆಯಲ್ಲಿ ಬೈಸಿಕಲ್ಲುಗಳೂ ಪ್ರವೇಶ ಹೊಂದಿವೆ. ಅದರಿಂದ, ಹೆಚ್ಚಿನ ವೆಚ್ಚವಿಲ್ಲದೆ ಸಮುದಾಯದ ಇತರರ ಸಂಪರ್ಕ ಸುಲಭ ಸಾಧ್ಯವಾಗಿದೆ.

ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದ ಬುಡಕಟ್ಟು ಸಮೂಹಗಳಲ್ಲಿ ಶಿಕ್ಷಣವು ನೂರಕ್ಕೆ ನೂರು ಯಶ ಸಾಧಿಸಿದೆ. ಹೀಗೆ ಶಿಕ್ಷಣ ಹೊಂದಿದವರಿಗೆ ಸಾಮಾಜಿಕ ಪ್ರತಿಷ್ಠೆಯೂ ಲಭಿಸಿದೆ. ಬುಡಕಟ್ಟು ಜನರ ವಿವೇಚನಾಶಕ್ತಿಯನ್ನು ಬೆಳೆಸಿರುವುದರೊಂದಿಗೆ ಸಂಸ್ಕೃತಿ ಅನುಷ್ಠಾನದಲ್ಲಿ ಬದಲಾವಣೆ ಗೋಚರಿಸಿದೆ. ನೆರೆಹೊರೆಯ ಸಮುದಾಯಗಳಲ್ಲಿ ಪ್ರಚಲಿತವಿರುವ ವಿಧಿ ನಿಷೇಧ ಸಂಪ್ರದಾಯಾಚರಣೆಗಳನ್ನಷ್ಟೆ ಮುಂದುವರಿಸಿಕೊಂಡು ಹೋಗುವ ಇಚ್ಛೆಯೂ ವ್ಯಕ್ತಗೊಂಡಿದೆ. ಇದು ಬುಡಕಟ್ಟು ಸಮೂಹಗಳು ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಬುಡಕಟ್ಟು ಕುಣಿತ ಮತ್ತು ಮೇಳಗಳು ಬದಲಾದ ಆರ್ಥಿಕ ಜೀವನಕ್ಕೆ ಹೊಂದಿಕೊಂಡಂತೆ ಹೊಸ ಆಯಾಮವನ್ನೇ ಪಡೆದಿವೆ.

ಹೋಬಳಿ, ತಾಲ್ಲೂಕು, ಜಿಲ್ಲೆ, ರಾಜ್ಯಮಟ್ಟಗಳಲ್ಲಿ ಪಾಲ್ಗೊಳ್ಳುತ್ತಿರುವ ವಿವಿಧ ಬುಡಕಟ್ಟು ಕಲಾ ತಂಡಗಳು ಈಗ ಪ್ರಶಸ್ತಿಗಳನ್ನು ಗಳಿಸುತ್ತಿವೆ. ಆಕಾಶವಾಣಿ, ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಇಡೀ ಜಗತ್ತಿಗೆ ತಮ್ಮ ಕಲೆಗಳ ವೈಭವವನ್ನು ಪ್ರದರ್ಶಿಸುತ್ತಿವೆ. ಇವೆಲ್ಲಾ ಬಿಡಿ ಬಿಡಿಯಾದ ಪ್ರಯತ್ನಗಳು - ಪರಂಪರಾಗತ ಬುಡಕಟ್ಟು ಸಂಸ್ಕೃತಿ ವಿಕಾಸ ಹೊಂದಲು ಇದು ಒಂದು ಅವಕಾಶವಾಗಿದೆ.

ಬದಲಾದ ಆರ್ಥಿಕ ವ್ಯವಸ್ಥೆಯಿಂದಾಗಿ ಬುಡಕಟ್ಟು ಸಮೂಹಗಳು ಸಣ್ಣ ಹಿಡುವಳಿದಾರರು ಮತ್ತು ಕೃಷಿಕಾರ್ಮಿಕರಾಗಿ ಪರಿವರ್ತಿತರಾಗಿದ್ದಾರೆ. ಸಾಗುವಳಿ ಜಮೀನು ವಿತರಣೆಯಲ್ಲಿ ವಂಚನೆಯ ಪ್ರಕರಣಗಳು ನಡೆದಿದ್ದು ಬುಡಕಟ್ಟು ಗುಂಪುಗಳಿಗೆ ಸೇರಿದವರಿಗೆ ವರ್ಗಾವಣೆ ಮಾಡಿರುವ ನಿದರ್ಶನಗಳು ಅವರನ್ನು ಬೆಚ್ಚಿ ಬೀಳಿಸಿವೆ. ನಗರೀಕರಣ, ಕೈಗಾರೀಕರಣಗಳು ಅವರ ಸಮಸ್ಯೆಗಳನ್ನು ಮತ್ತಷ್ಟು ತೀವ್ರಗೊಳಿಸಿವೆ. ಕೈ ಹಿಡಿತವಿಲ್ಲದೆ ಭರಿಸುವ ವೆಚ್ಚದಿಂದಾಗಿ ಬುಡಕಟ್ಟು ಜನ ಸಾಲದಲ್ಲಿ ಮುಳುಗಿ ಹೋಗಿರುವುದು ದುರ್ದೈವ. ಕೈಸಾಲಗಳಿಗೆ ಭೂಮಿಯನ್ನು ಪರಭಾರ ಮಾಡಿಕೊಡದಂತೆ ಶಾಸನ ತಂದರೆ ಮಾತ್ರ ಸರ್ಕಾರ ಅವರಿಗೆ ನೀಡಿರುವ ಭೂಮಿ ಅವರ ಹೆಸರಿನಲ್ಲಿಯೇ ಉಳಿಯುವುದು ಸಾಧ್ಯ.

ಈಗೀಗ ಸಂಪೂರ್ಣವಾಗಿ ಕಾಡನ್ನೇ ಅವಲಂಬಿಸಿ ಜೀವನ ನಡೆಸುವವರು ಯಾರೂ ಇಲ್ಲ. ಕಾಡಿನ ನಾಶವೇ ಅದಕ್ಕೆ ಕಾರಣ. ಎಲ್ಲೆಲ್ಲಿ ದಟ್ಟ ಕಾಡಿದೆಯೊ ಅಲ್ಲೆಲ್ಲಾ ಇಂದಿಗೂ ಬುಡಕಟ್ಟು ಸಮೂಹಗಳು ನೆಲೆಸಿವೆ. ಆದರೆ, ಮೊದಲಿನಂತೆ ಈಗ ಯಾವ ಬುಡಕಟ್ಟುಗಳೂ ಕಾಡಿನ ಯಾಜಮಾನ್ಯವನ್ನು ಉಳಿಸಿಕೊಂಡಿಲ್ಲ. ಅವರ ಹಕ್ಕುಗಳನ್ನು ಮಿತಿಗೊಳಪಡಿಸಲಾಗಿದೆ. ಆದರೆ ಅವರಲ್ಲಿ ಕೃಷಿಯನ್ನು ಉತ್ತೇಜಿಸುವ ಯತ್ನ ಮಾಡಲಾಗುತ್ತಿದೆ. ಸಾರಿಗೆ ಸಂಪರ್ಕ, ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯ ಒದಗಿಸುವ ವಿಷಯದಲ್ಲಿ ತಕ್ಕಷ್ಟು ಸುಧಾರಣೆ ಕಂಡು ಬಂದಿದೆ. ಅನೇಕ ನೆಲೆಗಳಲ್ಲಿ ಕೃಷಿ ಕಾರ್ಯಗಳಿಗಾಗಿ ಉತ್ತಮ ತಳಿಯ ಬೀಜ, ರಾಸಾಯನಿಕ ಗೊಬ್ಬರ ಬಳಕೆ ಜನಪ್ರಿಯವಾಗುತ್ತಿವೆ. ಭೂಒಡೆತನ ಹೊಂದಿರುವ ಬಹುತೇಕ ಎಲ್ಲ ಬುಡಕಟ್ಟು ಕುಟುಂಬಗಳೂ ವರ್ಷಕ್ಕೊಂದು ಬೆಳೆ ತೆಗೆಯುವುದು ಸಾಮಾನ್ಯ. ಸಂಪನ್ಮೂಲಗಳ ಕೊರತೆಯಿಂದಾಗಿ ಇನ್ನೂ ಎಷ್ಟೋ ಕುಟುಂಬಗಳು ಕೃಷಿರಂಗಕ್ಕೆ ಇಳಿದಿಲ್ಲದಿರುವುದೂ ಉಂಟು. ಆದರೂ ಪರಿಸ್ಥಿತಿ ಸುಧಾರಿಸುತ್ತಿದೆ. ಸಾಲ ಮಾಡುವುದು ಕಡಿಮೆಯಾಗುತ್ತಿದೆ. ಶಿಕ್ಷಣ ವಿಸ್ತರಣೆ, ನಗರ ಪ್ರದೇಶಗಳಲ್ಲಿ ಉದ್ಯೋಗಾನ್ವೇಷಣೆ ಆರಂಭಗೊಂಡಿರುವುದೇ ಅದಕ್ಕೆ ಆಧಾರ.

ನೂರಾರು ಕೃಷಿಕಾರ್ಮಿಕರು ಬೇಸಾಯದ ಋತುಗಳಲ್ಲಿ ತಮ್ಮ ಸುತ್ತಿನ ಹಳ್ಳಿಗಳಿಗೆ ಕೆಲಸಕ್ಕೆ ಹೋಗುವುದು ಸಾಮಾನ್ಯ. ತಿಂಗಳ ಸಂಬಳ ನಿಗದಿ ಮಾಡಿಸಿಕೊಂಡು ನಾಲ್ಕೈದು ತಿಂಗಳ ಕಾಲ ದುಡಿದು ಹಣ ಸಂಪಾದಿಸುತ್ತಾರೆ. ಬೇಸಾಯದ ಸಂದರ್ಭದಲ್ಲಿ ನಡೆಯುವ ಈ ವಲಸೆಯಲ್ಲಿ ಸಾಲದ ಸೌಲಭ್ಯವೂ ಇರುತ್ತದೆ. ಇದು ಸ್ಥಳೀಯ ಸಮುದಾಯದವರೊಡನೆ ನಿರಂತರ ಸಂಪರ್ಕ ಸಾಧನೆಗೆ ಅವಕಾಶಕಲ್ಪಿಸಿದೆ. ಪರಿಣಾಮವಾಗಿ ಗುಡಿ ಕೈಗಾರಿಕೆಗಳು ಜನಪ್ರಿಯವಾಗುತ್ತಿವೆ. ಆದರೆ ತಾಂತ್ರಿಕ ಜ್ಞಾನದ

ಕೊರತೆಯಿಂದಾಗಿ ಕೈಗಾರಿಕಾ ಸಂಕೀರ್ಣಗಳಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಹೊಂದುವ ಅವಕಾಶ ತಪ್ಪಿದೆ.

ಸದ್ಯ ಕೈಗಾರಿಕೀಕರಣದ ಸುಳಿಗೆ ಸಿಕ್ಕಿಹಾಕಿಕೊಂಡಿರುವ ಬುಡಕಟ್ಟಿನ ಜನತೆ ಸಾಕಷ್ಟು ಪರಿವರ್ತನೆಗೆ ಗುರಿಯಾಗಿದ್ದಾರೆ. ಕೈಗಾರಿಕಾ ನೀತಿ ಬಾಂಧವ್ಯ ವಿಸ್ತರಣೆಗೆ. ಅವಕಾಶ ಮಾಡಿಕೊಟ್ಟಿದೆ. ಕೈಗಾರಿಕೆಯಲ್ಲಿಸಾಧನೆ ತೋರಿದವರಿಗೆ ವಿಶೇಷ ಮನ್ನಣೆ ಪುರಸ್ಕಾರಗಳು ಲಭಿಸುತ್ತಿವೆ. ಇಷ್ಟಾದರೂ ಬಹು ಮಹತ್ವದ ಬದಲಾವಣೆಯೆಂದರೆ ಸಮಾನಾಂತರ ಕೊರತೆ. ಬುಡಕಟ್ಟು ಕಾರ್ಮಿಕರು ಇತರ ಸಮುದಾಯದ ಕಾರ್ಮಿಕರೊಡನೆ ಪಾರಸ್ಪರ್ಯ ಕ್ರಿಯೆಗೊಳಗಾಗುತ್ತಿರುವುದರಿಂದ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರತಿಯೊಂದು ನೆಲೆಯ ಮುಖ್ಯರೂ ತಮ್ಮ ಗುಂಪಿನ ಜನರ ಮೇಲಿನ ಹಿಡಿತವನ್ನು ಕಳೆದುಕೊಳ್ಳುತ್ತಿದ್ದಾರೆ.

ಕೈಗಾರಿಕಾ ಕ್ಷೇತ್ರದ ಪ್ರಭಾವದಿಂದಾಗಿ ಗುಂಪು ಅನನ್ಯತೆಯ ವಿಸ್ತರಣಾ ಪ್ರವೃತ್ತಿಗಳೂ ಕಾಣಿಸಿಕೊಳ್ಳುತ್ತಿವೆ. ಅಂತರ್ ಬುಡಕಟ್ಟು ವಿವಾಹ, ವಾಣಿಜ್ಯ ಸಂಬಂಧಗಳು ಕುದುರುತ್ತಿವೆ. ರಾಜಕೀಯ ಸಂಘಟನೆಗಳಲ್ಲಿ ನೇರ ಸಹಭಾಗಿತ್ವ ಕಾಣಿಸುತ್ತಿದೆ. ಸಮೂಹ ಮಾಧ್ಯಮಗಳ ಸಂಪರ್ಕ ಏರ್ಪಡುತ್ತಿದೆ. ಉಡುಗೆ ತೊಡುಗೆ, ಆಹಾರ ಪದ್ಧತಿ ಎಲ್ಲ ವಿಷಯಗಳಲ್ಲೂ ಆಧುನಿಕತೆ ನುಸುಳುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ ಬುಡಕಟ್ಟು ಜನ ಇತರ ಸಮುದಾಯಗಳೊಡನೆ ಮುಕ್ತವಾಗಿ ಬೆರೆಯಲಾರಂಭಿಸಿದ್ದಾರೆ. ಇದು ರಾಷ್ಟ್ರ ಜೀವನದ ಮುಖ್ಯವಾಹಿನಿಗೆ ಅವರನ್ನು ಎಳೆದು ತರುವ ಪ್ರಯತ್ನವೇ ಆಗಿದೆ.

* * *

ಬುಡಕಟ್ಟು ಸಮೂಹಗಳ ಏಳಿಗೆಗಾಗಿ ಖಾಸಗಿ ಸಂಘ ಸಂಸ್ಥೆಗಳೊಡನೆ ಸರ್ಕಾರವೂ ಶ್ರಮಿಸುತ್ತಿದೆ. ರಾಜ್ಯ ಸರ್ಕಾರ ಈಚಿನ ವರ್ಷಗಳಲ್ಲಿ ಬುಡಕಟ್ಟು ಕಲ್ಯಾಣ ಯೋಜನೆಗಳಿಗಾಗಿ ಯೋಜನಾ ವೆಚ್ಚದ ಪ್ರಮಾಣವನ್ನು ಏರಿಸಿದೆ. ಇತರ ರಾಜ್ಯಗಳಲ್ಲಿನಂತೆ ಇಲ್ಲಿಯೂ ಕೆಲವು ಜನಪ್ರಿಯ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಸೇವೆಗಳಲ್ಲಿ ಇವರಿಗೆ ಮೀಸಲಾತಿಯನ್ನು ಒದಗಿಸಲಾಗಿದೆ. ಶೈಕ್ಷಣಿಕ ಸಂಸ್ಥೆಗಳಿಗೆ ವಿದ್ಯಾರ್ಥಿನಿಲಯಗಳಿಗೆ ವಿಶೇಷ ಧನಸಹಾಯ ನೀಡಲಾಗುತ್ತಿದೆ. ಅಂತ್ಯೋದಯ ಯೋಜನೆಯಡಿ ಬುಡಕಟ್ಟು ಸಮಾಜದ ಅಂತ್ಯಜನನ್ನು ಗುರುತಿಸಿ ಅವನಿಗೆ ಸಹಾಯಧನ, ಅತಿ ಕಡಿಮೆ ದರದ ಬಡ್ಡಿಯಲ್ಲಿ ಸಾಲ, ಕಡಿಮೆ ವೆಚ್ಚದ ಮನೆಯನ್ನು ಒದಗಿಸಲಾಗಿದೆ. ಅಂತೆಯೇ ಸಾಮಾಜಿಕ ಅರಣ್ಯಯೋಜನೆಯಡಿ ಕಾಡುಭೂಮಿಯನ್ನು ಕೃಷಿಗಾಗಿ ಮಂಜೂರು ಮಾಡಲಾಗಿದೆ. ಸಾಮಾಜಿಕ ಸುರಕ್ಷತಾ ನೆಡುತೋಪು ಯೋಜನೆಯನ್ವಯ ಕಾಡಿನ ಉತ್ಪನ್ನದ ಅರ್ಧ ಭಾಗವನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಬಹುತೇಕ ಗಿರಿಜನರು ಕಾಡುಮೇಡುಗಳಲ್ಲಿ ನೆಲೆಸಿರುವುದು ಈಗ ಕರ್ನಾಟಕ ಸರಕಾರಕ್ಕೆ ದೃಢಪಟ್ಟಿದೆ. ಬುಡಕಟ್ಟು ಸಮೂಹಗಳು ಹೊಟ್ಟೆ ಹೊರೆಯುವುದಕ್ಕಾಗಿ ಕಾಡಿನ ಉತ್ಪನ್ನಗಳಾದ ಜೇನುತುಪ್ಪ, ಹಣ್ಣುಹಂಪಲು, ಮರದ ತೊಗಟೆಗಳನ್ನು ಶೇಖರಿಸಿ ಮಾರಾಟ ಮಾಡುವುದು ಸರ್ಕಾರದ ಲಕ್ಷ್ಯದಲ್ಲಿದೆ. ಅದಕ್ಕಾಗಿ ಈ ಪದಾರ್ಥಗಳಿಗೆ ಸಂಭಾವನಾ ಬೆಂಬಲ (?) ಬೆಲೆಯನ್ನು ನಿಗದಿ ಮಾಡಿ ಅವುಗಳ ಮಾರಾಟಕ್ಕಾಗಿ ಸುಮಾರು ೨೦ ಕ್ಕೂ ಹೆಚ್ಚು

ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳು ಈ ಜನರನ್ನು ಒಂದುಗೂಡಿಸಲು, ಕಾಡಿನ ಉತ್ಪನ್ನಗಳನ್ನು ದೊರಕಿಸಿಕೊಳ್ಳಲು, ಇತರ ಸಮುದಾಯದವರೊಡನೆ ಈ ಜನತೆ ಸಂಪರ್ಕ ಸಾಧಿಸಲು ಸಹಾಯಕವಾಗಿವೆ.

ಬುಡಕಟ್ಟು ಜನರ ಬದುಕನ್ನು ಸುಧಾರಿಸುವುದಕ್ಕಾಗಿ ಸರ್ಕಾರ ಅನೇಕ ತರಪೇತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ: ಜೇನು ಸಾಕಣೆ, ಬಡಗಿ ಕೆಲಸ, ಕಮ್ಮಾರಿಕೆ, ಆಹಾರೋತ್ಪನ್ನಗಳ ಸಂಸ್ಕರಣ ಕ್ರಿಯೆ ಇವೇ ಮುಂತಾದವಕ್ಕೆ ಸೂಕ್ತ ರೀತಿಯಲ್ಲಿ ತರಪೇತು ನೀಡಲಾಗುತ್ತಿದೆ.

ರೇಷ್ಮೆ ಇಲಾಖೆಯೂ ಕಾಡಿನಲ್ಲಿ ಮಲಬರಿ ಮರಗಳ ನೆಡುವಿಕೆಗೆ ವಿಶೇಷ ಅವಕಾಶ ಕಲ್ಪಿಸಿದೆ. ಈ ಮರಗಳನ್ನು ಬೀಳುಬಿದ್ದ ಜಮೀನಿನಲ್ಲಿ ನೆಡಲಾಗುತ್ತಿದೆ. ಈ ಉದ್ದೇಶಕ್ಕಾಗಿ ಪ್ರತಿಯೊಂದು ಬುಡಕಟ್ಟು ಕುಟುಂಬಕ್ಕೂ ತಲಾ ಒಂದು ಎಕರೆ ಭೂಮಿಯನ್ನು ನೀಡಲಾಗಿದೆ.

ಬುಡಕಟ್ಟುಗಳ ಸರ್ವಾಂಗೀಣ ಪ್ರಗತಿ ಸಾಧಿಸಲು ಕರ್ನಾಟಕದ ಬುಡಕಟ್ಟುಗಳ ಅಭಿವೃದ್ಧಿ ಕಾರ್ಪೊರೇಷನ್ ಸ್ಥಾಪಿತವಾಗಿದೆ. ಅಗತ್ಯ ಉದ್ದೇಶಗಳಿಗಾಗಿ ಬುಡಕಟ್ಟು ಜನರಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಈ ಸಂಸ್ಥೆ ಶ್ರಮಿಸುತ್ತಿದೆ. ಸದ್ಯ ಇದರ ಲಾಭವನ್ನು ಪಡೆದುಕೊಂಡಿರುವ ಬುಡಕಟ್ಟು ಸಮೂಹಗಳು ಅತ್ಯಲ್ಪ.

ಒಟ್ಟಿನಲ್ಲಿ ಕರ್ನಾಟಕ ಸರ್ಕಾರ ಬುಡಕಟ್ಟು ಜನತೆಯ ಆರ್ಥಿಕ ಮಟ್ಟವನ್ನು ಸುಧಾರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರಲ್ಲಿ ಬಹುತೇಕ ಕಾರ್ಯಕ್ರಮಗಳು ಬುಡಕಟ್ಟು ಜನರ ಮೇಲೆ ಯಾವ ಪ್ರಭಾವವನ್ನೂ ಬೀರಿಲ್ಲವೆಂದರೆ ಸೋಜಿಗವಾಗುತ್ತದೆ. ನಾಗರಿಕ ಸಂಪರ್ಕ ಸುಧಾರಿಸಿಲ್ಲದಿರುವುದೇ ಅದಕ್ಕೆ ಪ್ರಬಲ ಕಾರಣ ಎನ್ನಿಸಿದರೂ ಪುನರ್‌ವಸತಿ ಕಾರ್ಯಕ್ರಮಗಳು ವಿಫಲಗೊಂಡಿರುವುದೂ ಅದಕ್ಕೆ ಕಾರಣ. ಎಲ್ಲಕ್ಕಿಂತ ಮುಖ್ಯವಾಗಿ ಭೂಮಿಯ ವಿತರಣೆಯಲ್ಲಾದ ವಂಚನೆ ಅವರನ್ನು ಧೃತಿಗೆಡಿಸಿದೆ. ಸಾಂಪ್ರದಾಯಿಕ ಶಿಕ್ಷಣ ನೀಡುವುದಕ್ಕಾಗಿ ರೂಪುಗೊಂಡ 'ಆಶ್ರಮ' ಗಳು ಅವರಲ್ಲಿ ಶ್ರದ್ಧಾಸಕ್ತಿಯನ್ನು ಹುಟ್ಟಿಸಿಲ್ಲ,[4] ಈ ಜನತೆ ಒಂದು ಹೊಸ ಸಾಮಾಜಿಕ - ಆರ್ಥಿಕ ಪರಿಸ್ಥಿತಿಯಲ್ಲಿ ಸಿಲುಕಿರುವುದೇ ಈ ಎಲ್ಲ ಗೊಂದಲಕ್ಕೆ ಕಾರಣವಾಗಿದೆ. ತೃಪ್ತಿಕರ ಸಂಖ್ಯೆಯಲ್ಲಿ ಶಿಕ್ಷಣಾರ್ಥಿಗಳಿಲ್ಲದಿರುವುದರಿಂದ ಶಿಕ್ಷಣ ಇವರಲ್ಲಿ ವಿಸ್ತರಣೆ ಹೊಂದಲಿಲ್ಲ. ಇದರಿಂದಾಗಿ ಸರ್ಕಾರಿ ಸಂಸ್ಥೆಗಳಲ್ಲಿ ಬುಡಕಟ್ಟು ಜನ ಉದ್ಯೋಗ ದೊರಕಿಸಿಕೊಳ್ಳುವುದು ಕನಸಾಗಿದೆ.

ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಕಷ್ಟು ಲೋಪದೋಷಗಳಿದ್ದರೂ ಅಭಿವೃದ್ಧಿ ಸಂಸ್ಥೆಯ ಪ್ರಯತ್ನಗಳನ್ನು ಸಾರಾಸಗಟಾಗಿ ಕಡೆಗಣಿಸಲಾಗುವುದಿಲ್ಲ. ಮುಖ್ಯವಾಹಿನಿಯೊಂದಿಗೆ ಬೆರೆತು ಬಾಳುವೆ ನಡೆಸಲು ಅನುಕೂಲ ಕಲ್ಪಿಸುವ ಸಹಕಾರ ಸಂಘಗಳು ಇನ್ನೂ ಹೆಚ್ಚು ರಚನಾತ್ಮಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಚಿಸಿದರೆ ಮಾತ್ರ ಉದ್ದೇಶ ಫಲ ನೀಡಿತು.

---

4. ತಮ್ಮವರೊಡನೆ ಹೊಂದಿಕೊಂಡು ಬಾಳುವೆ ನಡೆಸಲು ವಿದ್ಯೆ ಅಡ್ಡಿಯಾಗುತ್ತದೆ ಎಂದು ಅವರ

ಬುಡಕಟ್ಟು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಕೆಲವು ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ಮತ್ತು ಬದ್ಧತೆಯಿಂದ ನಿರ್ವಹಿಸಿದಂತೆ ಕಾಣುವುದಿಲ್ಲ. ಇದು ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳು ಏಕೆ ಸಾಮಾಜಿಕ ಆರ್ಥಿಕ ಜೀವನದ ಮೇಲೆ ಕಡಿಮೆ ಪ್ರಭಾವವನ್ನು ಬೀರಿವೆ ಎಂಬುದನ್ನು ಹೇಳುತ್ತದೆ.

ಅದೇನೇ ಇರಲಿ. ಕಳೆದ ಎರಡು ದಶಕಗಳಿಂದೀಚೆಗೆ ಬುಡಕಟ್ಟು ಜನರ ಜೀವನ ಮತ್ತು ಸಂಸ್ಕೃತಿಯ ಬಗೆಗೆ ಕಾಳಜಿಯಿರುವ ಸಂಶೋಧಕರು ಸಾಕಷ್ಟು ರಚನಾತ್ಮಕ ಮತ್ತು ಆಡಳಿತಾತ್ಮಕ ಸಲಹೆಗಳನ್ನು ನೀಡಿದ್ದಾರೆ. ಅಧಿಕಾರಶಾಹಿ ಇದನ್ನು ಲಕ್ಷ್ಯಕ್ಕೆ ತೆಗೆದುಕೊಂಡೇ ಇಲ್ಲ. ಇನ್ನಾದರೂ ಬುಡಕಟ್ಟು ಜನರ ಕಲ್ಯಾಣದ ಬಗೆಗೆ ನಿಜವಾಗಿಯೂ ಕಾಳಜಿ ಇರುವ ಅಧಿಕಾರಿಗಳ ನೇಮಕಕ್ಕೆ ಕ್ರಮಕೈಕೊಳ್ಳಬೇಕು. ಫಲಾನುಭವಿಗಳಿಗೆ ಫಲ ದೊರಕುವಂತೆ ನೋಡಿಕೊಳ್ಳಬೇಕಾಗಿದೆ. ಒಮ್ಮೆಲೇ, ಬಹು ಶೀಘ್ರಗತಿಯ ಪ್ರಗತಿಯನ್ನು ನಿರೀಕ್ಷಿಸುವುದು ಸರಿಯಲ್ಲ. ಹಂತ ಹಂತವಾಗಿ ಅವರ ಬದುಕು ಸುಧಾರಿಸುವಂತೆ ಕ್ರಮಕೈಕೊಳ್ಳುವುದು ಯುಕ್ತ.

ಭಾರತ ಸರ್ಕಾರದ ಸಂವಿಧಾನದ ೨೩ ನೆಯ ಪರಿಚ್ಛೇದದ ಅನುಸಾರ ಜೀತ ವಿಮುಕ್ತಿಯಾಗಿದ್ದರೂ ಕರ್ನಾಟಕದ ಬುಡಕಟ್ಟು ಪ್ರದೇಶಗಳಲ್ಲಿ ಜೀತ ಪದ್ಧತಿ ಇನ್ನೂ ಅಸ್ತಿತ್ವದಲ್ಲಿದೆ. ಸಾಲ ನೀಡುವವರನ್ನು ನಿಯಂತ್ರಿಸುವ ಶಾಸನಗಳು ಬರದ ಹೊರತು ವಿಮುಕ್ತಿ ಆಗದ ಕೆಲಸ. ಸಾಲ ನೀಡಿಕೆಗಾಗಿ ಸಹಕಾರ ಸಂಘಗಳನ್ನು ಬಲಪಡಿಸುವ ಅಗತ್ಯ ಬಹಳವಿದೆ.

ಗುಡ್ಡ ಬೆಟ್ಟಗಳಲ್ಲಿ ನೆಲೆಸಿರುವ ಅನೇಕ ಬುಡಕಟ್ಟು ಸಮೂಹಗಳಲ್ಲಿ ಇಂದಿಗೂ ಸರದಿ ವ್ಯವಸಾಯ (Shift cultivation) ಜಾರಿಯಲ್ಲಿದೆ ಎಂದರೆ ಆಶ್ಚರ್ಯವಾಗಬಹುದು. ಈ ಬಗೆಯ ಕೃಷಿ ಕ್ರಮದಲ್ಲಿ ಬುಡಕಟ್ಟು ಜನರು ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗುವುದೂ ನಿಜ. ಆದರೆ ಇದು ಹೇಳಿಕೊಳ್ಳುವಂಥ ಬೇಸಾಯ ಕ್ರಮ ಏನೂ ಅಲ್ಲ. ಅಂದ ಮಾತ್ರಕ್ಕೆ ಈ ಸರದಿ ವ್ಯವಸಾಯ ಕ್ರಮವನ್ನು ಪಲ್ಲಟಗೊಳಿಸಲು ಅವಸರದ ಕ್ರಮ ಸಾಧುವಲ್ಲ. ಆಧುನಿಕ ಸಾಧನ ಸಲಕರಣೆಗಳು, ರಾಸಾಯನಿಕ ಗೊಬ್ಬರಗಳು, ಉತ್ತಮ ಬೀಜದ ತಳಿಗಳನ್ನು ಒದಗಿಸುವುದರ ಮೂಲಕ ಹಂತ ಹಂತವಾಗಿ ಸುಧಾರಣೆ ತರುವುದು ಅಪೇಕ್ಷಣೀಯ. ವಸಾಹತು ಯೋಜನೆಯನ್ನು ನಿಷ್ಠೆಯಿಂದ ಅನುಷ್ಠಾನಗೊಳಿಸಿದರೂ ಸಮಸ್ಯೆ ಪರಿಹಾರವಾಗಬಹುದು.

ಕರ್ನಾಟಕದಲ್ಲಿ ಬುಡಕಟ್ಟು ಜೀವನ ಕಾಡುಗಳನ್ನೇ ಅವಲಂಬಿಸಿರುವುದು ಬಹು ಮಹತ್ವದ ಸಂಗತಿ. ಆದುದರಿಂದ ಎಲ್ಲ ಅಭಿವೃದ್ಧಿ ಕೆಲಸಗಳೂ ಕಾಡಿನ ಸಂಪತ್ತನ್ನು ಸಾಮಾಜಿಕ ಆರ್ಥಿಕ ಉದ್ದೇಶಗಳಿಗಾಗಿ ಸರ್ವರೀತಿಯಲ್ಲೂ ಉಪಯೋಗ ಮಾಡಿಕೊಳ್ಳುವಂತಾಗಬೇಕು. ಬುಡಕಟ್ಟು ಜನ ತಮ್ಮ ಕಾಡಿನ ಅಮೂಲ್ಯ ಉತ್ಪನ್ನಗಳನ್ನು ಉಪ್ಪು, ಸೀಮೆಎಣ್ಣೆ, ಬಟ್ಟೆ, ಸಾಬೂನುಗಳಿಗಾಗಿ ವಿನಿಮಯ ಮಾಡುವಂತಾಗಬಾರದು. ಸಾಲ ನೀಡುವವರು, ಗುತ್ತಿಗೆದಾರರು ಈ ಜನರ ಅವಿಚಾರತೆ ಮತ್ತು ಮುಗ್ಧತೆಯನ್ನು ಬಂಡವಾಳವಾಗಿಸಿಕೊಂಡು ಇನ್ನೂ ಶೋಷಣೆಗ್ಗೈಯಲು ಬಿಡಬಾರದು. ಶೇಕಡಾ ನೂರು ಅಥವಾ ಅದಕ್ಕೂ ಹೆಚ್ಚು ಬಡ್ಡಿಕೊಟ್ಟು ಅವರು ಜೀತ ಮಾಡುವಂತಾಗಬಾರದು. ಈ ಎಲ್ಲ

ಉಪದ್ರವಗಳಿಂದ ಬುಡಕಟ್ಟು ಜನರನ್ನು ಪಾರು ಮಾಡಲು ಅರಣ್ಯ ಕಾರ್ಮಿಕ ಸಂಸ್ಥೆಗಳೊಡನೆ ಸಂಬಂಧವಿಟ್ಟುಕೊಂಡಿರುವ ಮಧ್ಯವರ್ತಿಗಳನ್ನು ದೂರ ಇಡುವಂತಾಗಬೇಕು. ಆಗ ಮಾತ್ರ ಬುಡಕಟ್ಟು ಜನ ಬದುಕು ನಡೆಸುವುದು ಸಾಧ್ಯ.

ಒಟ್ಟಿನಲ್ಲಿ ಬುಡಕಟ್ಟು ಜನರ ಶ್ರೇಯಸ್ಸಿಗಾಗಿ ಈ ಕೆಳಗೆ ಕಾಣಿಸಿದ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯ ಎಂದು ನನ್ನ ಭಾವನೆ-

೧. ಬುಡಕಟ್ಟು ಜನರನ್ನು ರಾಷ್ಟ್ರ ಜೀವನದ ಮುಖ್ಯವಾಹಿನಿಗೆ ಎಳೆದು ತರಬೇಕು
೨. ಇನ್ನೂ ಬೇರೆ ರೀತಿಯ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಯತ್ನಿಸಬೇಕು
೩. ಖಾಸಗಿ ಗುತ್ತಿಗೆದಾರರು ಅವರನ್ನು ಶೋಷಿಸದಂತೆ ನೋಡಿಕೊಳ್ಳಬೇಕು
೪. ಅವರ ಪರಂಪರಾಗತ ಕಲೆಗಳನ್ನು ಪ್ರೋತ್ಸಾಹಿಸಬೇಕು
೫. ಅವರ ಜೀವನ ವಿಧಾನವನ್ನು ಗೌರವಿಸುವುದರ ಮೂಲಕ ಅವರ ಬದುಕು ಹಸನಾಗುವಂತೆ ಸರ್ಕಾರಗಳು ನ್ಯಾಯಯುತವಾಗಿ ನಡೆದುಕೊಳ್ಳಬೇಕು.

**ಆಧಾರ ಗ್ರಂಥಗಳು**


Misra P. K. Malhotra K. C. (Eds). 1982, **Nomads in India**
Anthropological Survey of India Calcutta

Sachchidananda, 1979, **The Changing Munda,**
Concept Publishing Company, New Delhi

Singh K. P. 1988, **Tribal Development in India**
Uppal Publishing House, New Delhi

Singh J. P. N. N. Vyas 1989 (Eds). **Tribal Development**
Himanshu Publications, Udaipur

Sikidar Sujit, 1990, **Economic Development of Tribal India**
Ashish Publishing House, New, Delhi

ಓರಿಯಣ್ಣ ಅಂಬಳಿಕೆ, ೧೯೮೨, ತೊದವರು, ಐ ಬಿ ಎಚ್ ಪ್ರಕಾಶನ, ಬೆಂಗಳೂರು
೧೯೮೩: ಕಚ್ಚೆಗೌಳಿಗರು, ಐ ಬಿ ಎಚ್ ಪ್ರಕಾಶನ, ಬೆಂಗಳೂರು

ನಾಗರಾಜ ಮೈ, ನ, ೧೯೮೫, ಸೋಲಿಗರು, ಐ ಬಿ ಎಚ್ ಪ್ರಕಾಶನ, ಬೆಂಗಳೂರು

ಭಟ್ಟ, ಜಿ. ಎಸ್. ಮತ್ತು ಜೋಶಿ ರಾಮಕೃಷ್ಣ, ೧೯೮೬, ವೈಜಯಂತಿ, ತೃತೀಯ ಸಂಪುಟ
ಜನ ಸಮೂಹಗಳ ಸಮೀಕ್ಷೆ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ
ಸಂಘ (ರಿ), ಮೈಸೂರು - ೫೭೦ ೦೨೩


* * * * *

# ಹಂತಿ, ಹಂತಿಯ ಹಾಡುಗಳು ಒಂದು ಅಧ್ಯಯನ

ಡಾ. ಎ. ಜಿ. ಪೂಜಾರ

ನಮ್ಮ ದೇಶ ಹಳ್ಳಿಗರ ನಾಡು, ಹಳ್ಳಿಗರ ಮುಖ್ಯ ಉದ್ಯೋಗ ಒಕ್ಕಲುತನ. ಒಕ್ಕಲಿಗರು ಶ್ರಮಜೀವಿಗಳು. ವರ್ಷವಿಡೀ ಹೊಲದಲ್ಲಿ ದುಡಿಯುವರು. ದನಕರುಗಳೇ ಅವರ ಸಂಪತ್ತು. ಅವುಗಳೊಂದಿಗೆ ಮಳೆ-ಚಳಿ- ಬಿಸಿಲು ಎನ್ನದೆ ಹೊಲದಲ್ಲಿಯೇ ಇರುವರು. ಹೀಗೆ ಯಾವತ್ತೂ ದುಡಿಮೆಯಲ್ಲಿ ತೊಡಗುವುದರಿಂದ ದಣಿಯುವರು. ದಣಿವನ್ನು ಪರಿಹರಿಸಿಕೊಳ್ಳಲು ಅನೇಕ ಹಾಡುಗಳನ್ನು ಹಾಡುವರು.

ಹಾಡು ಆನಂದ ಸೂಚಕವಾಗಿದೆ, ಶ್ರಮ ಪರಿಹಾರ ಮಾಡಿಕೊಳ್ಳುವ ಸಾಧನವೂ ಆಗಿದೆ. ಮಾನವ ತನಗೆ ಆನಂದವಾದಾಗ ದನಿ ತೆಗೆದು ಹಾಡುತ್ತಾನೆ. ಹಾಡುವುದನ್ನು ಆತನಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಇದು ಆತನ ಸಹಜಗುಣ, ನಿಸರ್ಗದಿಂದ ಕಲಿತು ಕೊಂಡಂಥದು. ನಿಸರ್ಗದ ಮಡಿಲಲ್ಲಿರುವ ಒಕ್ಕಲಿಗ ಕೋಗಿಲೆ, ಹಕ್ಕಿಗಳು ಕೂಗುವಂತೆ ಅನುಕರಿಸಿ ಹಾಡು ಹೇಳಲು ಕಲಿತಿರಬಹುದು. ಈತ ಹಾಡುವ ಹಾಡುಗಳಲ್ಲಿ ಬಲೋರಿ ಹಾಡು, ಮಟ್ಟಿಯ ಹಾಡು ಮತ್ತು ಹಂತಿಯ ಹಾಡುಗಳು ಮುಖ್ಯವಾದುವು. ಬಲೋರಿ ಹಾಡುಗಳನ್ನು ರಾಶಿ ಆದ ನಂತರ ಚಕ್ಕಡಿಯಲ್ಲಿ ಕಾಳು - ಕನಿಕಿ ತರುವಾಗ ಹಾಡುವರು ಮಟ್ಟಿಯ ಹಾಡುಗಳನ್ನು ಬಾವಿಯಿಂದ ನೀರನ್ನು ಎತ್ತುವಾಗ- ಏತ ಹೊಡೆಯುವಾಗ ಹೇಳುವರು. ಇವುಗಳಂತೆ ಹಂತಿಯ ಹಾಡುಗಳನ್ನು ಸುಗ್ಗಿಯ ಕಾಲದಲ್ಲಿ ರಾಶಿ ಮಾಡುವಾಗ ಹಾಡುವರು ರಾಶಿ ಮಾಡಲು ಹೊಲದಲ್ಲಿ ಕಣ ಮಾಡುವರು.

### ಕಣ ಮಾಡುವುದು

ಕಣ ಮಾಡುವುದಕ್ಕಾಗಿ ಒಕ್ಕಲಿಗ ಎಕ್ಕೆಗಿಡ ಬನ್ನಿಗಿಡ ಸುತ್ತ- ಮುತ್ತ ಇರುವ ಜಾಗೆಯನ್ನು ಆರಿಸಿಕೊಳ್ಳುವನು. ಎಕ್ಕೆಗಿಡ ಶಿವನ ಸಂಕೇತ. ಬನ್ನಿಗಿಡ ಲಕ್ಷ್ಮೀ ದೇವತೆಯ ಸಂಕೇತ, ಎಂದು ಆತ ನಂಬಿದುದೆ ಇದಕ್ಕೆ ಕಾರಣವಾಗಿದೆ. ದೇವರಲ್ಲಿ ಆತನಿಗೆ ಅಪಾರ ನಂಬಿಕೆ. ಈ ನಂಬಿಕೆಯನ್ನು ಆತ-ತಪ್ಪದೇ ಪಾಲಿಸುವನು. ಕಣ ಮಾಡುವ ಜಾಗೆಯ ನಡುವೆ ಹಾರಿಯೊಂದನ್ನು ನೆಡುವನು. ಅದಕ್ಕೆ ಹಗ್ಗವೊಂದನ್ನು ಕಟ್ಟಿ, ಅದರ ತುದಿ ಹಿಡಿದು ದುಂಡಗೆ ಸುತ್ತುವನು. ಸುತ್ತಿ ಬರುವಾಗ ಕಾಲಿನಿಂದ ಗೆರೆ ಕೊರೆಯುತ್ತ ಬರುವನು. ಗೆರೆ ಕೊರೆದ ದುಂಡಾಕೃತಿಯ ಜಾಗೆ ತನ್ನ ರಾಶಿಯ ಅಳತೆಗೆ ತಕ್ಕಂತೆ ಇರುತ್ತದೆ. ಇದರಲ್ಲಿನ ಮಣ್ಣನ್ನು ಗಟ್ಟಿನೆಲ ಹತ್ತುವವರೆಗೆ ಸಲಿಕೆಯಿಂದ ತೆಗೆಯುವನು. ಅನಂತರ ಹಾರಿ ನೆಟ್ಟ ಕುಳಿಯಲ್ಲಿ ಕಟ್ಟಿಗೆಯೊಂದನ್ನು ನೆಡುವನು. ಈ ಕಟ್ಟಿಗೆಯೇ ಮೇಟಿ. ಇದರ ಸುತ್ತ ನೀರು, ಸಗಣಿ, ಹೊಟ್ಟು ಹಾಕುವನು. ಇವು ಆರಿದ ನಂತರ ದನಗಳನ್ನು ತಂದು ಮೇಟಿಗೆ ಸಾಲಾಗಿ ಕಟ್ಟಿ ತಿರುಗಿಸುವನು. ಅವುಗಳ ತುಳಿತಕ್ಕೆ ನೆಲ ಗಟ್ಟಿಗೊಂಡು ಕಣವಾಗುವುದು. ಕಣದಲ್ಲಿ ಹೆಣ್ಣು ಮಕ್ಕಳು ತೆನೆ ಮುರಿಯುವರು. ಅನಂತರ ರೈತರು ಹಂತಿಯನ್ನು ಕಟ್ಟಿ ರಾಶಿ ಮಾಡುವರು.

**ಹಂತಿ ಕಟ್ಟುವುದು**

'ಹಂತಿ' ಎಂಬ ಪದ ಪಂಕ್ತಿ ಎಂಬ ಪದದಿಂದ ಬಂದಿದೆ. ಹಂತಿ ಎಂದರೆ ಸಾಲು ಎಂದರ್ಥ. ಕಣದಲ್ಲಿ ತೆನೆ ಸುರುವಿ ಮೇಟಿಯ ಎರಡೂ ಕಡೆ ದನಗಳನ್ನು ಸಾಲಾಗಿ ಕಟ್ಟಿ ತಿರುಗಿಸುವುದಕ್ಕೆ ಹಂತಿ ಎನ್ನುವರು. ಒಂದೊಂದು ಸಾಲಿನಲ್ಲಿ ಎರಡರಿಂದ ಹದಿನೆಂಟು ದನಗಳವರೆಗೂ ಹಂತಿ ಕಟ್ಟುವುದುಂಟು.ರಾಶಿಯ ಅಳತೆಯನ್ನು ನೋಡಿಕೊಂಡು ದನಗಳನ್ನು ಕಟ್ಟುವರು. ಹಂತಿಯನ್ನು ಜೋಳದ ಸಜ್ಜೆಯ ರಾಶಿಗಳಿಗೆ ಕಟ್ಟುತ್ತಾರೆ. ಗೋದಿ, ನವಣೆ, ಹುರುಳಿ, ಕಡಲೆ, ಅಗಸಿ ಇವುಗಳಿಗೂ ಹಂತಿ ಕಟ್ಟುವುದುಂಟು. ಜೋಳದ ರಾಶಿ ಇವೆಲ್ಲವುಗಳಿಗಿಂತ ದೊಡ್ಡದ್ದು . ಹಾಗಾಗಿ ಜೋಳದ ಹಂತಿಯ ದೊಡ್ಡದಾಗಿರುತ್ತದೆ. ಜೋಳಕ್ಕೆ ಮಾತ್ರ ರಾತ್ರಿವೇಳೆಯಲ್ಲಿ ಹಂತಿ ಕಟ್ಟಿದರೆ ಉಳಿದುದಕ್ಕೆ ಹಗಲು ಕಟ್ಟುತ್ತಾರೆ. ಏಕೆಂದರೆ ಜೋಳಕ್ಕೆ ಸುಂಕವಿರುವುದು. ಸುಂಕ ರಾತ್ರಿ ವೇಳೆಯಲ್ಲಿ ದನಗಳಿಗೆ, ಮನುಷ್ಯರಿಗೆ ತುರಿಕೆಯನ್ನುಂಟು ಮಾಡದು. ಆದ್ದರಿಂದ ಇದಕ್ಕೆ ಹೊತ್ತು ಮುಳುಗಿದ ಮೇಲೆಯೇ ಹಂತಿ ಕಟ್ಟುವರು. ಬೆಳಗಾಗುವ ವೇಳೆಗೆ ಬಿಡುವರು. ದನಗಳ ತುಳಿತಕ್ಕೆ ತೆನೆಗಳಲ್ಲಿನ ಕಾಳು ಕಡೆಗೆ ಆಗುವವರೆಗೂ ಹಂತಿಯು ನಡೆಯುವುದು.

**ಹಂತಿಯ ಹಾಡುಗಳು**

ಹಂತಿ ರಾತ್ರಿಯಿಡೀ ನಡೆದಾಗ ಹೊಡೆಯುವವರಿಗೆ ದಣಿವು ಆಗುವುದು. ನಿದ್ದೆಯೂ ಬರುವುದು. ದಣಿವು ಆರಿಸಿಕೊಳ್ಳಲು, ನಿದ್ದೆ ಬರದಂತೆ ನೋಡಿಕೊಳ್ಳಲು ಹಾಡುಗಳನ್ನು ಹೇಳುವರು. ಇವೇ ಹಂತಿಯ ಹಾಡುಗಳು. ಇವು ಶ್ರಮ ಪರಿಹಾರದ ಹಾಡುಗಳೂ ಆಗಿವೆ. ಇವನ್ನು ಪೂಜ್ಯ ಭಾವನೆಯಿಂದ, ಭಕ್ತಿಯಿಂದ ಹಾಡುವರು. ಜನಪದ ಸಾಹಿತ್ಯದಲ್ಲಿ ಇವುಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಕೆಲವರು ಹಂತಿಯನ್ನು ಹೊಡೆಯುತ್ತ ಇವನ್ನು ಹಾಡುವರು. ಇನ್ನು ಕೆಲವರು ಹಂತಿ ನಡೆದಾಗ ಕಣದ ಹೊರಗೆ ಕುಳಿತುಕೊಂಡು ಹಾಡುವರು. ಇವನ್ನು ದನಿ ಎತ್ತರಿಸಿ ಹಾಡುವ ಉದ್ದೇಶ ಕಳ್ಳರು ರಾಶಿ ಕಳವು ಮಾಡಲು ಬಾರದಿರಲೆಂದೂ ಆದಂತಿದೆ. ಹಾಡು ನಿರಂತರವಾಗಿ ಸಾಗಬೇಕು. ಎಲ್ಲಿಯಾದರೂ ನಿಂತರೆ ಅಲ್ಲಿ ಏನೋ ಅನಾಹುತ ಆಗಿದೆಯೆಂದು ಆಜೂಬಾಜೂ ಇದ್ದ ಜನ ತಿಳಿಯುವರು.

ಹಂತಿಯ ಹಾಡುಗಳನ್ನು ಉತ್ತರ ಕರ್ನಾಟಕದಲ್ಲಿ ಮಾತ್ರ ಕಾಣುವೆವು. ಇವು ಹೆಚ್ಚಾಗಿ ತ್ರಿಪದಿಯಲ್ಲಿವೆ. ಕೆಲವು ದ್ವಿಪದಿಯಲ್ಲೂ ಇನ್ನು ಕೆಲವು ಚೌಪದಿಯಲ್ಲೂ ಇವೆ. ಇನ್ನೂ ಕೆಲವು ಸಂವಾದ ರೂಪದಲ್ಲಿ ಹೇಳುವ ಚುಟುಕುಗಳೂ ಖ್ಯಾಲಿಗಳೂ ಇವೆ. ಹಾಡುವ ಧಾಟಿಯ ಮೇಲೆಯೇ ಇವುಗಳನ್ನು ಹಂತಿಯ ಹಾಡುಗಳೆಂದು ಗುರುತಿಸಬಹುದು. ಇವುಗಳ ಕೊನೆಗೆ ಅ, ಊ, ಏ, ಐ ಎಂಬ ಸ್ವರಗಳು ಸಾಮಾನ್ಯವಾಗಿ ಬರುವವು. ಈ ಸ್ವರಗಳನ್ನು ಹಾಡುವವರು ಎಳೆ-ಎಳೆದು ಹೇಳುವರು. 'ಗಂಟಲ ದನಿ ಕೇಳ ಗಂಟೆ ಬಾರಿಸಿದ್ಹಾಂಗ ಎಂಟು ಕಿನ್ನೂರಿ ನುಡಿದ್ಹಾಂಗ' ಎನ್ನುವಂತೆ ದನಿ ತೆಗೆದು ಹಾಡುವರು. ಕೋಚಿತ್ತಿ ಒಬ್ಬರಾದ ಮೇಲೆ ಮತ್ತೊಬ್ಬರು ಇವನ್ನು ಹಾಡುವುದೂ ಉಂಟು. ಸಂವಾದ ರೂಪದಲ್ಲಿ ಇರುವ ಚುಟುಕಗಳನ್ನು ದನಿ ಎತ್ತರಿಸಿ ಹಾಡುವುದಿಲ್ಲ. ಕಂಕಿ ತೆಗೆಯುವಾಗ ಇವನ್ನು ಬೇಗ ಬೇಗನೇ ಹೇಳುವರು. ಕುಲು ಹುಲಿಗೋ! ಸರಮಾಲಿಗೋ! ಹುಲಿಗೋ!

ಜಲಿಗೋ!ಹುಲುಸಿಗೋ!ಹಲಂಡ ಹಲ್ಯೋ ಎಂದು ಹಾಡು ಹೇಳುತ್ತ ನಡು ನಡುವೆ ಕೂಗುವುದುಂಟು.

ಗರತಿಯ ಹಾಡುಗಳನ್ನು ಯಾರು ಬರೆದಿದ್ದಾರೆ ಎಂಬುದು ಹೇಗೆ ತಿಳಿದು ಬಂದಿಲ್ಲವೋ ಹಾಗೆಯೇ ಹಂತಿಯ ಹಾಡುಗಳನ್ನು ಯಾರು ಕಟ್ಟಿದರು ಎಂಬುದೂ ತಿಳಿಯದು. ಏಕೆಂದರೆ ಇವನ್ನು ಬರೆದವರು ಎಲ್ಲೂ ತಮ್ಮ ಹೆಸರು ಹೇಳಿಕೊಂಡಿಲ್ಲ. ಹೀಗಾಗಿ ಇವು ಅಚ್ಚ ಜಾನಪದ ಹಾಡುಗಳಾಗಿ ಎಲ್ಲರ ಸೊತ್ತಾಗಿವೆ. ಇಂಥವರೇ ಇವನ್ನು ಹಾಡಬೇಕೆಂಬ ನಿಯಮವೂ ಇಲ್ಲ. ಒಕ್ಕಲಿಗರೆಲ್ಲ ಇವನ್ನು ಹಾಡುವುರು. ಇವರು ತಂತಮ್ಮ ಊರದೇವರ ಹೆಸರುಗಳನ್ನು ಇವುಗಳಲ್ಲಿ ಸೇರಿಸಿಕೊಳ್ಳುವರು. ಕೆಲವರು ಹಾಡುಗಳನ್ನು ಅಲ್ಲಿಯೇ ಕಟ್ಟಿ ಹಾಡುವರು. ಹೀಗೆಯೇ ಇವು ಒಂದಕ್ಕೆ ಎರಡಾಗಿ, ಎರಡಕ್ಕೆ ನಾಲ್ಕಾಗಿ ಹಲವು ಹತ್ತು ಆಗಿ ಬೆಳೆಯುತ್ತ ಬಂದಿವೆ.

ಹಂತಿಯ ಹಾಡುಗಳಲ್ಲಿ ಒಕ್ಕಲಿಗ ದೇವಾನುದೇವತೆಗಳ ಸುತ್ತಿ ಮಾಡಿದ್ದಾನೆ. ಭೂಮಿ ತಾಯಿಯ ಉಪಕಾರವನ್ನು ನೆನೆದಿದ್ದಾನೆ. ಬಸವಣ್ಣನ ದುಡಿಮೆಯನ್ನು ಕಳಕಳಿಯಿಂದ ಸ್ಮರಿಸಿದ್ದಾನೆ. - ಮಳೆರಾಜನ ಮಹತ್ವವನ್ನು ಸಾರಿದ್ದಾನೆ. ಶಿವಶರಣರನ್ನು ಐತಿಹಾಸಿಕ ಮಹಾಪುರುಷರನ್ನು ಭಕ್ತಿಯಿಂದ ನೆನೆದಿದ್ದಾನೆ. ಇವುಗಳಲ್ಲದೆ. ಹಂತಿಯ ಹಾಡುಗಳಲ್ಲಿ ಹಂತಿ ಕಟ್ಟುವ ಹೌಸು ಹೊರಹೊಮ್ಮಿದೆ. ನಿಸರ್ಗ ವರ್ಣನೆಯೂ ಬಂದಿದೆ. ಒಕ್ಕಲಿಗನ ಕೃತಜ್ಞತಾಭಾವ. ರಸಿಕತೆ. ಹಾಸ್ಯ ತುಂಬಿತುಳುಕಿದೆ. ಸುಗ್ಗಿಯನ್ನು ಆತ ಹಬ್ಬವೆಂದೇ ಭಾವಿಸುವನು. ಅದನ್ನು ಸಂತೋಷದಿಂದ ಮಾಡುವನು. ಹಾಡುಗಳಲ್ಲಿ ಆತನ ಸಂತಸ, ಭಕ್ತಿ ಭಾವ ತುಂಬಿ ನಿಂತಿದೆ.

## ದೇವತಾಸ್ತುತಿ

ಹಂತಿ ಕಟ್ಟಿದೊಡನೆ ಒಕ್ಕಲಿಗ ದೇವತೆಗಳನ್ನು ಸ್ತುತಿಸುವನು. ಆ ದೇವರು ಈ ದೇವರು ಎಂದು ಭೇದಭಾವ ಮಾಡನು. ಎಲ್ಲ ದೇವರುಗಳೂ ಆತನಿಗೆ ಬೇಕು. ಮೊದಲಿಗೆ ಗಣಪತಿಯನ್ನು ಸುತ್ತಿಸುವನು. ಆತ ತನ್ನ ಹಂತಿಯನ್ನು ಸುಗಮವಾಗಿ ನಡೆಸಿಕೊಡಲಿ ಎಂದು ಹಾಡುವನು.

ಮೊದಲಿಗಿ ನೆನದೇನ ಗಜಮುಖನ ದೇವರನ!
ಮಿಗಿಲಾದ ಸೊಂಡಿ ಗಣಪನೊ!
ನಾ ನಿನ್ನ!ಹಂತಿಯ ಪದಕ ನೆನದೇನ!
ಕಣದಾಗ ಬಂದೇನ ಕೈಮುಗದ ನಿಂತೇನ!
ಸಣ್ಣ ಬಾಲಕನು ಹಾಡುದಕ!ಗಣರಾಯ
ಕರುಣೆಟ್ಟು ವರವ ಕೊಡು ನಮಗ!

ಆತನ ಭಕ್ತಿ ಇಲ್ಲಿ ಒಡೆದು ಕಾಣುತ್ತದೆ. ಗಣಪತಿಯನ್ನು ಸುತ್ತಿಸಿದಂತೆ ಆತ ಶಿವ, ಪಾರ್ವತಿ, ಲಕ್ಷ್ಮಿ, ಸರಸ್ವತಿ ಅಂಬಾಭವಾನಿ, ಎಲ್ಲಮ್ಮ, ಚೌಡಮ್ಮ, ದ್ಯಾವಮ್ಮ, ದುರಗಮ್ಮ, ಜಕ್ಕಮ್ಮ, ಮರೆಮ್ಮ ಮುಂತಾದ ದೇವರನ್ನು ಸುತ್ತಿಸಿದುದನ್ನು ಕಾಣುವೆವು. ತನ್ನ

ರಾಶಿ ಹುಲುಸಾಗಲು ಇವರೆಲ್ಲರ ಕೃಪೆ ಆತನಿಗೆ ಬೇಕು. ರಾಶಿಗೆ ಹರಕೆ ಕೊಡಬೇಕೆಂದು ಲಕ್ಷ್ಮಿಯನ್ನು ನೆನೆದು ಹಾಡಿದ ಹಾಡೊಂದು ಹೀಗಿದೆ:

ಸಾಕ್ಷಿ ಗಣ್ಣೆನ ಸೀರಿ ರಾಶಿಗಿ ತಂದೀನಿ

ಲಕ್ಷಿಮಿ ತಾಯಿ ಉಡಬಾರೆ! ನಮ್ಮನೆಯ

ರಾಶಿಗಿ ಹರಕೆ ಕೊಡಬಾರೆ

ಎಂದು ಲಕ್ಷ್ಮಿಯನ್ನು ಹಂಬಲಿಸಿ ಕರೆಯುವನು. ಎಲ್ಲಮ್ಮ ದೂರದಲ್ಲಿ ಇರುವಳೆಂದು ತಾನಿದ್ದಲ್ಲಿಂದಲೇ ಆಕೆಗೆ ಕೈಮುಗಿದು ಬಿಡುವನು.

ಎಲ್ಲರಿಗೂ ಎಲ್ಲವ್ವ ನನಗೆ ಬೆಲ್ಲದ ಹೇರ

ಒಲ್ಲೆನೆಲ್ಲವ್ವ ಗಿರಿದೂರ!

ನಾ ನಿನಗ ಇಲ್ಲಿಂದ ಕೈಯಮುಗದೇನ ಆ ದೇವತ ಮರೆಮ್ಮನನ್ನೂ ನೆನೆಯುವನು. ಸೀರಿ ತಂದೀನಿ ಉಡಬಾರೆ ಎಂದು ಭಕ್ತಿಯಿಂದ ಆಕೆಯನ್ನು ಕರೆಯುವನು.

ಕರಿಸೀರಿ ಉಟಗೊಂಡು ಕಣದಾನ ಕುಂತಕಿನ್ನಾರ

ಸೀರಿ ತಂದೀನಿ ಉಡಬಾರೆ! ಮರೆಮ್ಮ

ಕಣದಾಗ ಹುಲುಸು ಕೊಡಬಾರೆ!

ಮಾರುತಿ, ಬಲಭೀಮ, ಆಂಜನೇಯ- ಈ ಹೆಸರುಗಳಿಂದ ಕರೆಸಿಕೊಳ್ಳುವ ದೇವರು ಹನುಮಂತ. ಈ ದೇವರನ್ನು ಎಲ್ಲರೂ ಪೂಜಿಸುವರು. ಈ ದೇವರು ಸಾಹಸ ಸೇವೆಗೆ ಹೆಸರಾದವನು. ಒಕ್ಕಲಿಗನದೂ ಸಾಹಸಮಯ ಬದುಕು. ಸೇವೆಯೇ ಆತನ ಉಸಿರು. ಅದಕ್ಕೆ ಈ ದೇವರನ್ನು ಆತ ಬಹಳ ಮೆಚ್ಚಿಕೊಂಡಿದ್ದಾನೆ. ಈ ದೇವರು ಇರದ ಊರುಗಳೇ ಇಲ್ಲವೆಂದರೂ ತಪ್ಪಾಗದು, ಒಕ್ಕಲಿಗ ಹಂತಿಯ ಹಾಡುಗಳಲ್ಲಿ ಈ ದೇವರನ್ನು ವಿಶೇಷವಾಗಿ ಸ್ತುತಿಸಿದುದನ್ನು ಕಾಣುವೆವು:

' ಹಂತೀಯ ಹೂಡಿ ಯಾರನ್ನ ನೆನೆಯಲಿ

ಈ ಊರ ಭಂಟ ಹನುಮನ! ಮನಸಿಲಿ

ಹಂತೀಯ ಹೂಡಿ ನೆನೆದೇವೊ!

ಹಚ್ಚೀದ ಹರಿನಾಮ ಮುತ್ತೀನ ಗೋಪಾಳ

ಹೊತ್ತೋರಿ ಬರುವ ಇವನ್ಯಾರೊ! ನಾವಲಗಿ

ಗಚ್ಚೀನ ಗುಡಿಯ ಕರಿಹನುಮೊ!

ಈ ದೇವರ ವಾರ ಶನಿವಾರ. ಅಂದು ಈ ದೇವರು ಬಗೆ ಬಗೆಯಾಗಿ ಸಿಂಗರಿಸಿಕೊಳ್ಳುವನು. ಅದನ್ನು ಹಾಡಿನಲ್ಲಿ ಈ ರೀತಿ ಹಿಡಿದಿಡಲಾಗಿದೆ.

ಅಂಗೀಗಿ ಅಬರಂಗ ಗೊಂಗಡಿ ರೇಶಿಮಿ

ಬಂಗಾರ ಕಡೆಯ ಬಲಗೈಯೆ! ಬಲಭೀಮ

ಸಿಂಗಾರಾಗ್ಯಾನ ಶನಿವಾರೊ!

ರಾಮ ಭಕ್ತನಾದ ಈ ದೇವರ ಬಗ್ಗೆ ಒಕ್ಕಲಿಗನಿಗೆ ಅಪಾರ ಪ್ರೀತಿ.

ಹಂತಿಯನ್ನು ಹೊಡೆಯುವಾಗ ಆತ ರಾಮಾಯಣದ ಕಥಾಭಾಗಗಳನ್ನು ಹಾಡುವನು. ಅದರಲ್ಲೂ ಹನುಮಂತನು ಲಂಕೆಗೆ ಹಾರಿ ಹೋದ, ಸೀತೆಯನ್ನು ರಾವಣನಿಂದ ಬಿಡಿಸಿಕೊಂಡು ಬಂದ ವಿಷಯ ಈ ಹಾಡುಗಳಲ್ಲಿ ಬರುವುದು.

ಶರಣರು- ಐತಿಹಾಸಿಕ ಮಹಾಪುರುಷರು

ಹಂತಿಯ ಹಾಡುಗಳಲ್ಲಿ ಶಿವಶರಣರ ಚರಿತ್ರೆ ಹೆಚ್ಚಾಗಿ ಬರುವುದು. ಐತಿಹಾಸಿಕ ಮಹಾಪುರುಷರ ಕಥನವೂ ತಕ್ಕಮಟ್ಟಿಗೆ ಬರುವುದು. ಶರಣರ ಆದರ್ಶಮಯ ಬದುಕು ಒಕ್ಕಲಿಗನಿಗೆ ಬಹಳ ಮೆಚ್ಚಿಕೆಯಾಗಿದೆ. ಅವರ ಆದರ್ಶಗಳು ತನಗೂ ಒದಗಲಿ ಎಂದು ಹಾಡುಗಳಲ್ಲಿ ಅವರನ್ನು ನೆನೆಯುವನು. ಬಸವಣ್ಣ, ಮಾದಾರ ಚೆನ್ನಯ್ಯ, ಮಡಿವಳ ಮ್ಯಾಚಯ್ಯ, ಕಿನ್ನರಿ ಬೊಮ್ಮಯ್ಯ, ಮೇದಾರ ಕೇತಯ್ಯ, ಇಳಿಹಾಳ ಬೊಮ್ಮಯ್ಯ, ಜಾತಿಗಾರ ಚೌಡಯ್ಯ, ಹೂಗಾರ ಮಾದಯ್ಯ- ಇವರ ಚರಿತ್ರೆ, ಮಹಿಮೆ ಈ ಹಾಡುಗಳಲ್ಲಿ ಬಂದಿದೆ. ಇವರಲ್ಲದೆ ತಿಂಥಿಣಿ ಮೌನೇಶ್ವರ, ಶರಣ ಬಸವೇಶ್ವರ, ಕೊಡೇಕಲ್ ಬಸವಣ್ಣ, ಬಂದೆ ನವಾಜ್, ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಹೇಮರಡ್ಡಿ ಮಲ್ಲಮ್ಮ, ನರಗುಂದ ಬಾಬಾಸಾಹೇಬ - ಮುಂತಾದವರ ಜೀವನದ ಕಥಾ ಭಾಗಗಳೂ ಈ ಹಾಡುಗಳಲ್ಲಿ ಕಥಿತವಾಗಿವೆ. ಈ ಎಲ್ಲರನ್ನೂ ಒಕ್ಕಲಿಗ ಪೂಜ್ಯ ಭಾವನೆಯಿಂದ ಕಂಡಿದ್ದಾನೆ. ಇವರ ಕಥನವನ್ನು ಹಂತಿ ಹೊಡೆಯುವಾಗ ಹೇಳಿದ್ದಾನೆ. ಇಂಥವರನ್ನು ನೆನೆಯುವುದೇ ಪುಣ್ಯವೆಂದು ಆತನ ಭಾವನೆ.

ಹಂತಿ ಹೊಡೆಯುತ ನೆನೆದೆ ಸಂತಸದಿ ಶರಣರನು!

ಕಂತು ಹರ ನಿನ್ನ ಭಕ್ತರನು! ನೆನಸಿದರೆ!

ಸಂತಸದಿ ನೀಡೊ ವರ ಶಿವನೆ!

ಕಣದಲಿ ಶರಣರ ಹಾಡು ಹೇಳಿದರೆ ತನ್ನ ರಾಶಿ ಹುಲುಸಾಗುವುದು ಎಂದು ನಂಬುವನು.

ಬೆಳವಲವು ಬೆಳೆಯಾಗಿ ಬಳುವಳಿಯು ಹೊಸಮತಕೆ!

ಬೆಳತನಕ ಚೌಡ ನಿನ್ನಾಡು! ಕಣದೊಳಗೆ!

ಬೆಳೆಗೆ ಬಳುವಳಿಯು ಹುಲುಸಾಯ್ತು!!

ಹಂತಿಯ ಹಾಡುಗಳಲ್ಲಿ ಹೀಗೆಯೇ ಒಕ್ಕಲಿಗ ಹಲವಾರು ಶರಣರನ್ನು ನೆನೆದುದನ್ನು ಕಾಣುವೆವು. ಹೂಗಾರ ಮಾದಯ್ಯನ ಮೇಲೆ ಆತನಿಗೆ ವಿಶೇಷ ಪ್ರೀತಿ. ಆತನು ಕೊಡುವ ಪತ್ರಿಯಿಂದ ತನ್ನ ರಾಶಿ ಹುಲುಸಾಗುವುದೆನ್ನುವನು. ಆತನನ್ನು ಕುರಿತು ಹಾಡಿದರೆ ತನ್ನನ್ನು ಯಾರೂ ಕೈ ಹಿಡಿಯರು ಎಂದು ಹೆಮ್ಮೆ ಪಡುವನು. ಇದನ್ನು ಹಾಡಿನ ಮೂಲಕ ಹೇಳಿದ್ದಾನೆ.

ಹಾರಿ ಬರುವುದು ಹುಲುಸು ಏರಿ ಮಾದನ ಪತ್ರಿ!

ಸೂರಿ ಹಾಡುವೆನು ನಿನ್ನಾಡ! ಬೆಳತನಕ!

ಯಾರು ಕೈ ತಟ್ಟಿ ನಿಲ್ಲುವರು!

ಹಂತಿ ಹೊಡೆಯುವಾಗ ಶರಣ ಬಸವೇಶ್ವರನನ್ನು ನೆನೆಯುವನು. ಈ ಭಾಗದಲ್ಲಂತೂ ಶರಣನನ್ನು ನೆನೆಯುವುದು ಸಾಮಾನ್ಯ.

ಕಲಬುರಗಿ ಶರಣರು ಅವರೆಂಥ ಧರಮರು

ದಾಸೋಗ ಇಟ್ಟಾರ ಮಠದಾಗ! ಶರಣರು

ಭಜನಿ ಇಟ್ಟಾರೋ ಗುಡಿಯಾಗೊ!

ಕಣದಲಿ ' ಶರಣರ ನೆನೆದರ ಸರಗಿಯ ಇಟ್ಟಾಂಗ ಅರಳ ಮಲ್ಲೀಗಿ ಮುಡದ್ಹಾಂಗ' ಆಗುವುದು ಎಂಥು ಹಾಡುವುದುಂಟು. ಶರಣರ ಮೇಲಿಟ್ಟ ಒಕ್ಕಲಿಗನ ಭಕ್ತಿಗೆ ಇದು ಒಳ್ಳೆಯ ಉದಾಹರಣೆ.

ಕಿತ್ತೂರ ಚೆನ್ನಮ್ಮ ಸುತ್ತೂರ ಒಡತ್ಯಾಗಿ!

ಕತ್ತಿ ಕವಚಗಳ ಉಡುಪುಟ್ಟೊ! ಅಬ್ಬರದಿ !

ಬತ್ತಲಗುದುರಿ ಜಿಗಿದೇರ್‍ಯಾಳೊ!

ಚೆನ್ನಮ್ಮನ ಸಾಹಸ ಈ ಹಾಡಿನಲ್ಲಿ ಬಂದಿದೆ. ಆಕೆಯ ಸಾಹಸವನ್ನು ವರ್ಣಿಸುವ ಉದ್ದೇಶ ಆತನಿಗೆ ಇರದೆ, ಆಕೆಯನ್ನು ಭಕ್ತಿಯಿಂದ ಕಾಣುವ ಉದ್ದೇಶದಿಂದ ಈ ಹಾಡು ಹೊರಹೊಮ್ಮಿದೆ.

**ಭೂಮಿತಾಯಿ-ಮಳಿರಾಜ- ಬಸವಣ್ಣ**

ಹಂತೆಯ ಹಾಡುಗಳಲ್ಲಿ ಈ ಮೂವರ ಸ್ತುತಿ ವಿಶೇಷವಾಗಿ ಬಂದಿದೆ. ಭೂಮಿಯೇ ತಾಯಿ, ಮಳಿರಾಜನೇ ತಂದೆ, ಎಂದು ಒಕ್ಕಲಿಗ ನಂಬಿರುವನು. ಆತನಿಗೆ ಭೂಮಿ ತಾಯಿ ಅನ್ನ ಕೊಡುವ ದೇವತೆ. ಆ ತಾಯಿ ಮನಬಿಚ್ಚಿ ಬೆಳೆದಳೆಂದರೆ ಕಣ ತುಂಬ ಕಾಳು. ಕಣದಲ್ಲಿ ರಾಶಿ ಉಕ್ಕಬೇಕಾದರೆ ಅವಳ ಕೃಪೆ ಬೇಕೆ ಬೇಕೆನ್ನುವನು.

ಹತ್ತಿ ಹೂವಿನ ಸೀರಿ ತೆಕ್ಕಿ ತುಂಬ ನೀರ್‍ಗಿ!

ಬಿಚ್ಚಿ ಹರವ್ಯಾಳೊ ಭೂಮ್ಯಾಗ! ಆತಾಯಿ! !

ಒಕ್ಕಲೇರ್‍ಯಾಳೊ ಮೇಟ್ಯಾಗ

ಭೂಮಿಯನ್ನು ತಾಯಿಯೆಂದು ಬಣ್ಣಿಸುವನು. ಈಕೆಯನ್ನು ಗೌರವಿಸುವಂತೆ ಮಳಿರಾಜನನ್ನೂ ಪೂಜ್ಯ ಭಾವನೆಯಿಂದ ಕಾಣುವನು. ಮಳಿ ಆತನ ಪಾಲಿಗೆ ಬರೀ ಮಳೆಯಲ್ಲ. ರಾಜನೆಂದು ತಿಳಿದು ಹಾಡಿದ ಹಾಡೊಂದನ್ನಿಲ್ಲಿ ನೋಡಬಹುದು.

ರಾಶಿ ಬಣ್ಣದ ಕುದುರಿ ರಾಜೇಕ ದೊಡ್ಡದ!

ರಾಜರೊಳು ರಾಜ ಮಳಿರಾಜ! ಬರುವಾಗ!

ರಾಜೇವು ಕೈಯ ಮುಗಿದೇವ!

ಮಳಿ ಬಿದ್ದರೆ ಸೊಬಗು. ಇಲ್ಲದಿರೆ ಕೊರಗು. ಮಳೆಯಿಂದಲೇ ಇಳೆಗೆ ಶೋಭೆ. ಮಳಿರಾಜ ಎಲ್ಲರಿಗೂ ಅವಶ್ಯಬೇಕು. ಇಂಥವನಿಗೆ ಕೈ ಮುಗಿಯದವರಾರು? ಈತ ಬರುವುದು ತಡವಾದರಂತೂ ತೀರಿತು. ಲೋಕವೆಲ್ಲ ಗೋಳಾಡುವುದು. ಇದನ್ನು ಹಾಡೊಂದರಲ್ಲಿ ಹೀಗೆ ಹೇಳಿದೆ.

ಹರಿವ ಹಾವಿನ ಗಂಡ ಉರಿವ ಕಿಚ್ಚಿನ ಗಂಡ!

ಮೂರೂರ ಗಂಡ ಮಳೆರಾಯ! ತಡದರ

ಮಾಯದ ಹೆಂಡರನ ಬಿಡುವರ!

ಯಾವ ಮಳೆ ಬಂದರೆ ಯಾವ ಬೆಳೆ ಹುಲುಸಾಗಿ ಬೆಳೆಯುವುದು. ಎಂಬುದನ್ನೂ ಹಾಡಿನಲ್ಲಿ ಹೇಳಲಾಗಿದೆ.

ರೋಣಿಯ ಮಳೆಯಾಗಿ ಒಣೆಲ್ಲ ಜೋಳಾಗಿ!

ಕಾಣಾದ ಹುಲುಸು ಕುಡಿಯಾಗಿ! ಹೊಲದಾಗ!

ಕಣ ತುಂಬ ರಾಶಿ ಹೊಳೆಯಾಗಿ!

ರೋಹಿಣಿ ಮುಂಗಾರಿ ಮಳೆ, ಇದು ಬಂದರೆ ಮುಂಗಾರಿ ಜೋಳ, ಅಕ್ಕಡಿ ಕಾಳು ((ಹುರಳಿ. ಅಲಸಂದಿ. ಹೆಸರು) ಹುಲುಸಾಗಿ ಬೆಳೆಯುವವು. ಇದನ್ನು ಅನುಭವಿಸಿಯೇ ಹಾಡಿನಲ್ಲಿ ಹೇಳಿದಂತಿದೆ.

ಉತ್ತರಿಯ ಮಳೆಯಾಗಿ, ಉತ್ತಮರು ತಿಳಿಯಾಗಿ

ಉತ್ತತ್ತಿ ಫಲವು ಘನವಾಗಿ! ಕಣದಾಗ!

ಉತ್ತಾಣಿ ಸೆಳ್ಳು ಮೇಲಾಗಿ!

ಉತ್ತರಾ ಹಿಂಗಾರಿ ಮಳೆ. ಇದು ಬಂದರೆ ಬೆಳೆ ಬರುವುದು ಖಾತ್ರಿ. ಬಿಳಿ ಜೋಳವಂತೂ ಹುಲುಸಾಗಿ ಬೆಳೆಯುವುದು ಎಂದು ಹೇಳಿದೆ.

ಬಸವಣ್ಣ ಒಕ್ಕಲಿಗರ ಪಾಲಿಗೆ ಬರೀ ಎತ್ತು ಅಲ್ಲ. ಸಾಕ್ಷಾತ್ ನಂದಿಯ ಅವತಾರವೇ ಆಗಿದ್ದಾನೆ. ಆತನನ್ನು ಒಕ್ಕಲಿಗ ದೇವರೆಂದೇ ಪೂಜಿಸುವನು. ಇದರಂತೆ ಒಕ್ಕಲುತನದ ಸಲಕರಣೆಗಳನ್ನು ಪೂಜ್ಯ ಭಾವನೆಯಿಂದ ಕಾಣುವನು. ತನಗೆ ಆಧಾರ ಬಸವಣ್ಣನೇ. ಬಸವಣ್ಣನನ್ನು ನೆನೆಯುವುದೆಂದರೆ ಆತನಿಗೆ ಬಲು ಹಿಗ್ಗು.

ಆತನ ಮೇಲೆ ಅನೇಕ ಹಾಡುಗಳನ್ನು ಕಟ್ಟಿ ಹಾಡುವನು. ತನಗೆ ಹಾಡಲು ಹುರುಪು ನೀಡುವವ ಬಸವಣ್ಣನೇ ಎಂದು ಹಾಡಿದುದನ್ನಿಲ್ಲಿ ನೋಡಬಹುದು.

ಹಂತಿಯ ಹಾಡೆಂದು ಪಂಥ ಕಟ್ಟಲು ಬೇಡ!

ಕಂತಿ ತಿರುಗುವುದು ನಿಂತಲ್ಲಿ! ಬಸವಯ್ಯ!

ಕುಂತು ಎದೆಯೊಳಗ ಹಾಡಿಸಿದ!

ಹಂತಿ ಕಟ್ಟಿದನೆಂದರೆ ತೀರಿತು. ಆತನ ಬಾಯಿಂದ ಹಾಡುಗಳು ತಾನಾಗಿಯೇ ಹೊರ ಹೊಮ್ಮುವವು. ಹಂತಿ ತಿರುಗುವ ಎತ್ತುಗಳನ್ನು ನೋಡಿ ಅನೇಕ ಹಾಡುಗಳನ್ನು ಹೇಳುವನು. ಇವು ಬಹಳ ಅಂದವಾಗಿದ್ದು, ಕೇಳಲಿಕ್ಕೆ ಹಿತಕರವೆನ್ನಿಸುತ್ತವೆ. ಅಂಥ ಕೆಲ ಹಾಡುಗಳನ್ನಿಲ್ಲಿ ನೋಡಬಹುದು.

ಮೂಡಲ ಹೋರಿಗೆ ಮುರಗೀಯ ಕೋಡಣಸು

ಸಣಗೆಜ್ಜೆ ಕೊರಳ ಸರಪಳಿಯ! ಕಟಿಗೊಂಡು

ಸವನಾಶಿ ಹಂತಿ ತುಳದಾನೊ!
ಹಾಲುಂಡ ಹೋರಿಗಿ ನೂಲುಂಡಿ ಮುಗದಾಣ!
ಮ್ಯಾಲೆ ಸುವರದ ಹಣಿಕಟ್ಟು! ಕಟಿಗೊಂಡು
ಸಂಪತ್ತಿನ ಹಂತಿ ತಿರುಗ್ಯಾನೋ!
ಬೆಳ್ಳಿಹಗ್ಗ ಮಾಡಿ ಬಂಗಾರದ ಬಾಸಿಂಗ್ಯಾಡಿ!
ಮಾದಿಗರ ಹರಳಯ್ಯ ಕಳುವ್ಯಾನ!
ಬಸವಣ್ಣ!ಹಾಕ್ಯೊಂಡು ಹಂತಿ ತಿರುಗ್ಯಾನ
ಜೋಡೆರಡು ಎತ್ತಿಗೆ ಜೋತಾಡು ಬಾಸಿಂಗ!
ಮಾತಾಡು ಗಂಟೆ ಕೊರಳಾಗ! ಕಟಿಗೊಂಡು!
ತಂಪತ್ತಿಲೆ ಹಂತಿ ತಿರುಗ್ಯಾನ!

ಇವುಗಳಲ್ಲಿ ಎತ್ತಿನ ಸಂಭ್ರಮ ಎದ್ದು ಕಾಣುವಂತೆ ವರ್ಣಿತವಾಗಿದೆ. ಹುರಿಗೆಜ್ಜೆ, ಕೋಡಣಸ, ಮುತ್ತಿನ ಹಣೆಕಟ್ಟು, ಗಂಟೆ ಇವನ್ನೆಲ್ಲ ಎತ್ತುಗಳಿಗೆ ಹಾಕಿ ಸಿಂಗರಿಸುವನು, ಒಕ್ಕಲಿಗ. ಇದರಲ್ಲೇ ಆತನಿಗೆ ನೆಮ್ಮದಿ ಇದೆ. ಅವುಗಳನ್ನು ಬಣ್ಣಿಸಿ ಹಾಡುವುದೆಂದರೆ ಇನ್ನು ಓಗ್ಗು. ಎತ್ತಿಗೆ ಕಟ್ಟಿದ ಹಗ್ಗ ನೂಲಿನದಲ್ಲ, ಬೆಳ್ಳಿ ಬಂಗಾರದಿಂದ ಮಾಡಿದ್ದು ಹಂತಿಯೂ ತೆನೆಗಳದ್ದಲ್ಲ, ಸಂಪತ್ತಿನದು; ಎಂದು ಹಾಡುವಲ್ಲಿ ಆತನ ಸೌಂದರ್ಯ, ಜಾಣ್ಮೆ ಎದ್ದು ಕಾಣುವುದು. ಹಂತಿ ನಡೆದಾಗ ಎತ್ತಿನ ಗಂಟೆಯ ಸದ್ದು ಆತನಿಗೆ ಮಾತಾಡಿದಂತೆ ಭಾಸವಾಗಿದೆ. ಮಾತಾಡು ಗಂಟೆ ಕೊರಳಾಗ ಎನ್ನುವಲ್ಲಿನ ರೂಪಕ ಮೆಚ್ಚುವಂಥದ್ದು ಇಂಥಲ್ಲಿ ಈ ಹಾಡುಗಳ ಶ್ರೇಷ್ಟತೆ ಅಡಗಿದೆ. ಇಂಥ ಹಾಡುಗಳು ಯಾವ ಒಳ್ಳೆಯ ಕಾವ್ಯಕ್ಕೂ ಕಡಿಮೆಯವಲ್ಲ ಎನಿಸುತ್ತದೆ.

ಒಕ್ಕಲಿಗ ಮಕ್ಕಳಿಗೆ ಹೆಸರಿಡುವಂತೆ ಎತ್ತುಗಳಿಗೂ ಇಟ್ಟು ಹಾಡಿದ್ದುಂಟು ಮಾಲಿಂಗ, ಕಾಳಿಂಗ, ಹವಳ್ಯ, ಗುಳ್ಯ, ಸಾರಂಗ, ರಾಮ, ಭೀಮ - ಇವು ಆತ ಇಡುವ ಹೆಸರುಗಳು. ಮಕ್ಕಳನ್ನು ಹೆಸರು ಹಿಡಿದು ಕರೆಯುವಂತೆ ಇವನ್ನೂ ಹೆಸರುಗೊಂಡೇ ಕರೆಯುವನು. ಹಂತಿ ಹೊಡೆಯುವಾಗ ಇವುಗಳ ಹೆಸರೆತ್ತಿ ಹಾಡುವನು. ಹಂತಿ ತಿರುಗುವಾಗ ಕೆಲವು ಎತ್ತುಗಳು ಕಾಡುವವು. ಇಂಥವನ್ನು ಕೊನೆಗೆ ಕಟ್ಟಬೇಕೆಂದು ಹಾಡಿದ ಹಾಡೊಂದು ಹೀಗಿದೆ.

ಹಂಡ ಹವಳ್ಯಗ ಕಟ್ಟು ಗುಂಡ ಗುಳ್ಯನ ಕಟ್ಟು!
ಮಾಲಿಂಗನ ಕಟ್ಟು ಮೇಟ್ಯಾಗ!ನಮ್ಮೆತ್ತ!
ಕಾಡಿದರ ಕಟ್ಟೊ ಕಡಿಸುತ್ತೊ!

ತೊಂದರೆ ಕೊಡುವ ಎತ್ತನ್ನು ದಾರಿಗೆ ತರಲು ಹೀಗೆ ಮಾಡುವುದುಂಟು. ಹೀಗೆ ಮಾಡಿದರೂ ಈ ಎತ್ತಿನ ಮೇಲೆ ಅನಂತರ ಕರುಣೆ ಬರುವುದು. ಈ ಎತ್ತು ಬಹಳ ನಡೆಯಬೇಕಾಗುವುದು. ಈ ಎತ್ತು ನಡೆದು ನಡೆದು ದಣಿಯುವುದು. ಈ ಎತ್ತು ಪಡುವ ಶ್ರಮವನ್ನು ಗುರುತಿಸಿ ಹಾಡಿದ ಹಾಡೊಂದು ಹೀಗಿದೆ.

ಕಡಸುತ್ತಿನೆತ್ತಿಗೆ ಕಾಲಾಗ ಗಗ್ಗರಿ!

ಮ್ಯಾಲಲ್ಯಾವಶದ ಹುಲಿಗೆಜ್ಜೆ! ಕಟೆಗೊಂಡ!

ಕಡಿಸುತ್ತ ತಿರುಗಿ ಬರತಾನ!

ಕಡಿಸುತ್ತ ತಿರುಗಿ ಬರತಾನ!

ಎನ್ನುವಲ್ಲಿ ಒಕ್ಕಲಿಗನ ಅನುಕಂಪ ಹೊರಹೊಮ್ಮಿದೆ, ಕಳಕಳಿಯೂ ವ್ಯಕ್ತವಾಗಿದೆ. ಹಂತಿ ತಿರುಗಿದ ಎತ್ತಿನ ಮೈಮೇಲೆ ಸುಂಕ ಕೂಡುವುದು ಬೆಳಗಾದೊಡನೆ ಬುತ್ತಿ ತಂದ ತಾಯಿ ಇದನ್ನು ನೋಡಿ ಸಹಿಸಲಾಗದೆ, ತನ್ನ ಸೆರಗಿನಿಂದ ಅದನ್ನು ಒರೆಸುವಳು. ಈ ಸನ್ನಿವೇಶ ಒಂದು ಹಾಡಿನಲ್ಲಿ ಕಣ್ಣಿಗೆ ಕಟ್ಟುವಂತೆ ಮೂಡಿನಿಂತಿದೆ.

ಹಂತೀಯ ಹೊಡೆದೆತ್ತು ಹಂತೇಲಿ ಬಂದರ!

ಸುಂಕ ಜಾಡಿಸದೆ ಸೆರಗೀಲೆ! ಕಂದನಿಗೆ

ಹಂತೀಯ ಎತ್ತು ಹದಿನೆಂಟು!

**ಹಾಡ್ಯಾಡಿ ಹಂತಿ ಹೊಡೆದಾರ**

ಮೇಟಿಯ ಎರಡೂ ಕಡೆ ಎರಡು ಸಾಲು ದನಗಳನ್ನು ಕಟ್ಟಿ, ಒಂದೊಂದು ಸಾಲನ್ನು ಒಬ್ಬೊಬ್ಬರು ಹೊಡೆಯುವರು ಹಂತಿಹೊಡೆಯುತ್ತ ಒಬ್ಬರಾದ ಮೇಲೆ ಒಬ್ಬರು ಇಂಪಾದ

ದನಿ ತೆಗೆದು ಹಾಡುವರು. ಒಮ್ಮೊಮ್ಮೆ ಒಂದೊಂದೇ ಪಾದ

ಎತ್ತಿಕೊಂಡೂ ಹಾಡುವುದುಂಟು. ' ಮೇಟಿಯ ಬುಡಕ ಬೋರ್ಯಾಡುದೇನೋ'

ಎಂದು ಒಬ್ಬ ಹಾಡಿದರೆ, ಇದಕ್ಕುತ್ತರವಾಗಿ ಇನ್ನೊಬ್ಬ' ಅದು ನಮ್ಮ ತಾಡಾಕಾಳ ಹೋರಿಯ ಹಿಂಡೋ' ಎಂದು ಹಾಡುವನು. ಈ ಹಾಡುಗಳು ದೂರದವರೆಗೂ ಕೇಳಿಸುವವು.ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಹೋಗಿ ಮನೆಯಲ್ಲಿ ಇರುವ ತಾಯಿಗೂ ಕೇಳಿಸುವವು. ಇದನ್ನೂ ಹಾಡೊಂದರಲ್ಲಿ ಹೀಗೆ ಹೇಳಿದೆ.

ಊರ ಮುಂದಿನ ಏನಂತ ಬೀಸ್ಯಾವ!

ಕಿವಿಗೊಟ್ಟು ಕೇಳ ಹಡದವ್ವ! ನಿನ ಮಗ!

ಹಾಡ್ಯಾಡಿ ಹಂತಿ ಹೊಡದಾನ!

ಹಂತಿ ಯಾರ ಹೊಲದಲ್ಲಿ ನಡೆದಿದೆ ಎಂಬುದನ್ನು ಈ ಹಾಡು ಕೇಳಿಯೇ ತಿಳಿದುಕೊಳ್ಳಬಹುದು. ಇವು ಅಷ್ಟು ದೂರದವರೆಗೂ ಕೇಳಿಸುವವು. ಬಿಟ್ಟು ಬಿಡದೆ ಹಾಡು ಹೇಳುವುದರಿಂದ ಒಕ್ಕಲಿಗನಿಗೆ ಹೊತ್ತು ಹೋದುದೇ ಗೊತ್ತಾಗದು. ನಡು ನಡುವೆ ಹಂತಿ ನಿಲ್ಲಿಸಿ ಕಂಕಿ ತೆಗೆಯುವನು. ಕಂಕಿ ತೆಗೆಯುತ್ತ ಹಾಡುವ ಹಾಡೊಂದು ಹೀಗಿದೆ.

ಹಂತಿಯ ಹೊಗಸ್ಯಾವೊ ಗುಂತ್ಯಾಗಿ ನಿಂತಾವೊ

ಜಂತರ ರಾಗೋಲ ಹಿಡಿದೇವೊ! ಬಸವಣ್ಣ!

ತರ ತರಬಿ ಕಂಕಿ ತೆಗೆದೇವೊ!

ಬೆಳತನಕ ದನಿ ತೆಗೆದು ಈ ಹಾಡುಗಳನ್ನು ಹೇಳುವರು. ಕೇಳಲು ಇವು ಬಹು ಇಂಪು. ಇವಕ್ಕೆ ರಾತ್ರಿಯೇ ನಾಚಿ ಬೆಳಗಾಯಿತು, ಎಂದು ಈ ಕೆಳಗಿನ ಹಾಡಿನಲ್ಲಿ ಹೇಳಿದೆ.

ರಾಚಯ್ಯ ನಿನಮಗ ಊಚ ಸಾವಳಿಗೇಶ!

ಕೋಚಿತ್ತಿ ಕಣಕೆ ಹಾಡಿದನು! ಬೆಳತನಕ!

ನಾಚಿ ಕತ್ತಲೆಯು ಬೆಳಗಾಯ್ತು!

**ಕೃತಜ್ಞತೆ**

ಹಂತಿಯ ಹಾಡುಗಳಲ್ಲಿ ಒಕ್ಕಲಿಗ ಬಸವಣ್ಣನಿಗೆ ಕೃತಜ್ಞತೆ ಹೇಳಿದ್ದಾನೆ. ಆಯಗಾರರನ್ನೂ ಕೃತಜ್ಞತೆಯಿಂದ ನೆನಪಿಸಿಕೊಂಡಿದ್ದಾನೆ. ಬಸವಣ್ಣ ಇಡೀ ದಿನ ಮಣ್ಣಲ್ಲಿ ಮಣ್ಣಾಗಿ ಸಣ್ಣಾಗಿ ದುಡಿಯುವನು. ಭೂಮಿತಾಯಿಯ ಬಿಗಿದ ಮೈಯನ್ನು ಹಟಿ, ಕುಂಟೆ ಹೊಡೆದು ಸಡಿಲು ಮಾಡುವನು. ಇದಕ್ಕೆ ಪ್ರತಿಯಾಗಿ ಆಕೆ ಕಾಳು ಕಡಿಕೊಟ್ಟು ಸಲಹುವಳು ಆಕೆ ಅನ್ನ ನೀಡುವಂತೆ ಮಾಡುವವನೇ ಬಸವಣ್ಣ. ಆತನ ದುಡಿಮೆ ನಿಜಕ್ಕೂ ದೊಡ್ಡದು. ರೈತ ಆತನಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ ಎನ್ನುವನು. ಭೂಮಿತಾಯಿಯನ್ನು ಆತ ಹೊತ್ತುಕೊಂಡಿರುವನೆಂದು ಹಾಡಿದ ಹಾಡೊಂದು ಹೀಗಿದೆ.

ಕುರುಬ ಕೂರಿಗಿ ಹೊತ್ತು ಬಡಿಗ್ಯಾ ಬಾಚಿ ಹೊತ್ತ!

ಒಕ್ಕಲಿಗ ಹೊತ್ತ ಕುಡ ಮಿಣಿಯ ಬಾರಕೋಲ!

ಬಸವಣ್ಣ ಹೊತ್ತ ಭೂಮಿ ತಾಯ!

ಕುರುಬ, ಬಡಿಗ್ಯಾ ಮತ್ತು ಒಕ್ಕಲಿಗ ತಂತಮ್ಮ ಕೆಲಸಕ್ಕೆ ಬೇಕಾಗುವ ಸಾಮಾನು ಹೊರುವರು. ಇದು ಸಹಜವಾದುದು. ಆದರೆ ಬಸವಣ್ಣ ಭೂಮಿ ತಾಯಿಯನ್ನು ಹೊತ್ತುದು ಸಾಮಾನ್ಯವಾದುದಲ್ಲ. ಆತನ ಅಪಾರಶಕ್ತಿಗೆ, ಹೊಣೆಗಾರಿಕೆಗೆ ಇದು ನಿದರ್ಶನ.

ಆದಿಶೇಷ ಭೂಮಿ ಹೊತ್ತಿದ್ದಾನೆ, ಎಂಬ ಕಲ್ಪನೆ ಇದೆ. ಇದಕ್ಕಿಂತಲೂ ಬಸವಣ್ಣ ಭೂಮಿ ತಾಯಿಯನ್ನು ಹೊತ್ತಕಲ್ಪನೆ ಉಚಿತವಾದುದಾಗಿವೆ. ಜಗತ್ತೇ ಬಸವಣ್ಣನ ಮೇಲೆ ಅವಲಂಬಿತವಾಗಿದೆ, ಎಂಬರ್ಥ ಇಲ್ಲಿದೆ. ಇಂಥ ಬಸವಣ್ಣನಿಗೂ ಮುಪ್ಪು ಬರುವುದು ಆಗ ಗಳೆ ಎಳೆಯಲು ಶಕ್ತಿ ಸಾಲದು. ಇಂಥ ವೇಳೆಯಲ್ಲಿ ಬಸವಣ್ಣನನ್ನು ಹೂಡಿ ಹೊಡೆಯಬಾರದು.- ಹೊಡೆದರೆ ಆತ ಶಿವನಲ್ಲಿ ಸಾವ ಬೇಡುವನು. ಕಟುಕರಿಗೆ ಕೊಟ್ಟು ಕೊಲ್ಲಿಸಬೇಡಿರೆಂದು ತನ್ನ ಒಡೆಯನಿಗೆ ಬೇಡುವನು. ಮೂಕ ಪ್ರಾಣಿ ಪಡುವ ಈ ವೇದನೆ ಕರುಳನ್ನು ಇರಿಯುವಂಥದು. ತಿಳಿವಳಿಕೆಯುಳ್ಳ ಒಕ್ಕಲಿಗ ಇದನ್ನು ಹಾಡಿನಲ್ಲಿ ಹೇಳಿದ್ದಾನೆ. ಇದ್ದರೂ ದುಡುಯುವ, ಸತ್ತರೂ ದುಡಿಯುವ ಆತನನ್ನು ನೆನೆ ನೆನೆಸಿ ಮರುಗಿದ್ದಾನೆ. ತನ್ನ ಮರುಕದ ಧಾರೆಯನ್ನು ಕೃತಜ್ಞತೆಯನ್ನು ಅನೇಕ ಹಾಡುಗಳಲ್ಲಿ ಹರಿಸಿದುದನ್ನು ಕಾಣಬಹುದು.

ಇದ್ದರೂ ದುಡಿದೆಲ್ಲೊ ಸತ್ತರೂ ದುಡಿದೆಲ್ಲೊ!

ಡೋರರ ಡೋಣೆಯಾಗಿ ನೆನಿದೆಲ್ಲೊ! ಬಸವಣ್ಣ!

ನೇಗಿಲ ಮಿಣಿಯಾಗಿ ನಡೆದೆಲ್ಲೊ!

ಸತ್ತ ಬಸವಣ್ಣನ ಎತ್ತಿ ಕುತ್ತಿಗೆ ಕೊಯ್ದು!

ಜತ್ತಿಗಿ ಬಾರು ಮಣಿ ಕಣ್ಣೆ! ಬಸವಣ್ಣ!

ಸತ್ತರೂ ಸರುಲೋಕ ಸಲವ್ವಾನ!

ಹಂತಿಯ ಹಾಡುಗಳಲ್ಲಿ ಆಯಗಾರರನ್ನು ನೆನಪಿಸಿಕೊಂಡು ಕೃತಜ್ಞತೆ ಹೇಳಿದ್ದಾನೆ. ಒಕ್ಕಲಿಗ, ಇವರಿಗೆ ತನ್ನ ರಾಶಿಯಲ್ಲಿ ಪಾಲು ಕೊಡುವನು. ಜೊತೆಗೆ ಪ್ರೀತಿ, ವಿಶ್ವಾಸವನ್ನು ತೋರುವನು.

ಚಿತ್ತಾದ ರಾಗೋಲ ಮತ್ಕಾರ ಮಾಡ್ಯಾರ!

ಚಿತ್ತಾರದ ಹುಡುಗ ಪದುಮಣ್ಣ! ಮಾಡಿರುವ!

ಚಿತ್ರ ರಾಗೋಲು ಎಳಿಲ್ಯಾ್ಗೋ!

ಇಲ್ಲಿ ಆತ, ರಾಗೋಲಿನ ಮೇಲಿನ ಪ್ರೀತಿಯಿಂದ ಹೀಗೆ ಹಾಡಿಲ್ಲ. ಪದುಮಣ್ಣನ ಮೇಲಿನ ಪ್ರೀತಿ, ವಿಶ್ವಾಸದಿಂದ ಹೇಳಿರುವನು. ಇನ್ನೊಬ್ಬ ಪದುಮಣ್ಣನ ರಾಗೋಲು ಹಿಡಿದು ಕಂಕಿ ತೆಗೆದರೆ ದಣಿವು ಆಗುವುದಿಲ್ಲ ಎಂದು ಹಾಡಿರುವನು.

ಸಣ್ಣ್ಲ ರಾಗೋಲ ಯಾರ ಕೆತ್ತ್ಯಾರಣ್ಣ!

ಪಂಚಾಳರ ಹುಡುಗ ಪದುಮಣ್ಣ! ಕೆತ್ತಿದ ದಿಂಡ!

ಕಂಕಿ ಎಳದರ ದಣುವಿಲ್ಲ!

ದಿಂಡು ಕೆತ್ತುವುದರಲ್ಲೂ ಜಾಣತನವಿದೆ. ಇದು ಎಲ್ಲರಿಗೂ ಬರದು. ಪದುಮಣ್ಣನಿಗೇ ಇದು ಬರುವುದು. ಒಕ್ಕಲಿಗ ಆತನಿಗೆ ಹಾಡಿನ ಮೂಲಕ ಕೃತಜ್ಞತೆ ಹೇಳಿದ್ದಾನೆ. ಆಯಗಾರರನ್ನು ಆತ್ಮೀಯತೆಯಿಂದ ಕಂಡು ಕಣಕ್ಕೆ ಕರೆಯುವ ಹಾಡುಗಳೂ ಇವೆ.

ಬಡಿಗೇರಣ್ಣಾ ಕಣಕ್ಕೆ ಬಾರೊ
ಹೊನ್ನದ ರಾಗೋಲ ಕಣಕ್ಕೆ ತಾರೊ
ಕುಂಬಾರಣ್ಣಾ ಕಣಕ್ಕೆ ಬಾರೊ
ತುಂಬಿದ ಕೊಡಾ ಕಣಕೆ ತಾರೊ
ಹೂಗಾರಣ್ಣಾ ಕಣಕೆ ಬಾರೊ
ಹೂವಿನ ದಂಡಿ ಕಣಕೆ ತಾರೊ!

ಬಡಿಗ, ಕುಂಬಾರ, ಹೂಗಾರ ಇವರನ್ನು ಅಣ್ಣ ಎಂದು ಕರೆದುದು ಆತ್ಮೀಯ ಸಂಬಂಧಕ್ಕೆ ಸಾಕ್ಷಿಯಾಗಿದೆ. ಇವರೆಲ್ಲ ಬರೀ ಆಯಗಾರರಲ್ಲ, ತನ್ನ ಬಂಧುಗಳೇ ಎಂದು ಒಕ್ಕಲಿಗ ಭಾವಿಸುವನು.

## ನಿಸರ್ಗ ವರ್ಣನೆ

ಶರಣರ ಕುರಿತಿದ್ದ ಹಂತಿಯ ಹಾಡುಗಳ ಪ್ರಭಾವ ಒಕ್ಕಲಿಗನ ಮೇಲಷ್ಟೇ ಆಗಿಲ್ಲ. ನಿಸರ್ಗದ ಮೇಲೂ ಆಗಿದೆ. ಇವುಗಳ ಸೋಂಕಿನಿಂದ ನಿಸರ್ಗದ ಕೆಲಸಗಳು ತಮ್ಮಿಂದ ತಾವೇ ನಡೆಯುತ್ತವೆ, ಎಂದು ಕೆಲವು ಹಾಡುಗಳಲ್ಲಿ ಹೇಳಿದೆ. ಅಂಥ ಎರಡು ಹಾಡುಗಳನ್ನಿಲ್ಲಿ ಉದಾಹರಿಸಬಹುದು.

ನಿನ್ನ ಹಾಡವು ಸೋಂಕಿ ಹೊನ್ನವಂ ಬೆಟ್ಟರಳಿ!
ಹೊನ್ನುರಿಯು ಹತ್ತಿ ಜಗಬೆಳಗಿ! ಬೆಳತನಕ!
ಸಣ್ಣಾಗಿ ಸುರಿಯೆ ಇಬ್ಬನ್ನಿ!

ಹಾಡುದಕೆ ಹಾಡೆದ್ದು ಮಾಡುವುದು ಶಿವಪೂಜೆ
ಕೂಡಿ ಇಬ್ಬನ್ನಿ ಝರಿಯಾಗಿ! ಶಿವನಡಿಗೆ!
ಮೂಡಲವು ಬೆಳಗಿ ಹೂಬಿಸಿಲು!

ಹೊನ್ನವರಿ ಕಂಟಿಯಲ್ಲಿನ ಹೂ ಅರಳುವುದು, ಬೆಟ್ಟ ಅರಳಿದಂತೆ ಕಾಣುವುದು. ಒಕ್ಕಲಿಗನಿಗೆ. ಇಬ್ಬನ್ನಿ ಸುರಿಯುವುದು ನಿಸರ್ಗ ಬದಲಾವಣೆ. ಇವೆಲ್ಲ ಹಾಡಿನಿಂದ ಆಗುವವು, ಎಂದು ವರ್ಣಿಸಿದೆ. ಬೆಳತನಕ ಹಾಡಿದ ಹಾಡೇ ಶಿವನಿಗೆ ಸಲ್ಲಿಸುವ ಪೂಜೆ, ಬೆಳಗಾದೊಡನೆ ಬೀಳುವ ಇಬ್ಬನ್ನಿ ಹನಿಗಳು ಶಿವನಿಗೆ ಎರೆದ ನೀರು. ಮುಂಜಾನೆ ಬೀಳುವ ಹೂಬಿಸಿಲೇ ಶಿವನಿಗೆ ಬೆಳಗುವ ಮಂಗಳಾರತಿ. ಈ ಮಂಗಳಾರತಿಯೊಂದಿಗೆ ಬೆಳಗಾಯಿತು, ಎನ್ನುವ ಬಣ್ಣನೆ ಬಲು ಸೊಗಸಾಗಿದೆ.

ಬೆಳ್ಳನೆ ಬೆಳಗಾಗಿ ಬೆಳ್ಳಿ ಮೂಡಲಗ್ಯೆದು!
ಒಳ್ಳೊಳ್ಳೆ ಮೀನ ಗರಿಗಟ್ಟಿ! ಆಡ್ಯಾವೊ!
ಗರತಿ ಗಂಗಮ್ಮನ ಉಡಿಯಾಗೊ!

ನೀರು ಒಕ್ಕಲಿಗನಿಗೆ ಬರೀ ನೀರಲ್ಲ, ಗರತಿ ಗಂಗಮ್ಮ. ನಸುಕಿನಲ್ಲಿ ಈಕೆಯ ಉಡಿಯಲ್ಲಿ ಮೀನು ಗರಿಬಿಚ್ಚಿ ಆಡುವುದೆಂದು ಬಣ್ಣಿಸಿದುದು ನೈಜವಾಗಿದೆ. ಬೆಳಗೂ ಆತನ ಪಾಲಿಗೆ ಬೆಳಗಲ್ಲ, ಬೆಳ್ಳಿ. ನಿಸರ್ಗವನ್ನು ದೇವರೆಂದೇ ತಿಳಿದು ಹಾಡಿದಂಥ ಹಾಡುಗಳಿವು.

## ಹಾಸ್ಯ

ಪಂತಿಯ ಹಾಡುಗಳಲ್ಲಿ ಅಲ್ಲಲ್ಲಿ ಹಾಸ್ಯವೂ ಹಣಿಕಿಕ್ಕಿದುದನ್ನು ಕಾಣುವೆವು. ಒಕ್ಕಲಿಗ ಹಾಸ್ಯದ ಹಾಡುಗಳನ್ನು ಪಂತಿ ಕಟ್ಟಿದೊಡನೆಯೋ ಹಾಡುವುದಿಲ್ಲ. ಮೊದಮೊದಲು ದೇವತಾಸ್ತುತಿಯ ಹಾಡುಗಳನ್ನು ಹೇಳಿ ಅನಂತರ ಆ ಹಾಡು ಈ ಹಾಡು ಹಾಡುವರು. ಇಷ್ಟೊತ್ತಿಗೆ ಮಧ್ಯರಾತ್ರಿಯಾಗುವುದು. ಈಗ ನಿದ್ದೆಯ ಮಂಪರು ಬರ ತೊಡಗುವುದು. ನಿದ್ದೆಯನ್ನು ಹೋಗಲಾಡಿಸಲು ಹಾಸ್ಯದ ಹಾಡುಗಳು ಬೇಕಾಗುವವು. ಒಬ್ಬರಾದ ಮೇಲೊಬ್ಬರು ಇವುಗಳನ್ನು ಹೇಳ ತೊಡಗುವರು.

ಹುಗ್ಗಿ ಉಣಿಸ್ಯಾರಂತ ಹಿಗ್ಗಿಲಿ ಬಂದ್ರ!
ಡೊಗ್ಗಿಸ್ಯಾರಣ್ಣ ಪಂತಿಗೆ! ಗೌಡ್ರ!
ಬಗ್ಗಿಸ್ಯಾರಣ್ಣ ಕಂಕಿಗೊ!

ಪುಕ್ಕಟೆ ಊಟ ಹೊಡೆಯುತ್ತ ತಿರುಗುವ ಸೋಮಾರಿಯೊಬ್ಬನ ಚಿತ್ರವಿದು. ಇಲ್ಲಿ ಆತ ಫಜೀತಿ ಸಿಕ್ಕಿ ಹಾಕಿಕೊಂಡಿದ್ದಾನೆ. ಆತ ಬಂದದ್ದು ಪಂತಿ ಹೊಡೆಯಲು ಅಲ್ಲ ಹುಗ್ಗಿ ಹೊಡೆಯಲು. ಆದರೆ ಈಗ ಆದದ್ದು! ಆತನಿಗೆ ಕಸಿವಿಸಿ ಉಳಿದವರಿಗೆ ಬಲು ಖುಷಿ, ಹುಗ್ಗಿ

ಉಣಿಸದೆ ಆತನನ್ನು ಪಂತಿ ಹೊಡೆಯಲು ಹಚ್ಚಿದ್ದಾರೆ. ಇನ್ನೊಂದೆಡೆ ಹುಗ್ಗಿ ಉಣಿಸಿ, ಹರಿನಾಮ ಹಚ್ಚಿ, ಹರತಂಗಿ ತೊಡಿಸಿ ಪಂತಿ ಹೊಡೆಯಲು ಹಚ್ಚಿದ್ದಾರೆ ಅದು ಹೀಗಿದೆ.

ಹರಕಂಗಿ ತೊಡಿಸ್ಯಾರ ಹರಿನಾಮ ಹಚ್ಯಾರ!
ಹುಗ್ಗಿಯ ಉಣಿಸ್ಯಾರ! ಪಂತಿಯ!
ಹೊಡಿಸ್ಯಾರ ಬೆಳತನಕ!

ಈ ಹಾಡುಗಳು ಒಕ್ಕಲಿಗನ ಹಾಸ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ. ಕಂಕಿ ತೆಗೆಯುವಾಗ ಹಾಸ್ಯದ ಚಟುಕುಗಳನ್ನು ಹೇಳುವುದುಂಟು.

ವ್ಹಾ ವ್ಹಾ ಎಲೆಗಾರ್ತಿ ಎಲೆಗಾರ್ತಿ
ಬಾಯಿ ಕೆಂಪಗ ಮಾಡ್ತಿ ಮಾಡ್ತಿ
ಬುಕ್ಕಿಟ್ಟಗಾರ್ತಿ ಬುಕ್ಕಿಟ್ಟಗಾರ್ತಿ
ಗಮುಗಮನಾರ್ತಿ ನಾರ್ತಿ

ಕಂಚೆಗಾರ ಮಾಡಿದ ಕಳಸೊ ಕಳಸೊ
ಬಡಿಗ್ಯಾ ಮಾಡಿದ ಹೊರಸೊ ಹೊರಸೊ
ಹೊರಸ ಮ್ಯಾಲ ಬಹಳ ಸರಸೊ ಸರಸೊ
ಪಿರತಿಯ ಗೆಳತಿನ ಕರಸೊ ಕರಸೊ

ಸಂವಾದ ರೂಪದ ಈ ಚುಟುಕುಗಳು ಶೃಂಗಾರ ಹಾಸ್ಯದಿಂದ ಕೂಡಿವೆ. ಇವುಗಳಲ್ಲಿನ ಸರಸ ಸಲ್ಲಾಪದ ಮಾತುಗಳು ಕೇಳುಗರ ಮನಸ್ಸನ್ನು ಆಕರ್ಷಿಸುವವು. ಕಂಕಿ ತೆಗೆಯುವಾಗಿನ ಸುಂಕದ ಕಡಿತವನ್ನು ಮರೆಸುವವು. ರಂಜನೆಯನ್ನು ನೀಡುವವು, ಸುಂಕ ಕಡಿದುದರ ಪರಿವೆ ಆಗದಿರಲೆಂದು ಇವನ್ನು ಬೇಗ ಬೇಗನೇ ಹೇಳುವುದುಂಟು. ಇವು ಶೃಂಗಾರದ ಸವಿಯನ್ನು ತೋರಿ, ಹಾಸ್ಯದ ಹೊನಲನ್ನು ಹರಿಸುವವು. ಅದು ಮಿಟ್ಟಿ ಒಕ್ಕಲಿಗನ ಮನದಲ್ಲಿನ ಬಯಕೆಗಳು ಇವುಗಳ ಮೂಲಕ ಹೊರ ಹೊಮ್ಮುವವು.

ಈ ಹಾಡುಗಳಲ್ಲಿ ಒಕ್ಕಲಿಗ ದೇವರನ್ನೂ ಮಾನವರಂತೆಯೇ ಕಂಡು ಹಾಸ್ಯ ಮಾಡಿದ್ದುಂಟು. ದ್ವೇಷ, ಆಸೆ, ಹಸಿವು, ದೇವರಿಗೂ ಇರುವವೆಂದು ತಿಳಿಯುವನು. ಹೀಗೆ ತಿಳಿದು ಹಾಡಿದುದನ್ನಿಲ್ಲಿ ಅನೇಕ ಹಾಡುಗಳಿಂದ ಅರಿಯುವೆವು.

ಅಚಿಹೊಲ್ದಾನ ಲಕ್ಷಿಮಿ ಈಚ್ಯಾಕ ಬಂದಾಳ!
ರಾಶಿ ಬುತ್ತಿ ಕಿಚಡೀಗಿ ಆಸೆ ಮಾಡಿ ಬಂದಾಳೊ!
ಅಚಿಹೊಲ್ದಾನ ಬೂದ ಈಚ್ಯಾಕ ಬಂದಾನೊ!
ರಾಶಿ ಬುತ್ತಿ ಕಿಚಡೀಗಿ ಆಸೆ ಮಾಡಿ ಬಂದಾನೊ!

ಸಂವಾದ ರೂಪದ ಈ ಹಾಡುಗಳಲ್ಲಿ ಸಹಜತೆ, ಸರಳತೆ ಎದ್ದು ಕಾಣುವವು. ಇಂಥ ಹಾಡುಗಳು ಒಕ್ಕಲಿಗನಿಗೆ ಆದ ದಣಿವನ್ನು ನಿವಾರಿಸುವವು. ಅದರಲ್ಲಿ ಮತ್ತೆ ಹೊಸ ಹುರುಪು ತುಂಬಿ ಕೆಲಸಕ್ಕೆ ಅಣಿಗೊಳಿಸುವವು.

ಹಂತಿಯ ಹಾಡುಗಳಲ್ಲಿ ಎದ್ದು ಕಾಣುವ ವಿಶೇಷತೆಯೆಂದರೆ ಒಕ್ಕಲಿಗನ ಭಕ್ತಿ, ರಸಿಕತೆ, ಹಾಸ್ಯ, ಕೃತಜ್ಞಾತಾ ಭಾವ ಇವೆಲ್ಲವೂ ತಕ್ಕಮಟ್ಟಿಗೆ ವ್ಯಕ್ತಗೊಂಡಿವೆ. ಸುಗ್ಗಿ ಒಕ್ಕಲಿಗನ ಪಾಲಿಗೆ ಒಂದು ಹಿರಿಯ ಹಬ್ಬ. ಇದನ್ನು ಆತ ಭಕ್ತಿಯಿಂದ ಮಾಡುವನು. ಇಡೀ ವರ್ಷದ ತನ್ನ ಶ್ರಮವನ್ನೇ ರಾಶಿ ಮಾಡುತ್ತೇನೆ ಎಂಬ ಸಂತಸದಲ್ಲಿರುವನು. ಆತ ಪಟ್ಟ ಸಂತೋಷ, ಸಂಭ್ರಮವೇ ಈ ಹಾಡುಗಳ ಜೀವಾಳವಾಗಿದೆ. ದುಃಖದ ಸಂಗತಿ ಈ ಹಾಡುಗಳಲ್ಲಿ ಬರದು. ಅಶ್ಲೀಲತೆಯೂ ಕಾಣಿಸದು. ಇದೊಂದು ಈ ಹಾಡುಗಳ ವೈಶಿಷ್ಟ್ಯವೇ ಆಗಿದೆ.

ಈ ಹಾಡುಗಳು ಹಳ್ಳಿಯಲ್ಲಿ ಹುಟ್ಟಿಬೆಳೆದಂಥವು. ಪಟ್ಟಣದ ಕೃತಕತೆಯ ಸೋಂಕು ಇವಕ್ಕೆ ತಟ್ಟಿಲ್ಲ. ಇವುಗಳ ಭಾಷೆ ಸರಳವಾದುದು, ನೇರವಾದುದು, ಸಾಮಾನ್ಯ ಜನನಿತ್ಯ ಆಡುವಂಥದು. ಇವುಗಳಲ್ಲಿ ಬರುವ ಕಥೆಯೂ ಎಲ್ಲರಿಗೂ ಸುಲಭವಾಗಿ ತಿಳಿಯುವಂಥದು. ಅನುಭವ ತುಂಬಿ ಬಂದಾಗ ಹಾಡಿದ ಹಾಡೆಲ್ಲವೂ ಕಾವ್ಯವಾಗುತ್ತದೆ ಎಂಬುದಕ್ಕೆ ಇವು ಒಳ್ಳೆಯ ಉದಾಹರಣೆಗಳು.

ಹಂತಿಯ ಹಾಡುಗಳನ್ನು ಕಟ್ಟಿ ಹಾಡಿದವರು ನಿರಕ್ಷರಿಗಳಾದ ಒಕ್ಕಲು ಮಕ್ಕಳು ಇವರು ಕುರಿತೋದದೆ ಪದಕಟ್ಟಿ ಹಾಡಿದ ಜಾಣರು. ಆಯಾ ಸನ್ನಿವೇಶಕ್ಕೆ ತಕ್ಕಂತೆ ಹಾಡುಕಟ್ಟಿದ ಆಶುಕವಿಗಳು.ನಿಜವಾದ ನಿಸರ್ಗಕವಿಗಳೂ ಹೌದು. ತಮ್ಮ ಅನುಭವಕ್ಕೆ ಬಂದ ವಿಷಯಗಳನ್ನೆಲ್ಲ ಇವರು ಹಾಡಾಗಿಸಿದ್ದಾರೆ.

ಇತ್ತಿತ್ತಲಾಗಿ ಕೆಲವರು ರಾಶಿ ಮಾಡಲು ಕಲ್ಲಿನ ಉಳಕ (ರೂಳ) ಯಂತ್ರಗಳನ್ನು ಬಳಸತೊಡಗಿದ್ದಾರೆ. ಇದರಿಂದ ಹಂತಿ ಕಟ್ಟುವುದು ಕಡಿಮೆಯಾಗ ತೊಡಗಿದೆ. ಇದು ಕಡಿಮೆಯಾದಂತೆ ಹಾಡುಗಳೂ ಕಡಿಮೆಯಾಗುವುದು ಸಹಜ. ಆದರೂ ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ರೈತರು ರಾಶಿ ಮಾಡಲು ಹಂತಿಯನ್ನೇ ಅವಲಂಬಿಸಿದ್ದಾರೆ. ಹಂತಿ ಕಟ್ಟಿದಾಗ ಹಾಡು ಬಲ್ಲವರು ಹಾಡುತ್ತಲಿದ್ದಾರೆ. ಈ ಹಾಡುಗಳ ರಚನೆ ಸಂಪೂರ್ಣ ನಿಂತಿದೆಯೆಂದಲ್ಲ, ಈಗಲೂ ಇವುಗಳ ರಚನೆ ನಡೆದೇ ಇದೆ. ಇವನ್ನು ವಿಶೇಷವಾಗಿ ಬೆಳುವಲ ನಾಡಿನ ಜಿಲ್ಲೆಗಳಾದ ಕಲಬುರ್ಗಿ, ವಿಜಾಪುರ, ಬೀದರ, ಬೆಳಗಾವಿ, ರಾಯಚೂರು ಬಳ್ಳಾರಿ ಹಾಗೂ ಧಾರವಾಡ ಈ ಕಡೆಗಳಲ್ಲಿ ಕಾಣುವೆವು.

ಹಳ್ಳಿಗರು ಹಾಡುವ ಹಾಡುಗಳೆಂದು ಇವನ್ನು ಅಲಕ್ಷಿಸಬಾರದು. ಸುಶಿಕ್ಷಿತರಿಗೂ ಬೇಕಾಗುವ ಎಷ್ಟೋ ವಿಚಾರಗಳು ಇವುಗಳಲ್ಲವೆ. ಒಕ್ಕಲಿಗನ ಸಮಗ್ರ ಜೀವನ ವಿಧಾನವೇ ಇವುಗಳಲ್ಲಿ ಅಡಕವಾಗಿದೆ. ಈ ಹಾಡಿನ ರಸಗಂಗೆ ಬತ್ತಿ ಹೋಗುವ ಮುನ್ನ ಇವನ್ನು ಸಂಗ್ರಹಿಸಿ, ರಕ್ಷಿಸಬೇಕು. ಇಂಥ ಗುರುತರವಾದ ಹೊಣೆ ಇಂದು ನಮ್ಮ- ನಿಮ್ಮ ಮೇಲಿದೆಯಲ್ಲವೇ?

* * * * *

# ಜಾನಪದ ಮುನ್ನೋಟ

ಡಾ. ಡಿ. ಕೆ. ರಾಜೇಂದ್ರ

-೧-

ಈ ಗೋಷ್ಠಿ 'ಜಾನಪದ ಮುನ್ನೋಟ' ಎಂದಿದ್ದರೂ, ಮುನ್ನೋಟಕ್ಕೆ ಮೊದಲು ಹಿನ್ನೋಟದ ಒಂದು ಸಣ್ಣ ಸಮೀಕ್ಷೆಯೂ ಅಗತ್ಯವಿದೆ ಎಂದು ಭಾವಿಸುತ್ತೇನೆ. ಹಾಗಾಗಿ ಈ ಲೇಖನ ಎರಡು ಘಟ್ಟಗಳಲ್ಲಿ ಮುನ್ನಡೆದಿದೆ: ಒಂದು 'ಜಾನಪದ ಹಿನ್ನೋಟ' ಮತ್ತೊಂದು 'ಜಾನಪದ ಮುನ್ನೋಟ.'

ಜಾನಪದ ಇಂದು ಒಂದು ಮಹತ್ವದ ಅಧ್ಯಯನ ವಿಷಯವಾಗಿ ಬೆಳೆಯುತ್ತಿದೆ. ಮಾನವ ಶಾಸ್ತ್ರದ ಅಧ್ಯಯನದಲ್ಲಿ ಅದಕ್ಕೊಂದು ವಿಶಿಷ್ಟ ಸ್ಥಾನ ದೊರೆತಿದೆ. ಮಾನವನ ಬದುಕಿನ ಮೂಲ ನೆಲೆಯಾದ ಜಾನಪದ, ಅದರ ಆಳ-ಅಗಲ, ಎತ್ತರ-ಬಿತ್ತರಗಳೆಲ್ಲವನ್ನೂ ಮೈಗೂಡಿಸಿಕೊಂಡು ಬೆಳೆದು ಬಂದದ್ದಾದ್ದರಿಂದ, ಮಾನವ ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದ ಅಧ್ಯಯನದ ಅನಿವಾರ್ಯತೆ ಹೆಚ್ಚಾಗಿ ಕಂಡುಬರುತ್ತದೆ.

ಒಂದು ಶಾಸ್ತ್ರ ವಿಷಯವಾಗಿ ರೂಪುಗೊಳ್ಳುತ್ತಿರುವ ಜಾನಪದ, ಜಗತ್ತಿನ ಜಾನಪದ ವಿದ್ವಾಂಸರ ಹಾಗೂ ಮಾನವ ಶಾಸ್ತ್ರಜ್ಞರ ಗಮನವನ್ನು ಬಹಳವಾಗಿ ಸೆಳೆದಿದೆ. ಜಾನಪದವನ್ನು ಕುರಿತಂತೆ ಹಲವು ಸಿದ್ಧಾಂತಗಳು ರೂಪುಗೊಂಡು, ಅದಕ್ಕೊಂದು ಶಾಸ್ತ್ರೀಯ ಅಧ್ಯಯನದ ಚೌಕಟ್ಟನ್ನು ತಂದುಕೊಟ್ಟಿವೆ. ಜಾನಪದ ಸಾಮಗ್ರಿಯ ಸಂಗ್ರಹ, ವರ್ಗೀಕರಣ, ಸಂಪಾದನೆ ಹಾಗೂ ಅವುಗಳನ್ನು ಕುರಿತ ವ್ಯಾಖ್ಯಾನ ವಿವಿಧ ರೀತಿಯಲ್ಲಿ ನಡೆಯುತ್ತ ಬಂದಿರುವುದು ಗಮನಾರ್ಹ.

ಕನ್ನಡದಲ್ಲಿ ಜಾನಪದ ಅಧ್ಯಯನ ಯಾವಾಗ ಆರಂಭವಾಯಿತೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಒಂದರ್ಥದಲ್ಲಿ ೧೮೭೧ ರಲ್ಲಿ ಚಾರ್ಲ್ಸ್ ಇ. ಗೋವರ್ ಅವರು 'Folk songs of Southern India'....................ಸಂಕಲನದಲ್ಲಿ 'Canarese Folk songs' ಎಂಬ ಹೆಸರಿನಲ್ಲಿ ಮಾಡಿದ ಪ್ರಯತ್ನವೇ ಮೊದಲಿನದೆನ್ನಬಹುದು. ವಾಸ್ತವವಾಗಿ ಇವು ಜಾನಪದ ಗೀತೆಗಳಲ್ಲದಿದ್ದರೂ, ಹಾಗೆಂದು ಭಾವಿಸಿ ಸಂಗ್ರಹಿಸಿದ 'ದಾಸರ ಹಾಡುಗಳು'. ಇಲ್ಲಿಂದ ಆರಂಭಗೊಂಡ ಕನ್ನಡ ಜಾನಪದ ಅಧ್ಯಯನ ಹಲವು ತಪ್ಪು ಹೆಜ್ಜೆಗಳನ್ನಿಡುತ್ತ, ಜಾನಪದದ ಪೂರ್ಣಕಲ್ಪನೆಯೇ ಇಲ್ಲದೆ, ಹಲವು ಮಹತ್ವದ ಗ್ರಂಥಗಳನ್ನು ಹೊರತಂದದ್ದು ಒಂದು ಮಹತ್ವದ ಸಂಗತಿ. ಕೇವಲ ಸಾಹಿತ್ಯಾಭಿಮಾನ, ಆಸಕ್ತಿ ಹಾಗೂ ಕುತೂಹಲಗಳಿಂದಷ್ಟೇ ಮುಂದುವರೆದ ಜಾನಪದ ಸಂಗ್ರಹ ಯಾತ್ರೆ; ಹಲವರ ಕಣ್ಣು ಅತ್ತ ಹೊರಳುವಂತೆ ಮಾಡಿದ್ದು ಒಂದು ಮಹತ್ವದ ಅಂಶ.

---

* ಮಂಡ್ಯದಲ್ಲಿ ನಡೆದ ೬೩ನೇ ಕನ್ನಡ ಸಾಹಿತ್ಯ ಸಮ್ಮೇಳನದ, ಜಾನಪದ ಗೋಷ್ಠಿಯ ಉದ್ಘಾಟನಾ ಭಾಷಣ.

'ಜಾನಪದ' ಎಂದರೆ 'ಜನಪದ ಸಾಹಿತ್ಯ' ಎಂದಷ್ಟೇ ತಿಳಿದಿದ್ದ ಕಾಲ ಅದು. ಹಾಗಾಗಿ ಅದರ ಸಾಹಿತ್ಯದ ಸೊಬಗಿಗೆ ಮಾರು ಹೋದವರು ಕೆಲವರಾದರೆ ಮತ್ತೆ ಕೆಲವರು ಅದರಲ್ಲಿಡಗಿದ್ದ ಸಂಸ್ಕೃತಿಯ ಸಂಪತ್ತಿಗೆ ಮನಸೋತು ಅವುಗಳನ್ನು ಸಂಗ್ರಹಿಸಲು ತೊಡಗಿದ್ದೇ ಹೆಚ್ಚು. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಹೊರಬಂದ ಸಂಕಲನಗಳನ್ನು ಇಲ್ಲಿ ಸ್ಮರಿಸಬಹುದು. ಇವುಗಳ ನಡುವೆಯೇ ಅಲ್ಲೊಂದು ಇಲ್ಲೊಂದು ಎಂಬಂತೆ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಕಾಣಿಸಿಕೊಂಡ -'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ''ಪಟ್ಟೋಲೆ ಪಳಮೆ'' ಯಂತಹ ಮಹತ್ವದ ಸಂಕಲಗಳು ಜಾನಪದದ ವಿಶಾಲವಾದ ಅಂಶವನ್ನು ಒಳಗೊಂಡು ಪ್ರಕಟವಾದವುಗಳು.

ಕನ್ನಡ ಜಾನಪದ ಒಂದು ಶಾಸ್ತ್ರೀಯ ಚೌಕಟ್ಟಿನಲ್ಲಿ, ಅಧ್ಯಯನ ವಿಷಯವಾಗಿ ರೂಪುಗೊಂಡದ್ದೇ 1966ರ ನಂತರ. ಇದರಲ್ಲಿ ಮೈಸೂರು ವಿ. ವಿ. ನಿಲಯದ ಕೊಡುಗೆ ಮಹತ್ತರವಾದುದು. ಮೈಸೂರು ವಿ. ವಿ. ನಿಲಯದ ಕನ್ನಡ ಅಧ್ಯಯನ ಸಂಸ್ಥೆ ರೂಪಿಸಿದ ಹಲವು ಬಾಪುಗಾಲಿನ ಪ್ರಯತ್ನದಿಂದಾಗಿ ಜಾನಪದ ಚಟುವಟಿಕೆಗಳು ಚುರುಕಿನಿಂದ, ಶಾಸ್ತ್ರೀಯ ಚೌಕಟ್ಟಿನಲ್ಲಿ ಕಾಣಿಸಿಕೊಳ್ಳತೊಡಗಿದುವು. ಹಾಗಾಗಿ:

(1) ಇಂಗ್ಲಿಷ್‌ನ Folk lore ಗೆ ಸಂವಾದಿಯಾದ ''ಜಾನಪದ'' ಎಂಬ ಪದ ಬಳಕೆಯ ಸಾಧ್ಯತೆಯ ಪ್ರಸ್ತಾಪ.

(2) ಜಾನಪದದ ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವವನ್ನು ಕುರಿತ ಚಿಂತನೆಗಳು ರೂಪುಗೊಂಡದ್ದು.

(3) ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದದ ಅಧ್ಯಯನದ ಮಹತ್ವವನ್ನು ಸ್ಪಷ್ಟಪಡಿಸಿದ್ದು.

(4) ಜಾನಪದ ಒಂದು ಬೊಗಳೆಯಲ್ಲ, ವಾಸ್ತವಿಕ ಆಧಾರದ ಮೇಲೆ ಬೆಳೆದು ನಿಂತ ಗಂಭೀರ ವಿಷಯ ಎಂಬುದನ್ನು ಮನದಟ್ಟಾಗಿಸಿದ್ದು,

(5) ಈ ಅವಧಿಯಲ್ಲಿಯೇ ಕನ್ನಡ ಎಂ. ಎ., ತರಗತಿಯಲ್ಲಿ ಅದನ್ನು ಅಧ್ಯಯನ ವಿಷಯವಾಗಿ ಸೇರಿಸಿದ್ದು,

(6) ಜಾನಪದ ಡಿಪ್ಲೊಮಾ ಆರಂಭಗೊಂಡದ್ದು,

(7) ಜಾನಪದ ಎಂ. ಎ., ಕೂಡ ಆರಂಭವಾದದ್ದು,

(8) ಪ್ರಪ್ರಥಮವಾಗಿ ಜಾನಪದ ಪ್ರಾಧ್ಯಾಪಕ ಹುದ್ದೆ ಸ್ಥಾಪನೆ,

(9) ಹಾಗೆಯೇ ಮಹತ್ವದ ''ಜಾನಪದ ವಸ್ತು ಸಂಗ್ರಹಾಲಯ'' ರೂಪುಗೊಂಡದ್ದು,

(10) ಸ್ನಾತಕ ಪದವಿ ತರಗತಿಗಳಲ್ಲಿಯೂ ಜಾನಪದ ಅಧ್ಯಯನ ವಿಷಯವಾಗಿ ಸೇರ್ಪಡೆಯಾದದ್ದು,

(11) ಜಾನಪದ ಅಧ್ಯಾಪಕರ ಹುದ್ದೆಗಳು ಹುಟ್ಟಿಕೊಂಡದ್ದು,

(12) ಸಾಕಷ್ಟು ಸಂಖ್ಯೆಯಲ್ಲಿ ಪಿಎಚ್.ಡಿ. ಮಹಾಪ್ರಬಂಧಗಳು ಹೊರಬಂದದ್ದು,

(13) 'ಜಾನಪದ ಅಕಾಡೆಮಿ'ಯ ಸ್ಥಾಪನೆ,

(!4) ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿಯೂ ಜಾನಪದವನ್ನು ಅಧ್ಯಯನ ವಿಷಯವಾಗಿ ಪಠ್ಯಕ್ರಮದಲ್ಲಿ ಸೇರಿಸಿದ್ದು,

(15) ಸಾವಿರಾರು ಮಂದಿ ಸಂಗ್ರಹಕಾರರು, ಸಂಶೋಧಕರು, ವಿದ್ವಾಂಸರು-ತಮ್ಮನ್ನು ಅದರಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವುದು.

ಇವಿಷ್ಟು, ೧೯೬೬ ರಿಂದ ಇಲ್ಲಿಯವರೆಗೆ ಜಾನಪದ ಕ್ಷೇತ್ರದಲ್ಲಿ ಆಗಿರುವ 'ಮಹತ್ವದ ಸಾಧನೆಗಳು'. ಈ ಅವಧಿಯಲ್ಲಿ ಜಾನಪದದ ಪೂರ್ಣ ಸ್ವರೂಪವನ್ನು ಅರಿತ ತಜ್ಞರು ಹೊರಬಂದಿದ್ದಾರೆ.

ಅವರು ಜಾನಪದವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದವರು. ಸಂಶೋಧನೆ, ಕ್ಷೇತ್ರ ಕಾರ್ಯ, ವರ್ಗೀಕರಣ, ಸಂಪಾದನೆ, ವಿಶ್ಲೇಷಣೆ ಹಾಗೂ ಅಧ್ಯಯನ ಇವುಗಳ ಬಗ್ಗೆ ಚೆನ್ನಾಗಿ ಅರಿತು ನುರಿತವರು. ಜಾನಪದದ ವಿರಾಡ್ ರೂಪವನ್ನು ಮನಗಂಡು, ಅದರ ಶಾಖೋಪಶಾಖೆಗಳನ್ನು ಹುಡುಕಿ ತಡಕಿ ಹೊರತೆಗೆಯುವ ಹುಮ್ಮಸ್ಸನ್ನು ತಾಳಿದವರು.

ಇದರಿಂದಾಗಿ- ಕತೆ, ಗೀತೆ, ಲಾವಣಿ, ಗಾದೆ, ಒಗಟು ಇವುಗಳನ್ನು ಕುರಿತಂತೆ ಸಾಕಷ್ಟು ಸಂಕಲನಗಳು ಹೊರಬಂದಿವೆ. ಅವುಗಳನ್ನು ಕುರಿತಾದ ಅಧ್ಯಯನವೂ ವೈಜ್ಞಾನಿಕ ಕ್ರಮದಲ್ಲಿ ಜರುಗಿದೆ. ಹಲವಾರು ಪಿಎಚ್.ಡಿ., ಪ್ರಬಂಧಗಳೂ ಈ ಸಂಬಂಧವಾಗಿ ಹೊರ ಬಂದಿವೆ. ಈ ಗುಂಪಿನಲ್ಲಿಯೂ ಗೀತೆಗಳನ್ನು ಕುರಿತು ಬಂದಿರುವಷ್ಟು ಸಂಕಲನಗಳು ಮಿಕ್ಕ ವಿಷಯಗಳನ್ನು ಕುರಿತಂತೆ ಬಂದಿಲ್ಲ ಎಂದೇ ಹೇಳಬಹುದು.

ಗದ್ಯ ಕಥನಗಳಲ್ಲಿಯೂ- ಪುರಾಣ, ಐತಿಹ್ಯಗಳನ್ನು ಕುರಿತ ಸಂಗ್ರಹ ಕಾರ್ಯ ಮತ್ತು ಅಧ್ಯಯನ ಇನ್ನೂ ಸರಿಯಾಗಿ ಆರಂಭಗೊಂಡೇ ಇಲ್ಲ.

ಜಾನಪದ ಕಲೆಗಳದ್ದೇ ಒಂದು ದೊಡ್ಡ ಪ್ರಪಂಚ. ಬಯಲಾಟ, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟಗಳಂತಹ ಕೆಲವೊಂದು ಪ್ರಮುಖ ಕಲೆಗಳನ್ನು ಬಿಟ್ಟರೆ, ಇನ್ನೂ ಅಪಾರವಾಗಿ ಉಳಿದಿರುವ ಕಲೆಗಳ ಸಂಗ್ರಹಕಾರ್ಯವಾಗಲಿ ಅವುಗಳ ಅಧ್ಯಯನವಾಗಲಿ ಇನ್ನೂ ಆಗಬೇಕಾಗಿದೆ. ಕುಶಲ ಕೈಗಾರಿಕೆ, ವಾಸ್ತುಶಿಲ್ಪಗಳಂತಹ ಕಲೆಗಳನ್ನು ಕಡೆಗಣಿಸಿದಂತೆಯೇ ಭಾಸವಾಗುತ್ತದೆ. ಅಲ್ಲಿ ಸಿದ್ಧವಾಗುವ ಕಲಾವಸ್ತುಗಳು, ಅದರಲ್ಲಿ ಬಳಸುವ ವಸ್ತು, ತಯಾರಿಕೆಯ ವಿಧಾನ, ತಯಾರಿಸುವವರ ಹಿನ್ನೆಲೆ, ಅಲ್ಲಿ ಕಂಡು ಬರುವ ಸಂಚಿಕೆಗಳು, ಸಂಪ್ರದಾಯಗಳು, ಅವುಗಳ ಬಳಕೆಯ ಸಂದರ್ಭ ಮುಂತಾದ ವಿಷಯಗಳನ್ನು ಕುರಿತ ಅಧ್ಯಯನ ಇನ್ನೂ ಹಾಗೆಯೇ ಇದೆ.

ಜನಪದ ನೃತ್ಯಗಳು, ಆಟಗಳು, ಸಂಗೀತ, ವಾದ್ಯವಿಶೇಷ ಇವುಗಳದ್ದೇ ಒಂದು ದೊಡ್ಡ ಪ್ರಪಂಚ. ವಿವಿಧ ಬಗೆಯ ಜನಪದ ನೃತ್ಯಗಳ ಸರ್ವತೋಮುಖವಾದ ಅಧ್ಯಯನ ನಮ್ಮ ಸಂಸ್ಕೃತಿಯ ಅರಿವಿನ ದೃಷ್ಟಿಯಿಂದ ಮಹತ್ವವಾದದ್ದು. ಆದರೆ ಇದು ಇನ್ನೂ ಸಮರ್ಪಕವಾಗಿ ನಡೆದಂತಿಲ್ಲ.'ಆಟ'ಗಳದ್ದು ಮತ್ತೊಂದು ದೊಡ್ಡ ಪ್ರಪಂಚ. ಆದರೆ ಜಾನಪದ ಅಧ್ಯಯನದಲ್ಲಿ ಇದು ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದಂತೆ ತೋರುತ್ತದೆ.

ಒಂದೊಂದು ಆಟದ ಹಿನ್ನೆಲೆ, ಆಡುವ ಸಂದರ್ಭ, ಆಟದ ಕ್ರಮ, ಅಲ್ಲಿ ಅಡಕವಾಗಿರುವ ಆಶಯಗಳು, ನಂಬಿಕೆಗಳು ಮುಂತಾದುವನ್ನು ಸಂಗ್ರಹಿಸಿ ವಿಶ್ಲೇಷಿಸಬೇಕಾದ ಅಗತ್ಯವಿದೆ.

ಸಂಪ್ರದಾಯ-ಹಬ್ಬ-ಹರಿದಿನ-ಜಾತ್ರೆಗಳು-ಉತ್ಸವ ಮುಂತಾದವುಗಳು ಸಂಶೋಧಕರ ಕಣ್ಣಿಗೆ ಹೆಚ್ಚಾಗಿ ಬಿದ್ದಂತೆ ತೋರುವುದಿಲ್ಲ. ಇವುಗಳಲ್ಲಿ ಒಂದೆರಡು ವಿಷಯುಗಳನ್ನು ಕುರಿತಂತೆ ಅಲ್ಲಲ್ಲಿ ಸ್ವಲ್ಪಮಟ್ಟಿನ ಅಧ್ಯಯನ ನಡೆದಿದ್ದರೂ ಪೂರ್ಣವಾಗಿ ಅಲ್ಲ. ಅದರಲ್ಲಿಯೂ ಹಬ್ಬ-ಜಾತ್ರೆ-ಉತ್ಸವಗಳು ಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎನ್ನಬಹುದು.

ಮತ್ತೊಂದು ಬಹು ಮುಖ್ಯವಾದ ಆದರೆ, ಅಷ್ಟೇ ಕಡೆಗಣಿಸಲ್ಪಟ್ಟಿರುವ ವಿಷಯವೆಂದರೆ-ಆಹಾರ, ಪಾನೀಯಗಳ ವಿಭಾಗ. ಜನಪದ ಅಡುಗೆಗಳ ಬಗ್ಗೆ ಅಲ್ಲೊಂದು ಇಲ್ಲೊಂದು ಪ್ರಕಟಗೊಂಡಿರುವ ಲೇಖನಗಳನ್ನು ಬಿಟ್ಟರೆ, ಪೂರ್ಣರೂಪದ ಗ್ರಂಥ ಹೊರಬಂದಂತೆ ತೋರುವುದಿಲ್ಲ. ಹಾಗೆಯೇ ಪಾನೀಯಗಳನ್ನು ಕುರಿತ ಸಂಗ್ರಹಕಾರ್ಯ ಮತ್ತು ಅಧ್ಯಯನವೂ ಆಗಬೇಕಾಗಿದೆ. ಆಹಾರ, ಪಾನೀಯಗಳ ವೈವಿಧ್ಯ, ವಿವಿಧ ಸಂದರ್ಭಗಳಲ್ಲಿ ಮಾಡುವ ಅಡುಗೆಗಳ ವೈಶಿಷ್ಟ್ಯ, ಅವುಗಳ ಮಹತ್ವ ಹಾಗೆಯೇ ಅವುಗಳಿಗೆ ಸಂಬಂಧಿಸಿದ ನಂಬಿಕೆಗಳ ಅಧ್ಯಯನವೂ ವ್ಯಾಪಕವಾಗಿ ಆಗಬೇಕಾಗಿದೆ.

ಜನಪದ ವೈದ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕೆಲವು ಗ್ರಂಥಗಳು ಪ್ರಕಟವಾಗಿವೆ. ಆದರೆ ಈ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಬಹಳಷ್ಟಿದೆ. ಇದರಲ್ಲಿ ಸಂಗ್ರಹಕಾರ್ಯ ಅಷ್ಟೇ ಸಾಲದು, ಅವುಗಳನ್ನು ಕುರಿತಾದ ತೀವ್ರ ಅಧ್ಯಾಯನದ ಅಗತ್ಯವಿದೆ. ಅವುಗಳ ಬಳಕೆಯ ಸಾಧ್ಯಾಸಾಧ್ಯತೆಗಳನ್ನು ಕುರಿತ ಸಂಶೋಧನೆ ನಡೆಯಬೇಕಾಗಿದೆ.

ಜನಪದ ಭಾಷೆ ಮತ್ತು ಮಾತುಗಾರಿಕೆಯ ವೈಶಿಷ್ಟ್ಯಗಳನ್ನು ಕುರಿತ ಅಧ್ಯಯನ ಕೂಡ ಹಾಗೆಯೇ ಉಳಿದಿದೆ. ಜನಪದ ಭಾಷೆಯ ಸೊಗಡು, ಮಾತುಗಾರಿಕೆಯಲ್ಲಿಯ ಬೆಡಗು ಮುಂತಾದುವನ್ನು ಸಂಗ್ರಹಿಸಿ ವಿಶ್ಲೇಷಿಸುವ ಅಗತ್ಯವಿದೆ. ಜನಪದ ಬೈಗುಳಗಳದ್ದೇ ಒಂದು ಪ್ರಪಂಚ. ಅಲ್ಲಿಯ ಪದಸಂಪತ್ತು ವಿಶೇಷವಾದ ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡುವಂತಹುದು. ಜನಪದ ನುಡಿಗಟ್ಟುಗಳ ಸೊಬಗನ್ನು ಕಡೆಗಣಿಸುವಂತಿಲ್ಲ.

ಹೀಗೆಯೇ ಇವುಗಳ ಪಟ್ಟಿ ದೊಡ್ಡದು. ನಮ್ಮ ಜಾನಪದ ಅಧ್ಯಯನದ ಹಿನ್ನೋಟವನ್ನು ನೋಡುವಾಗ ಅದಕ್ಕಿರುವ ಇತಿಹಾಸ ಕೇವಲ ೨೭ ವರ್ಷಗಳು. ಇಷ್ಟು ಅವಧಿಯಲ್ಲಿ ಕೆಲವೊಂದು ಮಹತ್ವದ ಸಾಧನೆಗಳು ಆಗಿವೆ ಎಂಬುದು ನಿಜವಾದರೂ, ಅಷ್ಟಕ್ಕೇ ಸಮಾಧಾನಪಟ್ಟುಕೊಳ್ಳುವಂತಿಲ್ಲ. ಜಾನಪದರ ವಿಶಾಲ ಜಗತ್ತಿನಲ್ಲಿ ಮಾಡಬೇಕಾದ್ದೇ ಬಹಳಷ್ಟು ಉಳಿದಿದೆ ಎಂಬುದನ್ನು ಮರೆಯುವಂತಿಲ್ಲ. ಮೇಲಿನವುಗಳಂತೆಯೇ-ಮಾಂತ್ರಿಕ ವಿದ್ಯೆ, ಸಸ್ಯ ಜಾನಪದ, ಆಕಾಶ ಜಾನಪದ, ಪ್ರಾಣಿಜಾನಪದ, ವ್ಯವಸಾಯ ಜಾನಪದ, ಖನಿಜ ಜಾನಪದ, ಮಕ್ಕಳ ಜಾನಪದ, ವಸತಿ ಜಾನಪದ, ವಸತಿ ಜಾನಪದ ಇನ್ನೂ ಒಳಹೊಕ್ಕು ನೋಡಬೇಕಾಗಿರುವ ಹಲವಾರು ಕ್ಷೇತ್ರಗಳಿವೆ, ಜನಪದ ಉಡುಗೆ-ತೊಡುಗೆ ಅಲಂಕಾರ ಸಾಮುಗ್ರಿ, ಅದರ ವಿಧಾನ, ಬೇಟೆ, ಕುಸ್ತಿ-ಮುಂತಾದವುಗಳನ್ನು ಮರೆಯುವಂತಿಲ್ಲ.

ಜಾನಪದ 'ಮುನ್ನೋಟ'ವನ್ನು ಪರಿಶೀಲಿಸುವಾಗ ಪ್ರಮುಖವಾಗಿ, ಸಿ. ಎಫ್. ಪಾಟಕ ಅವರು ಮೂರು ದಶಕಗಳ ಹಿಂದೆಯೇ ಹೇಳಿದ: "Folk lore is a lively fossil which refuses to die"......... ಎಂಬ ಮಾತನ್ನು ಗಮನಿಸಬೇಕಾಗುತ್ತದೆ. ಜಾನಪದ ಒಂದು ಜೀವಂತ ಪಳೆಯುಳಿಕೆ. ಅದು ಸುಲಭವಾಗಿ ಸಾವನ್ನಪ್ಪುವುದಿಲ್ಲ. ಒಂದು ಕಡೆ ಅದು ಕಣ್ಮರೆಯಾದಂತೆ ತೋರಿದಾಗ ಮತ್ತೊಂದು ಕಡೆ ಅದು ಯಾವುದೊ ರೂಪದಲ್ಲಿ ತಲೆ ಎತ್ತಿ ನಿಲ್ಲುತ್ತದೆ. ಜಾನಪದದ ಕೆಲವೊಂದು ವಿಷಯಗಳಲ್ಲಿ ಇದು ಪೂರ್ಣ ಸತ್ಯ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಪ್ರಯತ್ನ ಇರಲಿ ಇಲ್ಲದಿರಲಿ ಜನಪದದ ಹಲವು ಸಂಗತಿಗಳು ಯಾವುದೊ ರೂಪದಲ್ಲಿ ತಲೆ ಎತ್ತಿ ಉಳಿದು ಬರುತ್ತವೆ. ನಮ್ಮ ಅನೇಕ ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು-ಇವುಗಳ ಉಳಿವಿಗೆ ಯಾವ ವಿದ್ವಾಂಸರ, ವಿಶ್ವವಿದ್ಯಾನಿಲಯದ ಅಥವಾ ಸರ್ಕಾರದ ರಕ್ಷಣೆಯಾಗಲಿ ಅಥವಾ ಬೆಂಬಲವಾಗಲಿ ಬೇಕಾಗಿಲ್ಲ. ಅವುಗಳು ತಾವಾಗಿಯೇ ಉಳಿದು ಬರುತ್ತವೆ. -ಬೆಳಿಗ್ಗೆ ಬಲಗಡೆ ಎದ್ದು ಕೈಯುಜ್ಜಿ ನೋಡಿಕೊಳ್ಳುವುದನ್ನಾಗಲಿ, ಬಾಗಿಲಿಗೆ ನೀರನ್ನು ಹಾಕಿ ರಂಗವಲ್ಲಿ ಬಿಡುವುದನ್ನಾಗಲಿ ಅಥವಾ ಶಾಶ್ವತವಾಗಿ ಬಣ್ಣದಲ್ಲಿಯೇ ಅದನ್ನು ಬಿಡಿಸಿರುವುದಾಗಲಿ, ಬಾಗಿಲಿಗೆ ಹರಿಶಿನ ಕುಂಕುಮ ಹಚ್ಚುವುದೋ ಅಥವಾ ಬಣ್ಣದಲ್ಲಿಯೇ ಅದನ್ನು ಶಾಶ್ವತವಾಗಿ ಹಚ್ಚುವುದಾಗಲಿ, ಪಲ್ಲಿ ಲೊಚಗುಟ್ಟಿದಾಗ ಕೃಷ್ಣಾ........ಕೃಷ್ಣಾ.........ಕೃಷ್ಣಾ ಎಂದು ಮೂರು ಸಾರಿ ಬೆರಳಿನಲ್ಲಿ ನೆಲಬಡಿಯುವುದಾಗಲಿ, ಬೆಕ್ಕು ಅಡ್ಡವಾದಾಗ, ಕಣ್ಣುಮಿಟುಕಿದಾಗ, ಕಾಗೆ ಕೂಗಿದಾಗ, ನಾಯಿಗಳು ರಾತ್ರಿವೇಳೆ ಅಳುವ ಧ್ವನಿಯಲ್ಲಿ ಕೂಗಿದಾಗ-ಹೀಗೆ ನಿತ್ಯ ಬದುಕಿನಲ್ಲಿ ಜಾನಪದದ ಹಲವು ಸಂಗತಿಗಳು ಜೀವಂತವಾಗಿ ಉಳಿದು ಬಂದಿರುವುದನ್ನು ಕಾಣಬಹುದು. ಇದರಂತೆಯೇ ಹಬ್ಬ-ಹರಿದಿನ, ಮದುವೆ, ಮನೆಕಟ್ಟುವುದು ಇತ್ಯಾದಿ ಇತ್ಯಾದಿ ಸಂದರ್ಭದಲ್ಲಿನ ನಂಬಿಕೆಗಳು, ಸಂಪ್ರದಾಯಗಳು ಜಾನಪದದ ಜೀವನಂತಿಕೆಯನ್ನು ಶ್ರುತಪಡಿಸುತ್ತವೆ. ಇವುಗಳಲ್ಲಿ ಎಲ್ಲವೂ ಹಿಂದಿನ ರೂಪದಲ್ಲಿಯೇ ಉಳಿದು ಬಂದಿರದಿದ್ದರೂ, ಹಲವು ಬದಲಾವಣೆಗಳನ್ನು ಪಡೆದು ಮರುಹುಟ್ಟನ್ನು ಪಡೆದಿವೆ.

ಜಾನಪದ, ಜನಜೀವನದಲ್ಲಿ ಬೇರು ಬಿಟ್ಟಿದ್ದು, ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಹರಡಿದ್ದು, ಸಾಮಾಜಿಕ ಪರಿಸರದಲ್ಲಿ ಅದರ ಜೀವನಾಡಿಯಾಗಿ ಮುಂದುವರೆದು ಬಂದದ್ದು, ಅವುಗಳ ರೂಪ ತೆಳುವಾಗಬಹುದು ಅಥವಾ ರೂಪಾಂತರ ಹೊಂದಬಹುದೇ ಹೊರತು ಸಂಪೂರ್ಣವಾಗಿ ನಾಶ ಹೊಂದಲಾರವು. ಈ ಹಿನ್ನೆಲೆಯಲ್ಲಿ ಎ. ಎಂ. ಎಸ್ಪಿನೋಸ ಅವರು ಹೇಳುವ ನಾಗರಿಕತೆಯ ಬೆಳವಣಿಗೆಯನ್ನು ವಿವರಿಸುವ ಸಮಾಜ ವಿಜ್ಞಾನಗಳಲ್ಲಿ 'ಜಾನಪದವೂ' ಒಂದು. ಗ್ರಾಮಾಂತರ ಮತ್ತು ನಾಗರಿಕ ವರ್ಗದ ಅಶಿಕ್ಷಿತ ಸಮಾಜದಲ್ಲಿ ಜಾನಪದ ಇನ್ನು ದಟ್ಟವಾಗಿ ಉಳಿದು ಬಂದಿದೆ ಎಂಬ ಮಾತನ್ನು ಗಮನಿಸಬೇಕಾಗುತ್ತದೆ.

ಜಾನಪದ ಮುಂದೇನು? ಎಂಬ ಪ್ರಶ್ನೆಗೆ ಉತ್ತರ ಮೇಲಿನ ಹಲವು ವಿಚಾರಗಳಿಂದ ಸ್ಪಷ್ಟವಾಗುತ್ತದೆ. ಯಂತ್ರಯುಗದ ಕಾರಣದಿಂದಾಗಿ ಕುಟ್ಟುವ ಹಾಡು, ಬೀಸುವ ಹಾಡುಗಳು ಕಣ್ಮರೆಯಾಗಬಹುದು. ಗಾಡಿಯ ಪದಗಳು, ಕಳೆಕೀಳುವ ಅಥವಾ ನಾಟಿ ಹಾಕುವ ಹಾಡುಗಳು ಕ್ವಚಿತ್ತಾಗಿ ಕೇಳಿಬರುತ್ತಿರಬಹುದು. ಆದರೆ ಅದರಂತೆಯೇ ಎಲ್ಲವೂ ಮಾಯವಾಗುತ್ತವೆ ಎಂದು ಭಾವಿಸಬೇಕಾಗಿಲ್ಲ.

ಜಾನಪದ ಹುಟ್ಟಿದ್ದು, ಬೆಳೆದು ಬಂದದ್ದು ಜನಪದರ ಬದುಕಿನೊಂದಿಗೆ, ಅವರ ಬದುಕಿನ ಹಾಸು ಬೀಸಿಗನುಗುಣವಾಗಿ ಅದು ಗರಿಗೆದರಿಕೊಂಡು ಜನಪದರ ಬದುಕನ್ನು ರೂಪಿಸಿದ್ದಷ್ಟೇ ಅಲ್ಲದೆ ಅದನ್ನು ನಿರ್ದೇಶಿಸುತ್ತ ಬಂದದ್ದೂ ಹೌದು. ಅದು ಹಾಗೆಯೇ ಅವರ ಬದುಕಿನ ಹಾಗೂ ಸಮಾಜದ ಸ್ಥಿತಿಗತಿಗನುಗುಣವಾಗಿ ಹರಿದು ಬರುತ್ತದೆ.

ಜಾನಪದ-ಸಂಸ್ಕೃತಿಯ ಒಂದು ಭಾಗ, ಸಂಸ್ಕೃತಿ, ಜೀವಂತವಾಗಿರುವವರೆಗೆ ಅದರ ಮೂಲಭೂತ ಅಂಶಗಳನ್ನು ಪ್ರತಿ ಬಿಂಬಿಸುವ ಜಾನಪದ ಅಂಶಗಳೂ ಜೀವಂತವಾಗಿ ಉಳಿದೇ ಇರುತ್ತವೆ.

ಜಾನಪದ ಮುಂದೇನು?ಎನ್ನುವುದರ ಬಗೆಗೂ ಹಲವಾರು ಪ್ರಶ್ನೆಗಳು ಸಹಜವಾಗಿಯೇ ಎದುರಾಗುತ್ತವೆ. ಇದನ್ನು ಉಳಿಸಿಕೊಳ್ಳಲು ಸಾಧ್ಯವೆ? ಉಳಿಸಿಕೊಂಡರೆ ಹೇಗೆ ಉಳಿಸಿಕೊಳ್ಳಬೇಕು? ಉಳಿಸಿಕೊಳ್ಳಬೇಕಾದ ಅಗತ್ಯವಾದರೂ ಇದೆಯೇ? ಜಾನಪದದ ಸಂರಕ್ಷಣೆ ಹೇಗಾಗಬೇಕು? ಮುಂತಾದ ಪ್ರಶ್ನೆಗಳೂ ಮುನ್ನೋಟದಲ್ಲಿ ಎದುರಾಗುತ್ತವೆ.

ಬದುಕಾಗಲಿ, ಸಂಸ್ಕೃತಿಯಾಗಲಿ ಅಥವಾ ಸಮಾಜವಾಗಲಿ ನಿಂತ ನೀರಲ್ಲ. ಹರಿಯುವ ನದಿಯಿದ್ದಂತೆ, ಅದರಲ್ಲಿ ಪರಿವರ್ತನೆ ಸಹಜ ಮತ್ತು ಅನಿವಾರ್ಯ. ಈಗ ಯಾವುದನ್ನು ನಾವು ಜಾನಪದ ಎಂದು ಗುರುತಿಸುತ್ತಿದ್ದೇವೆಯೋ ಅದು, ಮೊದಲಿನಿಂದಲೂ ಅದೇ ರೂಪದಲ್ಲಿ ಇತ್ತು ಎಂದು ಭಾವಿಸುವುದು ತಪ್ಪಾಗುತ್ತದೆ. ಅದೂ ಕೂಡ ಹಲವು ಬದಲಾವಣೆಗಳಿಗೆ ಒಳಗಾಗಿಯೋ ಇಂದು ಈವೊಂದು ರೂಪದಲ್ಲಿ ನಮ್ಮ ಕಣ್ಣೆದುರು ಉಳಿದಿದೆ. ಮುಂದೆ ಕೂಡ ಅದು ಅಂತಹದೇ ಸ್ಥಿತ್ಯಂತರಗಳಿಗೆ ತನ್ನನ್ನು ಒಡ್ಡಿಕೊಳ್ಳುವುದರ ಬಗೆಗೆ ಆಶ್ಚರ್ಯಪಡಬೇಕಾಗಿಲ್ಲ. ಮದುವೆಯ ಸಂಪ್ರದಾಯಗಳಾಗಲಿ, ಹಬ್ಬದ ಆಚರಣೆಗಳಾಗಲಿ, ಬಂಧುತ್ವದ ಸ್ವರೂಪವಾಗಲಿ, ಅಥವಾ ಕಲೆಗಳ ಅಭಿವ್ಯಕ್ತಿ ಕ್ರಮವಾಗಲಿ ಯಾವುದೂ ತನ್ನ ಪ್ರಾಚೀನ ರೂಪದಲ್ಲಿಯೇ ಉಳಿದು ಬಂದಿಲ್ಲ. ಆದರೆ ಆ ಎಲ್ಲ ಆಶಯಗಳೂ ಅದರ ಹಿಂದೆ ಅಡಕವಾಗಿವೆ. ಮೂಲ ಸಂಸ್ಕೃತಿಯ ಸತ್ಯವನ್ನು ಒಳಗೊಂಡಿವೆ. ಬದಲಾಗುತ್ತ ಬಂದ ಸಮಾಜಿಕ ವ್ಯವಸ್ಥೆಯಲ್ಲಿ, ಅಭಿರುಚಿಗಳ ಹಿನ್ನೆಲೆಯಲ್ಲಿ ಅವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಪರಿವರ್ತನೆಗೊಂಡಿವೆ. ಸಮಕಾಲೀನ ಸಂಗತತೆಯನ್ನು ಹೊಂದಿರದ ಯಾವುದೊಂದೂ ಉಳಿಯಲಾರದು ಎಂಬುದು ಸತ್ಯ. ಕಾಲಗರ್ಭದಲ್ಲಿ ಇಂತಹ ಎಷ್ಟೋ ವಿಷಯಗಳು ಅಡಗಿಹೋಗಿವೆ ಎಂಬುದಾಗಿ ಸತ್ಯವೇ. ಹಾಗಾಗಿ ಅದನ್ನು ಜಾನಪದ ವಿಷಯವೊಂದಕ್ಕೇ ಬೆರಳು ಮಾಡಿ ತೋರಿಸಬೇಕಾದ ಅಗತ್ಯವಿಲ್ಲ.

ಜಾನಪದ ಮುನ್ನೋಟದಲ್ಲಿ -"ಜಾನಪದ ಮುಂದೇನು?" ಎಂಬ ಪ್ರಶ್ನೆ ಮುಖ್ಯವಾಗಿ ಕಾಡುವುದು- ನಾನು ಈ ಮೊದಲೇ ಸೂಚಿಸಿದ -ಜನಪದ ಸಂಪ್ರದಾಯಗಳು, ಆಚರಣೆಗಳು ಹಾಗೂ ನಂಬಿಕೆಗಳಿಗೆ ಸಂಬಂಧಿಸಿದಂತೆ ಅಲ್ಲ. ಅವು ವಿಶೇಷವಾಗಿ ಕಾಡುತ್ತಿರುವುದು ಕೆಲವೊಂದು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾತ್ರ.

(1) ಜನಪದ ಕಲೆಗಳು ಮುಂದೇನು? ಕಲಾವಿದರ ಭವಿಷ್ಯವೇನು?

(2) ಜನಪದ ಮನರಂಜಕರ ಪಾಡೇನು?

(3) ವೃತ್ತಿಗಾಯಕರು ಇನ್ನೆಷ್ಟು ಕಾಲ ಮುಂದುವರಿದಾರು?

(4) ಜನಪದ ನೃತ್ಯಗಳ ಭವಿಷ್ಯವೇನು?

(5) ಜನಪದ ಗೀತೆಗಳು ಅದೇ ಧಾಟಿಯಲ್ಲಿ ಉಳಿಯಬಲ್ಲವೆ?

(6) ಜನಪದ ಕುಶಲಕರ್ಮಿಗಳು ಅದರಲ್ಲಿಯೇ ಮುನ್ನಡೆಯಲು ಸಾಧ್ಯವೇ?

(7) ಜನಪದ ವಸ್ತು ವಿಶೇಷಗಳು ಇನ್ನೆಷ್ಟು ಕಾಲ ಉಳಿದಾವು?

(8) ಜನಪದ ವೇಷಭೂಷಣಗಳು, ಉಡುಗೆ ತೊಡುಗೆಗಳು ಕಣ್ಮರೆಯಾಗುತ್ತಿಲ್ಲವೆ?

(9) ಅಡುಗೆ ಸಂಪ್ರದಾಯಗಳು ಮರೆತು ಹೋಗುತ್ತಿಲ್ಲವೆ?

(10) ಜನಪದ ವೈದ್ಯದ ಗತಿ ಏನು?

ಇಂತಹ ನೂರೆಂಟು ಪ್ರಶ್ನೆಗಳು ಎದುರಾಗುವುದು, ಒಂದು ರೀತಿ ಅವುಗಳು ನಮ್ಮನ್ನು ಆತಂಕಕ್ಕೆ ಗುರಿ ಮಾಡುವುದೂ ಸಹಜವೇ.

ಒಂದು ಕಾಲಕ್ಕೆ ಜಾನಪದದ ಅನೇಕ ಸಂಗತಿಗಳು ಬದುಕಿನ ಒಂದೊಂದು ಅಂಗಕ್ಕೆ ಸಂಬಂಧಿಸಿದಂತೆ ಹುಟ್ಟಿಕೊಂಡಿದ್ದು, ಅದರ ಒಂದು ಭಾಗವಾಗಿಯೇ ಮುಂದುವರೆದುಕೊಂಡು ಬಂದವುಗಳು. ಆಗ ಆ ಸಂಪ್ರದಾಯಕ್ಕೆ ಅಂಟಿದ್ದ ನಂಟೇ ಅದರಲ್ಲಿ ಹೆಚ್ಚಾಗಿತ್ತು. ಆದರೆ ಈಗ ಆ ಸ್ಥಾನದ ಅರ್ಧಭಾಗವನ್ನು ಮನರಂಜನೆಯ ಅಂಶ ಆವರಿಸಿದೆ. ಕೆಲವೊಂದು ಕಲೆಗಳು ಇಂದು ಎಡಬಿಡಂಗಿಯ ಸ್ಥಿತಿಯಲ್ಲಿ ಉಳಿದಿವೆ. ಹಿಂದೆ ಧರ್ಮ ಅಥವಾ ಅದರ ಕಾರಣದಿಂದ ಹುಟ್ಟಿಕೊಂಡ ಸಂಪ್ರದಾಯಗಳು, ನಂಬಿಕೆಗಳು ಅವುಗಳನ್ನು ಸಂರಕ್ಷಿಸಿಕೊಂಡು ಬಂದುವು, ಪೋಷಿಸುತ್ತ ಬಂದುವು. ಆದರೆ ಇಂದು ಆ ಅಂಶ ತೆಳುವಾಗಿದೆ. ಅಷ್ಟರಿಂದಲೇ ಕಲೆ-ಕಲಾವಿದ ಉಳಿಯಲಾರ. ಆ ಕಲೆಯನ್ನು ಮುಂದುವರಿಸಿಕೊಂಡು ಹೋಗಲಾರ. ಆ ಕೊರತೆಯನ್ನು ತುಂಬಿಕೊಡುವ ವ್ಯವಸ್ಥೆ ಆಗಬೇಕಾಗಿದೆ. ಅದು ಈ ಸಮಾಜ ಹಾಗೂ ಸರ್ಕಾರದಿಂದ ಆಗಬೇಕಾದ ಕಾರ್ಯ ಕೇವಲ ಕಲೆಯಿಂದಲೇ ಕಲಾವಿದ ಬದುಕಲಾರ. ಅದು ಅವನ ಹೊಟ್ಟೆಗೂ ಬಟ್ಟೆಗೂ ಆಧಾರವೆನಿಸಿದಾಗ ಮಾತ್ರ ಅದು ಉಳಿಯಲು ಸಾಧ್ಯ. ಜನಪದ ರಂಗ ಕಲೆಗಳಿಗೆ ಮೊದಲು ಸಮಾಜದ ಹಲವು ನಂಬಿಕೆಗಳೂ, ಸಂಪ್ರದಾಯಗಳೂ ಪೋಷಕ ಶಕ್ತಿಗಳಾಗಿದ್ದುವು. 'ಗೊಂಬೆ ಆಟ ಆಡಿಸಿದರೆ ಮಳೆ ಬರುತ್ತದೆ', 'ದನಗಳಿಗೆ ರೋಗ ಬರುವುದಿಲ್ಲ','ಊರಿಗೆ ಒಳ್ಳೆಯದಾಗುತ್ತದೆ'- ಇತ್ಯಾದಿ ನಂಬಿಕೆಗಳು ಅವನ್ನು ಭದ್ರವಾಗಿ ಹಿಡಿದಿಟ್ಟಿದ್ದುವು. ಇವುಗಳ

ಜೊತೆಗೆ ಮನರಂಜನೆಯೂ ಅದರ ಒಂದು ಅಂಶವಾಗಿತ್ತು. ಆದರೆ ಇಂದು ಈ ನಂಬಿಕೆಗಳು ಸಡಿಲವಾಗಿವೆ, ಮನರಂಜನೆಗೆ ಹತ್ತು ಹಲವು ಇತರ ಸಾಧನಗಳಿವೆ ಇಂತಹ ಸ್ಥಿತಿಯಲ್ಲಿ ಅವುಗಳ ಪಾಡೇನು? ಅವುಗಳನ್ನು ಉಳಿಸಿಕೊಂಡು ಬಂದವರ ಪಾಡೇನು?

ಕಂಸಾಳೆಯವರಾಗಲಿ, ಚೌಡಿಕೆಯವರಾಗಲಿ, ನೀಲಗಾರರಾಗಲಿ, ಪೂಜಾ ಕುಣಿತದವರಾಗಲಿ ಅಥವಾ ಸೋಮನ ಕುಣಿತದವರಾಗಲಿ ಇಂದು ಕೇವಲ ಧಾರ್ಮಿಕ ಚೌಕಟ್ಟಿನಲ್ಲಿಯೇ ನಿಂತು ಉಳಿಯಲಾರದ ಸ್ಥಿತಿಯನ್ನು ತಲುಪಿದ್ದಾರೆ. ಬಯಲಾಟ ಸೂತ್ರದ ಗೊಂಬೆ ಆಟ, ತೊಗಲು ಗೊಂಬೆಯಾಟಗಳು ತಮ್ಮ ಸ್ವಸಾಮರ್ಥ್ಯದಿಂದ ಮಾತ್ರ ಉಳಿದು ನಿಲ್ಲಲು ಸಾಧ್ಯ ಎಂಬ ಸ್ಥಿತಿಯನ್ನು ಮುಟ್ಟಿವೆ. ಹಾವಾಡಿಗರು, ಕರಡಿ ಕುಣಿಸುವವರು, ಕೋತಿ ಕುಣಿಸುವವರು, ದೊಂಬರು, ಮೊಲಸಿಕಾರರು- ಇಂದು ಆ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲಾರದ ಸಂಕಟದಲ್ಲಿದ್ದಾರೆ. ತಮಟೆಯವರು, ಓಲಗದವರು, ಕಹಳೆಯವರನ್ನು ಕೇಳುವವರೆ ಇಲ್ಲವೆಂಬಂತಾಗಿದೆ. ಇವುಗಳನ್ನೇ ಅವಲಂಬಿಸಿ ಬಂದ - ವೇಷಭೂಷಣ ತಯಾರಿಸುವವರ, ವಾದ್ಯ ವಿಶೇಷ ಸಿದ್ಧಪಡಿಸುವವರ ಪಾಡೇನು? ಇವುಗಳಿಗೆಲ್ಲ ಉತ್ತರವನ್ನು ಕಂಡು ಕೊಳ್ಳಬೇಕಾಗಿದೆ.

ಜಾನಪದ ಸಂರಕ್ಷಣೆಯ ಜೊತೆಗೆ ನಮ್ಮ ಮುಂದಿರುವ ಮತ್ತೊಂದು ಪ್ರಶ್ನೆ- ಅವುಗಳನ್ನು ಮೂಲ ರೂಪದಲ್ಲಿ ಉಳಿಸಿಕೊಂಡು ಬರಲು ಸಾಧ್ಯವೆ? ಎಂಬುದು. ಉಳಿಸಿಕೊಂಡು ಬಂದರೂ, ಯಾವುದನ್ನು? ಭೌತಿಕ ಜಾನಪದವನ್ನೇ ಅಥವಾ ಅಭೌತಿಕ ಜಾನಪದವನ್ನೇ? ಅಭೌತಿಕ ಜಾನಪದಕ್ಕೆ ಹೆಚ್ಚು ಶ್ರಮಿಸಬೇಕಾಗಿಲ್ಲ. ಹುಟ್ಟಿನಿಂದ ಸಾವಿನವರೆಗಿನ ಹಲವು ನಂಬಿಕೆ- ಆಚರಣೆಗಳ ಹಿನ್ನೆಲೆಯಲ್ಲಿ ಅವು ಹೇಗೋ ಉಳಿದು ಬರುತ್ತವೆ. ಆದರೆ ಭೌತಿಕ ಜಾನಪದವನ್ನು ಉಳಿಸಿಕೊಂಡು ಬರುವುದು ಹೇಗೆ? ವ್ಯವಸಾಯ ಪದ್ಧತಿಯನ್ನಾಗಲಿ, ವ್ಯವಸಾಯೇತರ ಸಾಧನಗಳನ್ನಾಗಲಿ ಅಥವಾ ಮನೆಯ ಮಾದರಿಗಳನ್ನಾಗಲಿ ಬದಲಾಯಿಸಬಾರದೆಂದು ಹೇಳಲಾಗುವುದಿಲ್ಲ. ಇದರಿಂದ ಒಂದು ರೀತಿ ಅಭಿವೃದ್ಧಿಗೆ ಅಡ್ಡಿಯಾದಂತಾಗುತ್ತದೆ. ಹಾಗಾಗಿ ಅದಕ್ಕೆ ಕಡಿವಾಣ ಹಾಕುವಂತಿಲ್ಲ. ಬೇರೊಂದು ರೂಪದಲ್ಲಿ ಹಿಂದಿನ ಪದ್ಧತಿಗಳನ್ನು ಹಿಡಿದಿಡುವ ಪ್ರಯತ್ನ ನಡೆಯಬೇಕು. ಇದಕ್ಕಾಗಿ ಬಯಲು ವಸ್ತು ಸಂಗ್ರಹಾಲಯಗಳ ಸ್ಥಾಪನೆ ಅಗತ್ಯವಿದೆ. ಇದಕ್ಕೆ ತಗಲುವ ಹಣದ ವೆಚ್ಚ ಹೆಚ್ಚು.

ಇನ್ನು ಶಾಬ್ದಿಕ ಜಾನಪದದ ಗತಿ ಏನಾಗುತ್ತಿದೆ? ಹಾಡುವವರು ಹಾಡುತ್ತಲೇ ಇದ್ದಾರೆ. ಆದರೆ ಕೇಳುಗರ ಸಂಖ್ಯೆ, ಆಸಕ್ತಿ ಕಡಿಮೆಯಾಗುತ್ತಿದೆ ಎಂದು ಮಾತು ಕೇಳುಬರುತ್ತಿದೆ. ಅವರ ಹಳೆಯ ಧಾಟಿಯಿಂದಾಗಿ ಜನ ಅದರಲ್ಲಿ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ, ಅದರಲ್ಲಿ ಮಾರ್ಪಾಡಿನ ಅಗತ್ಯವಿದೆ ಎಂಬ ಸಲಹೆಯೂ ಕೇಳಿಬರುತ್ತಿದೆ. ಜಾನಪದದಲ್ಲಿ ಬಲವಂತವಾದ ಮಾರ್ಪಾಡು ಸಾಧ್ಯವೇ? ಎಂಬ ಪ್ರಶ್ನೆಯೂ ಎದುರಾಗುತ್ತಿದೆ.

ಜಾನಪದದಲ್ಲಿ, ಅದರ ಮೂಲ ರೂಪಕ್ಕೆ ಧಕ್ಕೆ ಬರದಂತೆ ಮಾಡುವ ಯಾವುದೇ ಪರಿವರ್ತನೆ ಒಪ್ಪಿತವಾದದ್ದೆದ್ದೇ. ಬಲವಂತವಾದ, ಅತಿಯಾದ ಬದಲಾವಣೆ ಅದನ್ನು

ಜಾನಪದವಾಗಿ ಉಳಿಸುವುದಿಲ್ಲ ಮತ್ತೇನನ್ನೋ ಆಗಿ ಮಾಡುತ್ತದೆ. ಈ ಎಚ್ಚರ ಅಗತ್ಯ. ಜಾನಪದದಲ್ಲಿ ಆ ಚೌಕಟ್ಟಿಗೆ ಹೊಂದಿಕೊಳ್ಳುವ ಯಾವುದೇ ಸಂಗತಿ, ಸಂಗತವಾದದ್ದೇ. ಕರಾವಳಿಯ ಯಕ್ಷಗಾನ ಸಾಹಿತ್ಯದಲ್ಲಿ ರಂಗದ ಮೇಲೆ ಸೇರ್ಪಡೆಯಾಗುವ ಎಷ್ಟೋ ಸಮಕಾಲೀನವಾದ ಸಂಗತಿಗಳು ಅದಕ್ಕೆ ಹೊಂದಿಕೊಂಡಂತೆಯೇ ಜನರಲ್ಲಿ ಹೆಚ್ಚು ಖುಷಿಯನ್ನು ಉಂಟು ಮಾಡುತ್ತದೆ. ಮೂಡಲಪಾಯ ಯಕ್ಷಗಾನದಲ್ಲಿಯೂ ಹನುಮನಾಯಕನ ಮಾತಿನಲ್ಲಿ ಹೊರಹೊಮ್ಮುವ ಸಮಕಾಲೀನ ಸಾಮಾಜಿಕ ಸಂಗತಿಗಳು ಹೆಚ್ಚು ಅಪ್ಯಾಯಮಾನವಾಗಿ ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಕರಪಾಲ ಮೇಳದಲ್ಲಿಯೂ ಇದನ್ನು ಕಾಣಬಹುದು.

ಜಾನಪದ ಸಂರಕ್ಷಣೆ ಕಷ್ಟದ ಕೆಲಸ ಎಂಬ ಅಭಿಪ್ರಾಯಗಳಿದ್ದರೂ, ಹಾಗೆಂದು ಕೈ ಬಿಡುವಂತಿಲ್ಲ. ಅದರಲ್ಲಿ ನಮ್ಮ ಪ್ರಾಚೀನ ಸಂಸ್ಕೃತಿಯ ಹಲವಂಶಗಳು ಅಡಗಿವೆ ಎಂಬುದನ್ನು ಮನಗಾಣಬೇಕು. ಜಾನಪದವನ್ನು ಸಂರಕ್ಷಿಸುವುದರಿಂದ ಆ ಸಂಸ್ಕೃತಿಯ ಹಲವಂಶಗಳನ್ನು ಸಂರಕ್ಷಿಸಿದಂತಾಗುತ್ತದೆ. "ಅದರ ಅಗತ್ಯ ಇದೆಯೆ?" ಎಂಬ ಪ್ರಶ್ನೆಯೂ ಈ ಸಂದರ್ಭದಲ್ಲಿ ಉದ್ಭವಿಸುವುದು ಸಹಜ, ಖಂಡಿತವಾಗಿಯೂ ಇದೆ. ಪರಂಪರೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ, ಅದರ ಅರಿವನ್ನು ಪಡೆಯುವ ದೃಷ್ಟಿಯಿಂದ ಇದು ಅಗತ್ಯ.

ಹಾಗಾದರೆ, ಇದರ ಸಂರಕ್ಷಣೆಗೆ ಕೈಗೊಳ್ಳಬಹುದಾದ ಕ್ರಮಗಳಾವುವು? ಈಗಾಗಲೇ ವಿಶ್ವವಿದ್ಯಾನಿಲಯಗಳು, ಅಕಾಡೆಮಿ ಹಾಗೂ ಉಡುಪಿಯ ರಂಗಕಲೆಗಳ ಅಧ್ಯಯನ ಕೇಂದ್ರ, ಜಾನಪದ ಟ್ರಸ್ಟ್, ಕರ್ನಾಟಕ ಜಾನಪದ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಮೂಡಲಪಾಯ ಯಕ್ಷಗಾನ ಕೇಂದ್ರದಂತಹ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿ ಹಲವು ಸಾಧನೆಗಳನ್ನು ಮಾಡಿವೆ. ಆದರೆ ಇದು 'ರಾವಣನ ಹೊಟ್ಟೆಗೆ ಮೂರು ಕಾಸು ಮಜ್ಜಿಗೆ' ಎಂಬಂತಾಗಿದೆ.

ಜಾನಪದ ಒಂದು ದೊಡ್ಡ ಸಾಗರ. ಅದಕ್ಕೆ ಸರ್ಕಾರವೇ ಹಣದ ಹೊಳೆಯನ್ನು ಹರಿಸಬೇಕಾಗಿದೆ. ಅಳಿದು ಹೋಗುತ್ತಿರುವ, ಜಾನಪದ ನಿಧಿಯನ್ನು ಉಳಿಸಿಕೊಳ್ಳಬೇಕಾಗಿದೆ. ಜೊತೆಗೆ ಜನರೂ ಆ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿದೆ. ಅದಕ್ಕಾಗಿ ಈ ಕೆಲವು ಅಂಶಗಳನ್ನು ಪರಿಶೀಲಿಸಬಹುದು

(1) ಜನರು ಜಾನಪದದ ಬಗ್ಗೆ ಅಭಿಮಾನವನ್ನು ತಾಳುವುದು. ಅದರ ಪ್ರಾಮುಖ್ಯತೆಯನ್ನು ಮನಗಾಣುವುದು.

(2) ಸರ್ಕಾರ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಜಾನಪದ ಪರಿವೀಕ್ಷಣ ಹಾಗೂ ಸಂರಕ್ಷಣ ಅಧಿಕಾರಿಗಳನ್ನು ನೇಮಿಸುವುದು.

(3) ಹಾಗೆಯೇ ಅಲ್ಲಿ ವಸ್ತು ಸಂಗ್ರಹಾಲಯಗಳ ಸ್ಥಾಪನೆ.

(4) ಜನಪದ ತರಬೇತಿ ಶಿಬಿರಗಳನ್ನು ಆಯಾ ಕೇಂದ್ರಗಳಲ್ಲಿ ಸ್ಥಾಪಿಸಿ ನುರಿತ ಹಿರಿಯ ಕಲಾವಿದರನ್ನು ನೇಮಿಸುವುದು.

(5) ಅಲ್ಲಲ್ಲಿ ಜಾನಪದ ಅಧ್ಯಯನ ಕೇಂದ್ರಗಳ ಸ್ಥಾಪನೆ.

(6) ಆ ಮೂಲಕ ಸಂಗ್ರಹಕಾರರಿಗೆ ತರಬೇತಿ ಶಿಬಿರಗಳ ಆರಂಭ.

(7) ಕಲಾವಿದರಿಗೆ ಬದುಕಲು ಸಾಕಾಗುವಷ್ಟು ಸಂಭಾವನೆಯನ್ನು ನಿಗದಿ ಪಡಿಸುವುದು.

(8) ಇವೆಲ್ಲವನ್ನು ಒಳಗೊಂಡಂತೆ, ಇವನ್ನು ನಿಯಂತ್ರಿಸುವ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆ.

(9) ತೀವ್ರಗತಿಯಲ್ಲಿ ಹಾಗೂ ವ್ಯಾಪಕವಾಗಿ ಸಂಶೋಧನೆ, ಸಂಗ್ರಹ ಕಾರ್ಯದ ವ್ಯವಸ್ಥೆ.

(10) ಜಾನಪದವನ್ನು ಬಲವಂತವಾಗಿ ತಿರುಚುವುದನ್ನು ತಪ್ಪಿಸಲು, ಅದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ನೀಡುವ ಕಾರ್ಯಕ್ರಮಗಳ ವ್ಯವಸ್ಥೆ.

ಇಂತಹ ಹಲವು ಯೋಜನೆಗಳ ಮೂಲಕ ಜಾನಪದ ಅಧ್ಯಯನ ಮತ್ತು ಜಾನಪದ ಸಂರಕ್ಷಣೆ ಬಹುಮಟ್ಟಿನ ಫಲವನ್ನು ನೀಡಬಲ್ಲದು.

ಎಲ್ಲ ರಂಗದಲ್ಲಿಯೂ ಹೊಸ ನೀರು ಬರುವುದು ಹಳೆಯ ನೀರು ಕೊಚ್ಚಿಹೋಗುವುದು ಸಾಮಾನ್ಯ. ಜಾನಪದವು ಇದರಿಂದ ಹೊರತಲ್ಲ. ಹಳೆಯದರಲ್ಲಿ ಕೆಲವು ಹಾಗೆಯೇ ಉಳಿದು ಬರಬಹುದು, ಮತ್ತೆ ಕೆಲವು ರೂಪಾಂತರ ಹೊಂದಬಹುದು. ಇನ್ನು ಕೆಲವು ಮರುಹುಟ್ಟನ್ನು ಪಡೆಯಬಹುದು. ಇಂದು ನಾವು ಕಾಣುತ್ತಿರುವ, ಕೇಳುತ್ತಿರುವ ಎಷ್ಟೋ ವಸ್ತು-ವಿಷಯಗಳು ಹೇಗೆ ಹಿಂದಿನ ರೂಪವನ್ನೇ ಉಳಿಸಿಕೊಂಡಿರಲಾರವೋ, ಹಾಗೆಯೇ ಮುಂದೆ ಹುಟ್ಟನ್ನು ಪಡೆಯುವವುಗಳೂ ಉಳಿಸಿಕೊಳ್ಳಲಾರವು. ಅಂದಂದಿನ ಸಾಮಾಜಿಕ ಸಂಗತತೆಯ ಹಿನ್ನೆಲೆಯಲ್ಲಿ ಅವು ರೂಪಾಂತರ ಹೊಂದುತ್ತ ಮುನ್ನಡೆಯುತ್ತವೆ. ಇಂತಹ ಕಡೆಗಳಲ್ಲಿ ಹಳತು-ಹೊಸತರ ಸಂಘರ್ಷ ಸದಾ ಇದ್ದೇ ಇರುತ್ತದೆ. ಅದೇ ಜೀವನ.

* * * * *

# ಜಾನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ

ಡಾ. ಎಂ. ಎಸ್. ವಾಲಿ

ವಿದ್ವಾವಂತರಿಂದ ರಚಿತವಾದ ಸಾಹಿತ್ಯದ ಜೊತೆ ಜೊತೆಯಾಗಿ ಇನ್ನೊಂದು ಬಗೆಯ ಸಾಹಿತ್ಯ ನಿರ್ಮಿತಿಯಾದುದು, ಸಾಹಿತ್ಯದ ಇತಿಹಾಸವನ್ನು ಅವಲೋಕಿಸಿದವರಿಗೆಲ್ಲ ತಿಳಿದು ಬರುವ ಸಂಗತಿ. ಈ ಸಾಹಿತ್ಯ ಗ್ರಂಥಸ್ಥವಾಗಲಿಲ್ಲ; ಕಾವ್ಯ ಲಕ್ಷಣಗಳ ಕಟ್ಟಿಗೆ ಒಳಗಾಗಲಿಲ್ಲ. ಜನಸಾಮಾನ್ಯರೆನಿಸಿಕೊಂಡ ಅಶಿಕ್ಷಿತರು ತಮ್ಮ ದಿನಗೆಲಸಗಳ ನಿರ್ವಹಣೆಯೊಂದಿಗೆ ಇದನ್ನು ರಚಿಸಿದರು. ಅಂತೆಯೇ ಇದು ಜನಸಾಮಾನ್ಯರ ಅಂತರಂಗದ ಅಮೌಲ್ಯರತ್ನವೆನಿಸಿತು; ಚಿಮ್ಮುವ ಚಿಲುಮೆಯಾಗಿ ಹೊರಬಂತು. ಇದರ ಸತ್ವವೇ ಸತ್ವ; ಇದರ ಚೆಲುವೇ ಚೆಲುವು!! ಇದನ್ನು ಜಾನಪದ ಸಾಹಿತ್ಯವೆಂದು ಕರೆಯಲಾಗುತ್ತದೆ. ಈ ಬಗೆಯ ಸಾಹಿತ್ಯದಲ್ಲಿ ಜಾನಪದ ಹಾಡು, ಒಡಪು, ಒಗಟು, ಕಥೆ, ಗಾದೆಗಳು-ಇತ್ಯಾದಿ ಸಮಾವೇಶವಾಗುತ್ತವೆ. ಹೀಗಾಗಿ ಇದು ಒಂದು ಇಡೀ ಜನಾಂಗದ ಸಮಗ್ರಜೀವನದ ಜೀವನಾಡಿ ಎನಿಸಿದೆ. ಇದನ್ನು ರಚಿಸಿದವರು ಅಜ್ಞಾತರಾಗಿದ್ದಾರೆ. ಈ ಸಾಹಿತ್ಯವು ಜನಪದವೊಂದರ ಪೂರ್ಣಬಿಂಬವನ್ನು ಮನದಾಳದಲ್ಲಿ ಮೂಡಿಸಬಲ್ಲ ತಾಕತ್ತನ್ನು ಪಡೆದಿದೆ.

'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬ ಕವಿರಾಜಮಾರ್ಗಕಾರನ ಹೊಗಳಿಕೆ. ಒಂಬತ್ತನೇ ಶತಮಾನಕ್ಕಾಗಲೇ ಜಾನಪದ ಸಾಹಿತ್ಯ ಹುಲುಸಾಗಿತ್ತು ಎಂಬುದಕ್ಕೆ ನಿದರ್ಶನ. ಆದರೆ ಅಂದಿನ ಜಾನಪದ ಸಾಹಿತ್ಯದ ಸ್ವರೂಪವೇನೆಂಬುದಕ್ಕೆ ಉತ್ತರವಿಲ್ಲ. ಇದಕ್ಕೆ ಉತ್ತರ ದೊರಕಿಸಲು ಯತ್ನಿಸಿದರೆ ನಮಗಿರುವ ಆಧಾರ ಊಹೆಯ ಕುದುರೆ ಮಾತ್ರ. ಬಣ್ಣವಾಡು, ಒನಕೆವಾಡು, ಹಾಡುಗಬ್ಬ ಮೊದಲಾದ ಪರ್ಯಾಯನಾಮಗಳಿಂದಲೂ ಇದನ್ನೂ ಕರೆದಿದ್ದಾರೆ. 'ಜನವಾಣಿಬೇರು, ಕವಿವಾಣಿ ಹೂವು' ಎಂಬ ಹೇಳಿಕೆ. ಜಾನಪದ ಸಾಹಿತ್ಯವೇ ಅಭಿಜಾತ ಸಾಹಿತ್ಯಕ್ಕೆ ಮೂಲವೆನ್ನುವುದನ್ನು ಖಚಿತಪಡಿಸುತ್ತದೆ. ಹಳ್ಳಿಯ ಬಾಳಿನ ನೈಜಚಿತ್ರ ದೊರೆಯುವದು ಈ ಸಾಹಿತ್ಯದಲ್ಲಿಯೇ.

ವಿಜಾಪುರ ಜಿಲ್ಲೆಯ ಜಾನಪದ ಸಾಹಿತ್ಯ ಸಮೀಕ್ಷೆಗೆ ತೊಡಗುವ ಮುನ್ನ ಈ ಜಿಲ್ಲೆಯ ವೈಶಿಷ್ಟ್ಯಗಳ ಬಗೆಗೆ ಒಂದೆರಡು ಮಾತುಗಳನ್ನು ಹೇಳಬೇಕೆನಿಸುತ್ತದೆ. ವಿಜಾಪುರ ಜಿಲ್ಲೆ ಸೃಷ್ಟಿಕರ್ತನಿಂದ ಪಂಚನದಿಗಳನ್ನು ಪಡೆದ ನಾಡು. ಭೂಸಾರದಲ್ಲಿ ವೈವಿಧ್ಯತೆಯನ್ನು ಹೊಂದಿದ ಬಯಲು-ಬೆಟ್ಟಗಳ ಪ್ರಕೃತಿಯ ನೆಲೆವೀಡು. ಇಲ್ಲಿ ದೊಡ್ಡ ದೊಡ್ಡ ಚಕ್ರವರ್ತಿಗಳು ಬಾಳಿ ರೋಮಾಂಚಕಾರಕ ಇತಿಹಾಸ ನಿರ್ಮಿತಿಗೆ ಕಾರಣರಾಗಿದ್ದಾರೆ. ಶಿವಶರಣರು ಧಾರ್ಮಿಕ ತಳಹದಿಯ ಮೇಲೆ ಹೊಸ ಸಮಾಜ ರಚನೆ ಮಾಡಿದುದು ನಮ್ಮ ಜಿಲ್ಲೆಯಲ್ಲಿಯೇ. ಅವರ ವಚನ ಸಾಹಿತ್ಯ ಜಾಗತಿಕ ಸಾಹಿತ್ಯಕ್ಕೆ ಹಿರಿದಾದ ಕೊಡುಗೆ. ಈ ಶರಣರಲ್ಲಿ ನಮ್ಮ ಜಿಲ್ಲೆಯವರಾದ ಬಾಗೇವಾಡಿಯ ಅಣ್ಣಬಸವಣ್ಣ, ಹಾವಿನಹಾಳ ಕಲ್ಲಯ್ಯ, ಗೋಲಗೇರಿಯ ಗೊಲ್ಲಾಳ, ಶಿವಣಗಿಯ ನುಲಿಯಚಂದಯ್ಯ, ಮಸೂತಿಯ

ಮುಸುಡಿಯ ಚೌಡಯ್ಯ, ಪಟ್ಟದಕಲ್ಲಿನ ಗೋರಕ್ಷ- ಅನಿಮಿಷಯ್ಯರು, ಇಂಡಿಯ ಶಾಂತಯ್ಯ, ಹಿಪ್ಪರಗಿಯ ಮಡಿವಾಳ ಮಾಚಯ್ಯ, ಬಾಹೂರ ಬೊಮ್ಮಯ್ಯ, ಐಹೊಳೆಯ ದೋಣ್ಣೆಯ ಮಾಯಿದೇವ-ಮೊದಲಾದವರು ಚಿರಸ್ಮರಣೀಯರು. ವಿಜಾಪುರ ಜಿಲ್ಲೆಯ ವಾಸ್ತುಶಿಲ್ಪ ವಿಶ್ವವಿಖ್ಯಾತಿಯನ್ನು ಪಡೆದಿದೆ. ಶೈವ-ವೈಷ್ಣವ, ಜೈನ ಸಂಸ್ಕೃತಿಗಳೂ ಮಹಮ್ಮದೀಯ ಸಂಸ್ಕೃತಿಯೂ ಸಹಬಾಳ್ವೆ ನಡೆಸಿದ ಬಗ್ಗೆ ದಾಖಲೆಗಳುಂಟು. ಈ ಜಿಲ್ಲೆಯ ಸಾಲೋಟಗಿಯು ರಾಷ್ಟ್ರಕೂಟರ ಕಾಲದಲ್ಲಿ ವಿಶ್ವವಿದ್ಯಾಲಯ (ಘಟಿಕಾಸ್ಥಾನ)ವನ್ನೂ ಹೊಂದಿತ್ತೆಂಬುದು ಅಭಿಮಾನಾಸ್ಪದ ಸಂಗತಿ. ಐಹೊಳೆ ಪ್ರಾಚೀನ ವಾಣಿಜ್ಯ ಪ್ರಪಂಚದಲ್ಲಿ ಹೆಸರು ಪಡೆದಿತ್ತು.

೧೨ ನೆಯ ಶತಮಾನದ ಪ್ರಸಿದ್ಧ ಗಣಿತಜ್ಞನಾದ ಭಾಸ್ಕರಾಚಾರ್ಯನು ವಿಜಾಪುರ ಜಿಲ್ಲೆಯವನೆಂದು ತಿಳಿದುಬರುತ್ತದೆ. ಕನ್ನಡ ಕಾವ್ಯ ಪ್ರಪಂಚದಲ್ಲಿ ಖ್ಯಾತಿವೆತ್ತ ೧೦ ನೆಯ ಶತಮಾನದ ರನ್ನಕವಿ, ೧೧ ನೆಯ ಶತಮಾನದ ನಾಗಚಂದ್ರಕವಿ, ೧೩ ನೆಯ ಶತಮಾನದ ದುರ್ಗಸಿಂಹ - ಅಗ್ಗಳರು, ೧೫ನೆಯ ಶತಮಾನದ ಕುಮಾರ ವಾಲ್ಮೀಕಿ ಮೊದಲಾದವರೆಲ್ಲ ವಿಜಾಪುರ ಜಿಲ್ಲೆಯವರು. ದಾಸರಲ್ಲಿ ಖ್ಯಾತರಾದ ಮಹಿಪತಿದಾಸರು, ಕೃಷ್ಣದಾಸರು, ಪ್ರಸನ್ನವೆಂಕಟದಾಸರು ಈ ಜಿಲ್ಲೆಯವರು. ಜಾನಪದ ಸಾಹಿತ್ಯದಲ್ಲಿಯೂ ಈ ಜಿಲ್ಲೆಯದೇ ಮೇಲುಗೈ.

ಕರ್ನಾಟಕ ಜಾನಪದ ಸಾಹಿತ್ಯವನ್ನು ಸ್ಥೂಲವಾಗಿ 1 ಉತ್ತರ ಕರ್ನಾಟಕದ ಜಾನಪದ ಸಾಹಿತ್ಯ 2 ದಕ್ಷಿಣ ಕರ್ನಾಟಕದ ಜಾನಪದ ಸಾಹಿತ್ಯ 3 ಕರಾವಳಿಯ ಜಾನಪದ ಸಾಹಿತ್ಯ ಎಂದು ವಿಂಗಡಿಸಬಹುದಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವಿಜಾಪುರ ಜಿಲ್ಲೆಯ ಜಾನಪದ ಸಾಹಿತ್ಯವು ವೈಶಿಷ್ಟ್ಯಪೂರ್ಣವೂ ಅತ್ಯಂತ ಶ್ರೀಮಂತವೂ ಆಗಿದೆ. ವಿಜಾಪುರ ಜಿಲ್ಲೆಯ ಭಾಷೆಯಂತೂ ಗಂಡು ಭಾಷೆಯೆಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ. ಕ್ರಿ. ಶ. ೧೯೧೯ ರಲ್ಲಿ ನಡೆದ ಹಾಸನದ ೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಹಣಮಂತಗೌಡರು 'ಲಾವಣಿಗಳು'- ಎಂಬ ವಿಷಯವಾಗಿ ಮಾತನಾಡಿದುದೇ ಈ ಕುರಿತ ಪ್ರಥಮ ಪ್ರಯತ್ನವೆಂದು ತಿಳಿದುಬರುತ್ತದೆ. ಇದನ್ನುಳಿದರೆ ಈ ಶತಮಾನದ ಎರಡನೆಯ ದಶಕ ಮುಗಿಯುವವರೆಗೂ ನಮ್ಮ ನಾಡಿನ ಪಂಡಿತರು ಜಾನಪದ ಸಾಹಿತ್ಯದತ್ತ ಗಮನಹರಿಸಿರಲಿಲ್ಲ. ಕ್ರಿ. ಶ. ೧೯೨೩ ರಲ್ಲಿ ವಿಜಾಪುರದಲ್ಲಿ ನಡೆದ ೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಲಸಂಗಿಯ ಮಧುರ ಚೆನ್ನರು 'ಹಳ್ಳಿಯ ಹಾಡುಗಳು'- ಎಂಬ ಪ್ರಬಂಧವನ್ನು ಓದಿ, ಇಡೀ ಕರ್ನಾಟಕದ ಸಾಹಿತಿಗಳ ಗಮನವನ್ನು ಜಾನಪದ ಸಾಹಿತ್ಯದತ್ತ ಸೆಳೆದರು. ಹೀಗಾಗಿ ಮಧುರಚೆನ್ನರು ಅಖಿಲ ಕರ್ನಾಟಕ ಜಾನಪದ ಸಾಹಿತ್ಯಾಧ್ಯರ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಅವರು ಕೇವಲ ಮಾತನಾಡಿ ಬಿಡದೆ ಜಾನಪದ ಸಾಹಿತ್ಯ ಸಂಗ್ರಹ ಕಾರ್ಯ ಕೈಕೊಂಡರು. ಈ ಸಾಹಿತ್ಯ ಸಂಗ್ರಹಕಾರರಲ್ಲಿ ಹಲಸಂಗಿ ಗೆಳೆಯರೇ ಮೊದಲಿಗರೆಂಬುದು ಅಭಿಮಾನಾಸ್ಪದ ಸಂಗತಿ. ಅವರ ಪ್ರಥಮ ಜಾನಪದ ಹಾಡುಗಳ ಸಂಗ್ರಹ 'ಗರತಿಯ ಹಾಡು' ಎಂಬ ಹೆಸರಿನಲ್ಲಿ ಕ್ರಿ. ಶ. ೧೯೩೧ ರಲ್ಲಿ ಪ್ರಕಟವಾಯಿತು. ಇದು ಹಲಸಂಗಿ ಗೆಳೆಯರ ಅಪೂರ್ವ ಕೊಡುಗೆ. ಇದರಲ್ಲಿ ಗರತಿಯರ

ಜೀವನದ ಹಲವಾರು ಸನ್ನಿವೇಶಗಳ ತ್ರಿಪದಿಗಳಿವೆ. ಇಂದಿಗೂ ಇದು ಒಂದು ಮಾದರಿಯ ಸಂಗ್ರಹವೆನಿಸಿಕೊಂಡಿರುವದು ಇದರ ಸಂಗ್ರಹಕಾರರ ಶ್ರದ್ಧೆಗೆ ನಿದರ್ಶನವಾಗಿದೆ. ಅನೇಕ ಪಂಡಿತರು ಈ ಕೃತಿಯ ಮೇಲ್ಮೆಯನ್ನು ಕೊಂಡಾಡಿದ್ದಾರೆ. ಈ ಸಂಗ್ರಹದ ಆರಂಭದಲ್ಲಿ ಬಿ. ಎಂ. ಶ್ರೀಯವರಿಂದ ಪ್ರಸ್ತಾವನೆ, ಡಾ. ದ. ರಾ. ಬೇಂದ್ರೆಯವರ ಪರಿಚಯ, ಮಾಸ್ತಿಯವರಿಂದ ಆಶೀರ್ವಚನ-ಈ ವೈಚಾರಿಕ ಹಾಗೂ ವಿಮರ್ಶಾತ್ಮಕ ಬರಹಗಳಿರುವುದು ಮೆಚ್ಚತಕ್ಕ ಅಂಶವಾಗಿದೆ. ಶ್ರೀಯುತರುಗಳಾದ ಸಿಂಪಿಲಿಂಗಣ್ಣ ಹಾಗೂ ಪಿ. ಧೂಲಾ ಅವರು ಜೊತೆಗೂಡಿ ಸಂಗ್ರಹಿಸಿದ 'ಜೀವನ ಸಂಗೀತ' ಎಂಬ ೧೨ ಲಾವಣಿಗಳ ಸಂಗ್ರಹವು ಕ್ರಿ. ಶ. ೧೯೩೩ ರಲ್ಲಿ ಪ್ರಕಟವಾಯಿತು. ಕ್ರಿ. ಶ. ೧೯೭೧ ರಲ್ಲಿ ಶ್ರೀ ಸಿಂಪಿಲಿಂಗಣ್ಣನವರು ಮತ್ತೆ ನಾಲ್ಕು ಲಾವಣಿಗಳನ್ನು ಇದರಲ್ಲಿ ಸೇರಿಸಿ ಇದರ ಗಾತ್ರವನ್ನು ಹೆಚ್ಚಿಸಿದ್ದಾರೆ. ಹಲಸಂಗಿ ಗೆಳೆಯರ ಗುಂಪಿನ ಶ್ರೀ ಕಾಪಸೆ ರೇವಪ್ಪ ಅವರು ಕ್ರಿ. ಶ. ೧೯೩೫ರಲ್ಲಿ 'ಮಲ್ಲಿಗೆ ದಂಡೆ'- ಎಂಬ ಸಂಕಲನವನ್ನು ಹೊರತಂದರು. ಇದಕ್ಕೆ ಅವಶ್ಯವಾದ ಟಿಪ್ಪಣಿಗಳನ್ನು ಮಧುರಚೆನ್ನರು ಸಿದ್ಧಪಡಿಸಿಕೊಟ್ಟಿದ್ದಾರೆ. ಈ ಮೂರು ಕೃತಿಗಳು ಹಲಸಂಗಿ ಗೆಳೆಯರು ಜಾನಪದ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆ ಎಂಬುದರಲ್ಲಿ ಸಂದೇಹವಿಲ್ಲ.

ಕನ್ನಡ ಲಾವಣಿಗಳ ಬಗೆಗೆ ಹೇಳುವುದಾದರೆ ಡಾ. ಫ್ಲೀಟ ಅವರು ಕ್ರಿ. ಶ. ೧೮೮೫ ರಿಂದ ೧೮೮೯ ರ ಅವಧಿಯಲ್ಲಿ ಸಂಗ್ರಹಿಸಿ ಪ್ರಕಟಿಸಿದ 'ಇಂಡಿಯನ್ ಎಂಟಿಕ್ವರಿ' ಲಾವಣಿಗಳೇ ಪ್ರಾಚೀನತಮವೆನಿಸುತ್ತವೆ. ಲಾವಣಿಕಾರರಲ್ಲಿ ೧೯ನೆಯ ಶತಮಾನದ ಮೊದಲ ಮುಕ್ಕಾಲು ಭಾಗದಲ್ಲಿ ವಿಜಾಪುರ ಜಿಲ್ಲೆಯಲ್ಲಿ ಬದುಕಿದ್ದ ಪ್ರಸಿದ್ಧ ಲಾವಣಿಕಾರರು ಮೂವರೆಂದು ತಿಳಿದುಬರುತ್ತದೆ. ೧. ನ್ಯಾಮಣ್ಣ (೧೮೦೦-೧೮೭೦) ತೇರದಾಳ-ತಾ-ಜಮಖಂಡಿ ೨. ನಾನಾಸಾಬ (೧೮೦೦-೧೮೭೧) ಜನವಾಡ ತಾಯ ಜಮಖಂಡಿ ೩. ಇಬ್ರಾಹಿಮ (೧೮೦೦-೧೮೭೯) ವಡ್ಡೊಡಗಿತಾ ಮುದ್ದೇಬಿಹಾಳ ಇಂದು ವಿಜಾಪುರ ಜಿಲ್ಲೆಯ ಸಣ್ಣ ದೊಡ್ಡ ಲಾವಣಿ ಕವಿಗಳ ಸಂಖ್ಯೆ ೨೦೦ ಕ್ಕೂ ಮಿಕ್ಕುವಂತಿದೆ. ಅವರ ಹಾಡುಗಳ ಸಂಖ್ಯೆ ನಾಲ್ಕು ಸಾವಿರದಷ್ಟು ಆದೀತು. ಈ ಜಿಲ್ಲೆಯ ಲಾವಣಿ ಕವಿಗಳಲ್ಲಿ ತೇರದಾಳದ ಗೋಪಾಳ ದುರದುಂಡಿ, ಮಹಾಲಿಂಗಪೂರದ ರಾಣಾಕುಬಣ್ಣ ಹಾಗೂ ಮಲಿಕಸಾಬ, ಕೋರಳ್ಳಿಯ ಮೌಲಾಲಿ, ಬಿದರಿಯ ಪರಪ್ಪ, ಅಗರಬೇಡದ ಅಣ್ಣಾರಾಯ, ಕಡಣಿಯಕಲ್ಲಪ್ಪ, ಚಾಂದಕವಠೆಯ ಗುಡೂಲಾಲ, ಹಲಸಂಗಿಯ ಖಾಜಾಭಾಯಿ, ಬೀಬಿ ಇಂಗಳಗಿಯ ಹಸನಸಾಬ, ಇಂಗಳೇಶ್ವರದ ಕಾಶೀಮ-ಲಾಲಸಾಬರು, ತುಂಗಳದ ಸತ್ಯಪ್ಪ, ಬಸವನ ಬಾಗೇವಾಡಿಯ ಪಟೇಲ ಮೊದಲಾದವರು ಚಿರಸ್ಮರಣೀಯರು. ಜಾನಪದ ಸಾಹಿತ್ಯದಲ್ಲಿ ಲಾವಣಿಗಳ ಕುರಿತು ತೃಪ್ತಿಕರವಾಗಿ ಕಾರ್ಯ ನಡೆದಿರುವದು ಉಲ್ಲೇಖನೀಯ. "ವಿಜಾಪುರ ಜಿಲ್ಲೆಯ ಲಾವಣಿ ಇತಿಹಾಸ"- ಎಂಬ ಶ್ರೀ ಶಂಕರಗೌಡ ಮ. ಭಾರಾದಾರ ಅವರ ಲೇಖನ (ಜಾನಪದ ಜಗತ್ತು ಸಂ ೨ ಸಂಚಿಕೆ ೪), 'ಲಾವಣಿಯ ಉಗಮ ಮತ್ತು ವಿಕಾಸ' (ಕರ್ನಾಟಕ ಭಾರತಿ ಸಂ ೧೦ ಸಂಚಿಕೆ ೪) ಹಾಗೂ 'ಲಾವಣಿಯ ಸೃಷ್ಟಿ ಮತ್ತು ಪ್ರಸಾರ' ( ಕರ್ನಾಟಕ ಭಾರತಿ ಸಂ ೭ ಸಂಚಿಕೆ ೪)- ಇವು ಶ್ರೀರಾಮ ಇಟ್ಟಣ್ಣವರ

ಲೇಖನಗಳಾಗಿದ್ದು, ಅವರು ಲಾವಣಿ ಸಾಹಿತ್ಯದ ಪರಿಚಯವನ್ನು ಮಾಡಿಕೊಡಲು ಶ್ರಮಿಸಿದ್ದಾರೆ. ಡಾ. ಸಂಗಮೇಶ ಬಿರಾದಾರ ಅವರು ಲಾವಣಿ ಸಾಹಿತ್ಯ ಕುರಿತು ವಿಶೇಷ ಅಧ್ಯಯನ ನಡೆಸಿ ಆಗಲೇ ಎರಡು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರ ಚಾಪ ಹಾಕತೀವ ಡಪ್ಪಿನ ಮ್ಯಾಲ- ತರಂಗ ೧ ರಲ್ಲಿ ಕನ್ನಡ ಲಾವಣಿ ಸಾಹಿತ್ಯದ ಮೀಮಾಂಸೆಯಿದ್ದು ತರಂಗ ೨ ರಲ್ಲಿ ಕನ್ನಡದ ಪೌರಾಣಿಕ ಲಾವಣಿಗಳ ಸಂಗ್ರಹವಿದೆ. ಮುಂದಿನ ತರಂಗಗಳಲ್ಲಿ ಐತಿಹಾಸಿಕ, ಚಾರಿತ್ರಿಕ, ಸಾಮಾಜಿಕ, ತಾತ್ವಿಕ ಲಾವಣಿಗಳನ್ನು ಸಂಗ್ರಹಿಸಿಕೊಡುವ ಯೋಜನೆ ಇತ್ತು. ಅದು ಕಾರ್ಯಗತವಾಗಲೆಂದು ಆಶಿಸುವೆ. ಡಾ. ಮಲ್ಲಿಕಾರ್ಜುನ ಲಠ್ಠೆ ಅವರ ಜಾನಪದ ಕವಿಚರಿತೆ ನಮ್ಮ ಜಾನಪದ ಕವಿ, ಕಲಾವಿದರ ಪರಿಚಯವನ್ನೊಳಗೊಂಡಿದೆ. ಹೀಗೆ ವಿಜಾಪುರ ಜಿಲ್ಲೆಯ ಲಾವಣಿ ಸಾಹಿತ್ಯ ಸಂಗ್ರಹ ಹಾಗೂ ವಿಮರ್ಶೆಗಳು ಕರ್ನಾಟಕದ ಇತರ ಜಿಲ್ಲೆಗಳಿಗೆ ಮಾದರಿ ಎನಿಸುತ್ತಿರುವದು ಸಂತಸಕರ. ಶ್ರೀಕ್ಯಾತನಹಳ್ಳಿ ರಾಮಣ್ಣ ಅವರು ಮೈಸೂರು ವಿ. ವಿ.ದಿಂದ ಪ್ರಕಟಿಸಿದ 'ವಿಜಾಪುರ ಜಿಲ್ಲೆಯ ಲಾವಣಿಗಳು'- ಕೃತಿಯೂ ಇಲ್ಲಿ ಉಲ್ಲೇಖನೀಯ. ಈ ಜಿಲ್ಲೆಯ ಲಾವಣಿ ಸಾಹಿತ್ಯ ಕುರಿತು ಹಲವಾರು ಬಿಡಿ ಲೇಖನಗಳು ಅಲ್ಲಲ್ಲಿ ಪ್ರಕಟವಾಗಿದ್ದು ಅವುಗಳ ವಿವರಣೆಗೆ ಇಲ್ಲಿ ಅವಕಾಶವಿಲ್ಲ.

**ಕಥಾ ಸಾಹಿತ್ಯ:**

ಜಾನಪದ ಗದ್ಯ ಸಾಹಿತ್ಯದಲ್ಲಿ ಜಾನಪದ ಕಥೆಗಳಿಗೆ ಅಗ್ರಸ್ಥಾನ ಸಲ್ಲುತ್ತದೆ. ಮೇರೀ ಫ್ರೀರೇ ಸಂಗ್ರಹಿಸಿದ ಕೆಲವು ಕಥೆಗಳನ್ನು ಬಿಟ್ಟರೆ ೨೦ ನೆಯ ಶತಮಾನದ ಪೂರ್ವಾರ್ಧ ಗತಿಸುವವರೆಗೂ ಜಾನಪದ ಕಥೆಗಳನ್ನು ಕುರಿತು ತೃಪ್ತಿಕರವಾಗಿ ಕಾರ್ಯ ನಡೆದಂತೆ ಕಂಡುಬರುವುದಿಲ್ಲ. ಜಾನಪದ ಕಥೆಗಳಲ್ಲಿ ಕೆಲವು ಮಾತ್ರ ಅಲ್ಲಲ್ಲಿ ಪತ್ರಿಕೆಗಳಲ್ಲಿ ಬೆಳಕುಕಂಡಿವೆ. ಅನಂತರ ಕ್ರಿ. ಶ. ೧೯೩೨ ರಲ್ಲಿ ಶ್ರೀ ಸಿಂಪಿಲಿಂಗಣ್ಣನವರು 'ಉತ್ತರ ಕರ್ನಾಟಕದ ಜನಪದ ಕಥೆಗಳು' ಎಂಬ ಸಂಕಲನವನ್ನು ಹೊರತಂದರು. ಇದು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿದೆ. ಒಂಬತ್ತು ವಿಭಾಗಗಳಲ್ಲಿ ರೂಪುಗೊಂಡ ೭೨ ಕಥೆಗಳ ಈ ಸಂಕಲನವು ಶ್ರೀ ಸಿಂಪಿಯವರ ದಕ್ಷ ಹಾಗೂ ಶಾಸ್ತ್ರೀಯ ಸಂಪಾದನೆಗೆ ಸಾಕ್ಷಿಯಾಗಿದೆ. ಈ ಕೃತಿಯ ಹೆಸರು 'ಉತ್ತರ ಕರ್ನಾಟಕದ ಜನಪದ ಕಥೆಗಳು' ಎಂದಿದ್ದರೂ ಇದರಲ್ಲಿ ವಿಜಾಪುರ ಜಿಲ್ಲೆಯ ಜಾನಪದ ಕಥೆಗಳದೇ ಸಿಂಹಪಾಲು. 'ಕನ್ನಡ ಕಥಾಸೃಷ್ಟಿ' ಎಂಬುದು ಡಾ. ಬಿ. ಬಿ. ಮಹಿಷವಾಡಿ ಅವರ ಕ. ವಿ. ವಿ. ದ ಉಪನ್ಯಾಸ ಮಾಲೆಯ ಕೃತಿ. ಇದರಲ್ಲಿ ಲೇಖಕರು ಜಾನಪದ ಕಥೆಗಳು ಸೇರಿದಂತೆ ಕನ್ನಡ ಕಥೆಗಳ ಉಗಮ, ವಿಕಾಸ, ವಸ್ತು, ತಂತ್ರಗಳ ಕುರಿತು ವಿವೇಚಿಸಿದ್ದಾರೆ. 'ಕರ್ನಾಟಕದ ಜನಪದ ಕಥೆಗಳು'- ಶ್ರೀ ಎಚ್. ಎಲ್. ನಾಗೇಗೌಡರು ಸಂಪಾದಿಸಿದ ಕೃತಿ. ಕ್ರಿ. ಶ. ೧೯೭೭ ರಲ್ಲಿ ಇದು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದ್ದು ಇದರಲ್ಲಿ ವಿಜಾಪುರ ಜಿಲ್ಲೆಯ ಐದು ಜನಪದ ಕಥೆಗಳು ಬೆಳಕು ಕಂಡಿವೆ. ವಿಜಾಪುರ ಜಿಲ್ಲೆಯ ಕಥಾಸಾಹಿತ್ಯ ಭಂಡಾರವು ಶ್ರೀಮಂತವಾಗಿದ್ದು ಇತ್ತೀಚಿಗೆ ಈ ಕುರಿತ ಸಂಗ್ರಹಕಾರ್ಯ ಭರದಿಂದ ಸಾಗಿದೆ.

### ಗಾದೆಗಳು

ಗಾದೆಗಳು ವೇದಕ್ಕೆ ಸಮಾನವೆಂದು ಹೇಳಲಾಗುವುದು. ಮೊಗ್ಲಿಂಗ ಹಾಗೂ ಕಿಟೆಲ್ ಅವರು ಸಂಗ್ರಹಿಸಿ ಪ್ರಕಟಿಸಿದ ಕೆಲವು ಗಾದೆಗಳನ್ನು ಬಿಟ್ಟರೆ. ಗಾದೆಗಳ ಬಗೆಗೆ ಮಧುರಚೆನ್ನರು ಜಯಕರ್ನಾಟಕ(ಸಂ ೧೭ ಸಂಚಿಕೆ ೯) ಪತ್ರಿಕೆಯಲ್ಲಿ ಪ್ರಕಟಿಸಿದ 'ಹೆಣ್ಣು ಮಕ್ಕಳ ಗಾದೆಗಳು ಎಂಬ ಲೇಖನವೇ ಕನ್ನಡದಲ್ಲಿ ಪ್ರಪ್ರಥಮವೆನಿಸುತ್ತದೆ. ಈ ಲೇಖನದಲ್ಲಿ ಅವರು ತಮ್ಮ ಅಪ್ರಕಟಿತ ಸಂಗ್ರಹದಲ್ಲಿ ಇನ್ನೂ ೨೫೦ ರಷ್ಟು ಗಾದೆಗಳಿರುವುದಾಗಿ ಹೇಳಿದ್ದಾರೆ. ಅವು ಕಾಲನ ತುಳಿತಕ್ಕೆ ತುತ್ತಾದುದು ನಮ್ಮ ದೌರ್ಭಾಗ್ಯ. ನಂ. ತಪಸ್ವೀಕುಮಾರ ಅವರ 'ಕನ್ನಡ ಗಾದೆಗಳ ಸಮೀಕ್ಷೆ' (ಮೈ. ವಿ. ವಿ. ಪ್ರಕಟನೆ)ಯಲ್ಲಿ ವಿಜಾಪುರ ಜಿಲ್ಲೆಯ ಹಲವಾರು ಗಾದೆಗಳು ಕಂಡುಬರುತ್ತವೆ. ಆದರೆ ವಿಜಾಪುರ ಜಿಲ್ಲೆಯ ಗಾದೆಗಳನ್ನು ಕುರಿತ ಪ್ರತ್ಯೇಕ ಕೃತಿ ಇದುವರೆಗೂ ಪ್ರಕಟವಾಗಿಲ್ಲ. ಪ್ರೊ. ಈಶ್ವರ ಸಿಂಪಿಯವರು ಈ ಜಿಲ್ಲೆಯ ಸಂ. ೩೦೦೦ ಗಾದೆಗಳನ್ನು ಸಂಗ್ರಹಿಸಿರುವದಾಗಿ ತಿಳಿದುಬರುತ್ತದೆ. ಅವು ಬೇಗನೆ ಬೆಳಕು ಕಾಣಲೆಂದು ಹಾರೈಸುವೆ. ಶ್ರೀ. ಎ. ಕೆ. ರಾಮಾನುಜನ್ ಅವರ 'ಗಾದೆಗಳು' ಕ. ವಿ. ವಿ. ದ ಪ್ರಚಾರೋಪನ್ಯಾಸಮಾಲೆಯ ಕೃತಿ. ಇದರಲ್ಲಿ ಗಾದೆಗಳ ಕುರಿತ ವಿವರವಾದ ವಿವೇಚನೆಯಿದೆ. ಜನಪದ ನುಡಿಗಟ್ಟುಗಳು (೧೯೮೧) ಡಾ. ಲಠ್ಠೆ ಹಾಗೂ ವೀರಣ್ಣ ದಂಡೆ ಅವರ ಗ್ರಂಥವಾಗಿದ್ದು ಇದು ಅಭ್ಯಾಸಯೋಗ್ಯವಾಗಿದೆ.

### ಒಗಟುಗಳು

ನಮ್ಮ ಜಾನಪದರು ಹಲವಾರು ಒಗಟುಗಳನ್ನು ಸೃಷ್ಟಿಸಿದ್ದಾರೆ. ಅವು ನಮ್ಮ ನಾಡಿಗರ ಬುದ್ಧಿಯ ಒರೆಗಲ್ಲಿನಂತಿವೆ. ಈ ವಿಷಯವಾಗಿ ಐ. ಬಿ. ಎಚ್ ಪ್ರಕಾಶನದಿಂದ ಪ್ರಕಟವಾದ ಒಗಟುಗಳ ಪುಸ್ತಕ, ಡಾ. ಇಮ್ರಾಪೂರ ಅವರ ಸಾವಿರದ ಒಗಟುಗಳು ಮತ್ತು ಡಾ. ಎಂ. ಎನ್ ವಾಲಿ ಅವರ ಜಾನಪದ ಒಗಟುಗಳು-ಮೊದಲಾದವುಗಳನ್ನು ಗಮನಿಸಬೇಕು. ಜಾನಪದ ಜಗತ್ತು- ಪತ್ರಿಕೆಯ ಸಂಚಿಕೆಗಳಲ್ಲಿ ಅನೇಕ ಒಗಟುಗಳು ಪ್ರಕಟವಾಗಿವೆ. ಒಗಟುಗಳ ಕುರಿತ ವಿಮರ್ಶೆಯೂ ತಕ್ಕಮಟ್ಟಿಗೆ ಬಂದಿದೆ. ಆದರೆ ವಿಜಾಪುರ ಜಿಲ್ಲೆಯ ಒಗಟುಗಳ ಕುರಿತ ಸ್ವತಂತ್ರ ಕೃತಿ ಇದುವರೆಗೂ ಬಾರದಿರುವದು ಖೇದಕರ ಸಂಗತಿ.

### ಒಡಪುಗಳು

ಮಂಗಲ ಪ್ರಸಂಗಗಳಲ್ಲಿ ಸತಿ-ಪತಿಗಳು ಪರಸ್ಪರರ ಹೆಸರು ಹೇಳುವಾಗ ಬಳಸುವ ಚುಟುಕಗಳನ್ನು 'ಒಡಪುಗಳು' ಎಂದು ಕರೆಯಲಾಗುವುದು. ಒಡಪಿಟ್ಟು ಹೆಸರು ಹೇಳು, ಒಡಪಾ ಕಟ್ಟಿ ಹೆಸರು ಹೇಳು, ಒಡಪಾ ಹಾಕಿ ಹೆಸರು ತಗೊ- ಎಂದು ಈಗಲೂ ಹೇಳುವದು ವಾಡಿಕೆ. ಕನ್ನಡ ಒಡಪುಗಳನ್ನು ಕುರಿತು 'ಹೆಸರ ಹೇಳ್ತೇನಿ ಒಡಪಾ ಕಟ್ಟಿ'- ಇದು ಶ್ರೀ ಜ್ಯೋತಿ ಹೊಸೂರ ಅವರ ಪ್ರಥಮ ಕೃತಿ. ಅನಂತರ 'ಉತ್ತರ ಕರ್ನಾಟಕದ ಒಡಪುಗಳು' ಡಾ. ಮಲ್ಲಿಕಾರ್ಜುನ ಲಠ್ಠೆ ಅವರ ಗ್ರಂಥ. ಇವರೆಡರಲ್ಲಿಯೂ ನಮ್ಮ ಜಿಲ್ಲೆಯ ಅನೇಕ ಒಡಪುಗಳು ಬಂದಿವೆ. ಈ ಸಾಲಿಗೆ ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿದ ಶ್ರೀಮತಿ ಲೀಲಾವತಿ ತೋರಣಗಟ್ಟೆಯವರ ಕನ್ನಡ ಒಡಪುಗಳು, ಡಾ. ಎಂ. ಎನ್. ವಾಲಿ ಅವರ

'ಸಿರಿಗನ್ನಡ ಒಡಪುಗಳು'-ಇವನ್ನು ಸೇರಿಸಬೇಕು. 'ಸಿರಿಗನ್ನಡ ಒಡಪುಗಳು'- ಆಗಲೇ ದ್ವಿತೀಯ ಮುದ್ರಣವನ್ನು ಕಂಡುದು ಅದರ ಜನಪ್ರಿಯತೆಗೆ ಸಾಕ್ಷಿ.

ಜಾನಪದ ವಿಮರ್ಶಾಕೃಷಿ ಇತ್ತೀಚಿಗೆ ಬೆಳೆಯುತ್ತಲಿದೆ. ಈ ಕಾರ್ಯದಲ್ಲಿ ಡಾ ಸಿಂಪಿಲಿಂಗಣ್ಣ ಅವರ ಪಾತ್ರ ಹಿರಿದಾಗಿದೆ. ಅವರ 'ಜನಾಂಗದ ಜೀವಾಳ'ದಲ್ಲಿ ಜಾನಪದ ಸಾಹಿತ್ಯದ ನಿರೂಪಣೆ ಹಾಗೂ ವಿಮರ್ಶೆ ಸೊಗಸಾಗಿ ಬಂದಿದೆ. ಇದು ಜಾನಪದ ಸತ್ವವನ್ನೂ ಮೈಗೂಡಿಸಿಕೊಂಡ ಶೈಲಿಯ ನಿಲುಗನ್ನಡಿ. ಶ್ರೀ ಸಿಂಪಿಯವರ 'ಗರತಿಯ ಬಾಳು'- ಹಾಡು, ಪಾಡುಗಳೊಳಗಿಂದ ಹಾದು ಬಂದ ಹೆಣ್ಣಿನ ಹಿರಿಮೆಯನ್ನು ಎತ್ತಿತೋರಿಸುವ ಕೃತಿ. 'ಬೆಟ್ಟದ ಹೊಳೆ'ಕಾದಂಬರಿಯಲ್ಲಿ ಶ್ರೀಯುತರು ಬಯಲಾಟಗಳ ವೈಶಿಷ್ಟ್ಯವನ್ನು ಎತ್ತಿ ತೋರಿಸಿದ್ದಾರೆ. ಶ್ರೀ. ಸಿಂಪಿಲಿಂಗಣ್ಣನವರ 'ತಲೆಮಾರಿನ ಹಿಂದೆ' ಹಿಂದಿನ ತಲೆಮಾರಿನ ಜಾನಪದ ಜೀವನದ ಚಿತ್ರಣಗಳನ್ನೊಳಗೊಂಡಿದ್ದು ಗೊರೂರ ಅವರ ಕೃತಿಯ ನೆನಪು ತರುವಂತಹದು. ಅವರದೇ ಕೃತಿಯಾದ 'ನಾಟ್ಯ ಸಾಧನೆ'- ಹಳ್ಳಿಯ ಬಯಲಾಟಗಳು ವೃತ್ತಿರಂಗ ಭೂಮಿಗೆ ಹೇಗೆ ಪರಿವರ್ತನಗೊಂಡವೆಂಬುದರ ಸಾದ್ಯಂತ ನಿರೂಪಣೆಯನ್ನೊಳಗೊಂಡಿದೆ. 'ಹೆಡಿಗೆ ಜಾತ್ರೆ' ಕೃತಿಯ ಒಂದು ಲೇಖನವು ಜಾನಪದ ಚಿಕಿತ್ಸೆಗಾಗಿ ಮೀಸಲಾಗಿದೆ. ಉತ್ತರ ಕರ್ನಾಟಕದ ಜನಪದ ಕಥೆಗಳು, ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪರಿದರ್ಥದ ಚಲಕ ಮೊದಲಾದ ಕೃತಿಗಳು ಅವರ ಜಾನಪದ ವಿಮರ್ಶಾಕೃಷಿಗೆ ಸಾಕ್ಷಿಯಂತಿವೆ. ಜಾನಪದವು ಅವರಲ್ಲಿ ರಕ್ತಗತವಾಗಿದೆ. ಅವರ ಇತ್ತೀಚಿನ 'ನೂರು ಗಡಿಗೆ ಒಂದು ಬಡಿಗೆ'ಯಲ್ಲಿ ಜಾನಪದ ನುಡಿಗಟ್ಟುಗಳ ಬೆಡಗನ್ನು ನೋಡಬೇಕು. ಜಾನಪದ ಜಗತ್ತು- ಸಂಚಿಕೆಗಳಲ್ಲಿ ಅವರ ಹಲವು ವಿಮರ್ಶಾತ್ಮಕ ಬಿಡಿಲೇಖನಗಳು ಪ್ರಕಟವಾಗಿವೆ. ನಾಡಿನ ಹಲವಾರು ಪ್ರಮುಖ ಪತ್ರಿಕೆಗಳಲ್ಲಿ ಹಾಗೂ ಅಭಿನಂದನ ಗ್ರಂಥಗಳಲ್ಲಿ ಅವರು ಬರೆದ ಲೇಖನಗಳು ಜಾನಪದ ಸಾಹಿತ್ಯಕ್ಕೆ ಅವರ ಕೊಡುಗೆಯಾಗಿ ನಿಂತಿವೆ. ಹೀಗಾಗಿ ಅವರು 'ಜಾನಪದ ನಿಧಿ' ಎನಿಸಿದ್ದಾರೆ.

'ಉತ್ತರ ಕರ್ನಾಟಕದ ಜನಪದ ನಂಬಿಕೆಗಳು'- ಇದು ಡಾ. ಲಠ್ಠೆಯವರ ಗ್ರಂಥ. ಇದರಲ್ಲಿ ಉತ್ತರ ಕರ್ನಾಟಕದ ೯೦೨ ನಂಬಿಕೆಗಳ ವಿವರಣೆಯಿದೆ. ಕ. ವಿ. ವಿ. ದ ಕನ್ನಡ ಅಧ್ಯಯನ ಪೀಠವು ೧೯೭೭ ರಿಂದ ಪ್ರತಿವರ್ಷ 'ಅಖಿಲ ಕರ್ನಾಟಕ ಜಾನಪದ ಸಾಹಿತ್ಯ ಸಮ್ಮೇಳನ'-ಗಳನ್ನು ನಡೆಸುತ್ತ ಬಂದಿದ್ದು ಅದರ ಸಂಸ್ಮರಣ ಸಂಪುಟಗಳು 'ಜಾನಪದ ಸಾಹಿತ್ಯ ದರ್ಶನ' ಎಂಬ ಹೆಸರಿನಿಂದ ಪ್ರಕಟವಾಗುತ್ತ ಬಂದಿವೆ. ಡಾ. ಎಂ. ಎಸ್. ಸುಂಕಾಪೂರ ಅವರ 'ಜೀವನ ಜೋಕಾಲಿ'ಯ ಒಂಬತ್ತು ಸಂಪುಟಗಳು ಉತ್ತರ ಕರ್ನಾಟಕದ ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳ ಕೊಡುಗೆಗೆ ಸಾಕ್ಷಿಯಾಗಿ ನಿಂತಿವೆ. ಇವುಗಳಲ್ಲಿ ವಿಜಾಪುರ ಜಿಲ್ಲೆಯ ಸಾಹಿತ್ಯವು ಪ್ರಕಟವಾಗಿರುವದನ್ನು ಗುರುತಿಸಬಹುದಾಗಿದೆ.

ವಿಜಾಪುರ ಜಿಲ್ಲೆಯ ಡಾ. ಬಿ. ಎಸ್. ಗದ್ದಗಿಮಠ ಅವರು ಶ್ರೀ ಕೆ. ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಜಾನಪದ ಗೀತೆಗಳು' ಎಂಬ ಮಹಾಪ್ರಬಂಧವನ್ನು

ಸಿದ್ಧಪಡಿಸಿ ಕ್ರಿ. ಶ. ೧೯೫೫ರಲ್ಲಿ ಕ. ವಿ. ವಿ. ದ ಡಾಕ್ಟರೇಟ ಪಡೆದರು. ಇದು ಕರ್ನಾಟಕದಲ್ಲಿ ಜಾನಪದ ಸಾಹಿತ್ಯದ ಕುರಿತ ಪ್ರಥಮ ಪಿಎಚ್. ಡಿ. ಪ್ರಬಂಧ. ಅವರ ಈ ಕಾರ್ಯ ಸ್ತುತ್ಯವಾದುದು. ನಮ್ಮ ಜಿಲ್ಲೆಗೆ ಕೀರ್ತಿ ತರುವಂತಹದು. ಶ್ರೀಯುತರು ಉತ್ತರ ಕರ್ನಾಟಕವನ್ನೆಲ್ಲ ಸುತ್ತಾಡಿ ಸುಮಾರು ಒಂದು ಲಕ್ಷ ಹಾಡುಗಳನ್ನು ಸಂಗ್ರಹಿಸಿದ್ದಾಗಿ ತಿಳಿದುಬರುತ್ತದೆ. ಆದರ ಬಹುಭಾಗ ಇನ್ನೂ ಪ್ರಕಟವಾಗದಿರುವದು ದುರ್ದೈವದ ಸಂಗತಿ. ಡಾ. ಗದ್ದಗಿಮಠ ಅವರು ೧. ನಾಲ್ಕು ನಾಡಪದಗಳು (೧೯೫೨) ೨. ಕಂಬಿಯ ಪದಗಳು (೧೯೫೫) ೩. ಜನತಾ ಗೀತೆಗಳು (೧೯೫೬) ೪. ಕುಮಾರ ರಾಮನ ದುಂದುಮೆ. (೧೯೫೯) ೫. ಮಲ್ಲಾ-ಮಲ್ಲಾಣಿ(೧೯೫೯) ಹಾಗೂ ೬. ಲೋಕ ಗೀತೆಗಳು (೧೯೬೩) ಹೀಗೆ ಆರು ಜಾನಪದ ಸಂಕಲನಗಳನ್ನು ಹೊರತಂದು ಉಪಕಾರಮಾಡಿದ್ದಾರೆ. ಅವರ ಅಕಾಲಿಕ ನಿಧನ ನಾಡಿಗೆ ತುಂಬಲಾರದ ಹಾನಿ.

ಜಾನಪದ ಮಕ್ಕಳ ಸಾಹಿತ್ಯ ಕುರಿತು ಕ. ವಿ. ವಿ. ದ ಪ್ರಚಾರೋಪನ್ಯಾಸ ಮಾಲೆಯಿಂದ ಡಾ. ಸಂಗಮೇಶ ಬಿರಾದಾರ ಅವರ 'ಜನಪದದಲ್ಲಿ ಮಕ್ಕಳ ಸಾಹಿತ್ಯ' ಪುಸ್ತಿಕೆ ಪ್ರಕಟವಾಗಿದೆ. ಇದೇ ಮಾಲೆಯಲ್ಲಿ ಜಾನಪದ ಸಾಹಿತ್ಯದ ವಿವಿಧ ಮುಖಗಳನ್ನು ಪರಿಚಯಿಸುವ ನಾಲ್ಕಾರು ಚಿಕ್ಕಪುಸ್ತಕಗಳು ಪ್ರಕಟವಾಗಿವೆ. ವಿಜಾಪುರದ 'ಶಿಶುಸಂಗಮೇಶ' ಅವರು ಮಕ್ಕಳ ಜಾನಪದ ಆಟಗಳು ಹಾಗೂ ಮಕ್ಕಳ ಜಾನಪದ ಸಾಹಿತ್ಯ ಕುರಿತ ಶ್ರಮಿಸಿದ್ದಾರೆ. 'ಜಾನಪದ ಪೀಡೆಯ ಹಾಡುಗಳು' ಈ ಜಿಲ್ಲೆಯ ವೈಶಿಷ್ಟ್ಯವನ್ನು ಸಾರುತ್ತವೆ. ಈ ಸಾಹಿತ್ಯ ಪರಿಚಯಿಸುವ ಡಾ. ಎಂ. ಬಿ. ಬಿರಾದಾರ ಅವರ ಲೇಖನ(ಸುಧಾ ೫ ಅಗಸ್ಟ್ ೧೯೮೩) ನೋಡಬೇಕು. 'ಆಯ್ದ ಜನಪದ ಕಥನಗೀತೆಗಳು' ಡಾ. ಬಿ. ಬಿ. ಹೆಂಡಿಯವರ ಸಂಪಾದಿತ ಗ್ರಂಥ. ಇದರಲ್ಲಿರುವ ಒಟ್ಟು ಮೂರು ಗೀತೆಗಳಲ್ಲಿ ಎರಡು ವಿಜಾಪುರ ಜಿಲ್ಲೆಗೆ ಸೇರಿದವುಗಳು. 'ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ'-ವು ಡಾ. ಎಂ. ಎಂ. ಕಲಬುರ್ಗಿಯವರ ಕೃತಿಯಾಗಿದ್ದು ವಿಶೇಷವಾಗಿ ವಿಜಾಪುರ ಜಿಲ್ಲೆಯ ಜನಪದ ಸಾಹಿತ್ಯದ ವಿವರಣೆಯನ್ನು ಒಳಗೊಂಡಿದೆ. ಡಾ. ನಿಂಗಣ್ಣ ಸಣ್ಣಕ್ಕಿ ಅವರು ಕರ್ನಾಟಕದ ಗೊಂದಲಿಗರ ಕುರಿತು ಡಾಕ್ಟರೇಟ ಪಡೆದಿದ್ದಾರೆ.

ಜಾನಪದ ಸಂಗೀತ, ಜಾನಪದ ನೃತ್ಯ, ಜಾನಪದ ವಾದ್ಯ, ಜಾನಪದ ಚಿತ್ರಕಲೆ, ಜಾನಪದ ವೇಷಭೂಷಣಗಳು ಮೊದಲಾದ ವಿಷಯಗಳನ್ನು ಕುರಿತು ಇನ್ನೂ ತೃಪ್ತಿಕರವಾಗಿ ಅಧ್ಯಯನ ನಡೆಯಬೇಕಾಗಿದೆ. ನಮ್ಮ ಜಿಲ್ಲೆಯವರು ಇತ್ತ ಗಮನಹರಿಸಬೇಕು.

೧೯೮೦ರ ಅಕ್ಟೋಬರ ೨ರಂದು 'ಕರ್ನಾಟಕ ಜಾನಪದ ಟ್ರಸ್ಟ್' ತನ್ನ ಮೊದಲ ವರ್ಷದ ಹುಟ್ಟುಹಬ್ಬದ ನಿಮಿತ್ತ ಹತ್ತು ಜಾನಪದ ಕಲಾವಿದರನ್ನು ಸನ್ಮಾನಿಸಿತು. ಅದರಲ್ಲಿ ೧. ಡಾ. ಸಿಂಪಿಲಿಂಗಣ್ಣ ೨. ಶ್ರೀ ಮಾದಣ್ಣ ಓಲೇಕಾರ ೩. ಶ್ರೀ ಶರಣಕಲ್ಲಪ್ಪ ವಾಲಿ ಈ ಮೂವರೂ ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನವರು. ಇದೊಂದೇ ಅಂಶ ವಿಜಾಪುರ ಜಿಲ್ಲೆಯ ಜಾನಪದ ಸಾಹಿತ್ಯ ಶ್ರೀಮಂತವಾಗಿರುವದಕ್ಕೆ ಸಾಕ್ಷಿ. ಜಾನಪದ ನಿಧಿ ಎಂದು ಖ್ಯಾತನಾಮರಾದ ಶ್ರೀ ಸಿಂಪಿಲಿಂಗಣ್ಣ ಅವರನ್ನು ಕುರಿತು ಸಂಶೋಧನ ಮಹಾಪ್ರಬಂಧ ಮಂಡಿಸಿ ಕ. ವಿ. ವಿ.ದಿಂದ ಡಾಕ್ಟರೇಟ್‌ಪಡೆದ ಶ್ರೀ ಎಂ. ಎನ್. ವಾಲಿ ಅವರೂ ವಿಜಾಪುರ

ಜಿಲ್ಲೆಯವರು. ಇದು ಕರ್ನಾಟಕದಲ್ಲಿ ಶಿಕ್ಷಕರೊಬ್ಬರ ಕುರಿತು ಬರೆದ ಮಹಾಪ್ರಬಂಧವೆಂಬುದು ಉಲ್ಲೇಖನೀಯ. ಈ ಜಿಲ್ಲೆಯ ಜಾನಪದ ರಥವನ್ನು ಮುನ್ನಡೆಸುವ ಭಾರ ನಮ್ಮೆಲ್ಲರದು. ಈ ಪ್ರಬಂಧವನ್ನು ಇಲ್ಲಿ ಮಂಡಿಸಲು ಅವಕಾಶವಿತ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪದಾಧಿಕಾರಿಗಳಿಗೆಲ್ಲ ಹತ್ತು ಬಳ್ಳಚ್ಚಿ ಶರಣೆಂದು ವಿರಮಿಸುವೆ.

'ಕರ್ನಾಟಕ ಜನಪದಕ್ಕೆ ಜಯವಾಗಲಿ

* * * * *

# ಜಲ ಜಾನಪದ

ಡಾ. ಎಂ. ಜಿ. ಬಿರಾದಾರ.

ಪಂಚಭೂತಗಳಲ್ಲೊಂದಾದ ಜಲಕ್ಕೂ ಜೀವಕ್ಕೂ ಅವಿನಾಭಾಜ್ಯ ಸಂಬಂಧವಿದೆ. ಜೀವೋತ್ಪತ್ತಿ ಜಲದಲ್ಲೆ ಎಂದು ವಿಜ್ಞಾನ ಹೇಳುತ್ತದೆ. ಇಡೀ ಜಂಗಮ ಜಗತ್ತಿನ ಜೀವನಾಡಿ ಈ ಜಲ. ಜನಪದರಿಗೆ ಜಲ ಪರಮಪೂಜ್ಯ. ಅದನ್ನು 'ಗಂಗಾಮಾತೆ' ಎಂದು ಪೂಜಿಸುತ್ತಾರೆ. ನೆಲ ಜಲ ಸಂಪರ್ಕಿಸುವ ನಿಸರ್ಗ ಸಹಜ ನದೀತೀರದಲ್ಲಿ ಮಾನವ ಬದುಕು ಮೊಳಕೆಯೊಡೆದು ಬೇರೂರಿತು. ಪ್ರಕೃತಿ-ಸಂಸ್ಕೃತಿ, ನಾಗರೀಕತೆಗಳು ಕುಡಿಯೊಡೆದು ದಾಂಗುಡಿ ಇಟ್ಟವು. ಇಂದೂ ಸಹಿತ 'ನೀರಿಲ್ಲದ್ದು ಊರಲ್ಲ, ನಾರಿ ಇಲ್ಲದ್ದು ಸಂಸಾರ ಅಲ್ಲ' ಎಂದು ಹೇಳುತ್ತಾರೆ. ನೀರೇ ಇರದಿದ್ದರೆ ಸಸ್ಯ ಪ್ರಪಂಚವೇ ಇಲ್ಲ. ಜೀವ ಜಗತ್ತಿಲ್ಲ.

ಬೆಳೆವ ಜನವಸತಿಗೆ ನದೀತೀರದಲ್ಲಿ ಅವಕಾಶ ಸಿಗದಿದ್ದಾಗ ಮನುಷ್ಯ ನಿಸರ್ಗ ಸಹಜ ಕಣಿವೆ, ಹೊಂಡ ಮೊದಲಾದ ಜಲಾಶಯಗಳನ್ನು ಹುಡುಕಿಕೊಂಡು ಹೋದ. ಅವೂ ಸಾಲದಾಗ ಕೃತ್ರಿಮ ಕೆರೆ ನಿರ್ಮಿಸಿಕೊಂಡ, ಒಣಗಿದ ಹಳ್ಳಗಳಲ್ಲಿ ಒರತೆ ತೋಡಿದ; ಆಳವಾದ ಬಾವಿಗಳನ್ನು ಅಗಿದುಕೊಂಡ, ಅವೂ ನಿರುಪಯೋಗಿಯಾದಾಗ ಬಾರದ ಮಳೆರಾಯನನ್ನೇ ಬೇಡಿಕೊಂಡ. ಮಳೆರಾಯ ಮೂರು ಲೋಕದಲ್ಲಿ ಸರ್ವಶಕ್ತ. ಅವನನ್ನು 'ರಾಜರ ರಾಜ, ಮಳೆರಾಜ!' ಎಂದು ಪೂಜಿಸಿದರು.

> ''ಹರಿವ ಹಾವಿನ ಗಂಡ, ಉರಿವ ಕಿಚ್ಚಿನ ಗಂಡ
>
> ಮೂರೂರ ಗಂಡ ಮಳೆರಾಯ! ತಡದರ
>
> ಮಾಯದ್ವೆಂಡರನ ಬಿಡುವೂರ''

ಎಂದು ಹೊಗಳಿ ಹಾಡಿದರು. 'ಬಾರಪ್ಪ ಮಳೆರಾಯ, ಬಾರದೆಲ್ಲಿಗೆ ಹ್ವಾದಿ' ಎಂದು ಕರೆದರು.

ಇಂದೂ ಮನುಷ್ಯ ನೀರಿನ ಶೋಧದಲ್ಲಿ ಸದಾ ತೊಡಗಿದ್ದಾನೆ. ಭೂಮಿಯ ಮೇಲಿನ ಹೊಳೆ ಹಳ್ಳಗಳನ್ನೆಲ್ಲ ಆಗಿಮಾಡಿ, ಅಂತರ್‌ಜಲಕ್ಕೆ ಕೈ ಇಕ್ಕಿ ಅದನ್ನೂ ಮುಗಿಸಿಬಿಡುವ ಹಂತದಲ್ಲಿದ್ದಾನೆ. ಅವನ ದಾಹಕ್ಕೆ ಕೊನೆ ಇಲ್ಲದಾಗಿದೆ. ಈ ವೈಜ್ಞಾನಿಕ ಯುಗದಲ್ಲಿಯೂ ನೀರಿಗಾಗಿ ಮತ್ತೆ ಆಕಾಶಕ್ಕೇ ಬಾಯ್ದೆರೆದಿದ್ದಾನೆ. ರಾಜ್ಯಗಳ ನದೀ ನೀರಿನ ತಂಟೆ, ಬೀದಿಗಳಲ್ಲಿ ನಳದ ನೀರಿನ ಜಗಳ, ವ್ಯಕ್ತಿಗಳು ನಿತ್ಯ ಸಂಘರ್ಷಕ್ಕಿಳಿದಿದ್ದಾರೆ. ಇದರಿಂದಾಗಿ ಸಂಸ್ಕೃತಿ ಸಾಯಹತ್ತಿದೆ. ನಾಗರೀಕತೆ ನಿಂತು ನಾರಹತ್ತಿದೆ.

ನೀರಿನ ಕೊರತೆಯ ಕಾರಣಗಳು ಗೊತ್ತಿದ್ದೂ ಮನುಷ್ಯ ಅದನ್ನು ನಿಯಂತ್ರಿಸದ ಅಸಹಾಯಕ ಸ್ಥಿತಿಯಲ್ಲಿದ್ದಾನೆ. ಆಗ ನೀರಿದ್ದಲ್ಲಿ ಊರು ಕಟ್ಟುತ್ತಿದ್ದರು. ಈಗ ಊರಿದ್ದಲ್ಲೇ ನೀರು ಬರಬೇಕು! ಭೂಮಿಯನ್ನು ಕೊರೆವ ಬೋರು, ಕೃತ್ರಿಮ ಜಲಾಶಯ, ಕೃತಕ ಮಳೆ ಯಾವುದೂ ಯಶಸ್ವಿಯಾಗಿ ಅವನ ತೃಷೆ ಹಿಂಗಿಸುತ್ತಿಲ್ಲ. ಬೆಳೆಯುತ್ತಿರುವ ಜನಸಂಖ್ಯೆ, ಮತ್ತು ನೀರಿನ ವೈವಿಧ್ಯಮಯ ಅಪಾರ ಬಳಕೆಯಿಂದಾಗಿ ಹೊಳೆ-ಹಳ್ಳಗಳನ್ನು

ಗಟಾರಗಳನ್ನಾಗಿಸಿದ್ದಾನೆ. ಜೀವದಾಯಿ ಗಂಗೆಗೆ ವಿಷ ಬೆರೆಸಿದ್ದಾನೆ. ನೀರಿನಿಂದ ಬೆಳೆದ ಪ್ರಕೃತಿ-ಸಂಸ್ಕೃತಿ, ನಾಗರೀಕತೆಗಳು ನೀರಿಲ್ಲದೇ ಒಣಗಿ ಹೋಗುವ ಸ್ಥಿತಿಯಲ್ಲಿವೆ. 'ಪಾಪಿಗರ ಪಾಪಮಂ ತೊಳೆವ ಗಂಗೆಗೆ ಪಾಪಲೇಪನವಾಯ್ತೇ' ಎಂಬ ಕವಿವಾಣಿ ಹುಸಿಯಾಗಿ ನದಿಗಳೆಲ್ಲ ಪಾಪದ ಕೂಪವಾಗಿವೆ. ವಿಷವಾಹಿನಿಗಳಾಗಿವೆ. ಅವುಗಳ ಮಾಲಿನ್ಯ ತೊಳೆವ ಹುಚ್ಚು ಹವ್ಯಾಸದಲ್ಲಿ ಮನುಷ್ಯ ಕೋಟಿ ಕೋಟಿ ಹಣ ಖರ್ಚು ಮಾಡುತ್ತಿದ್ದಾನೆ.

ಜನಪದರು ನೀರನ್ನು 'ಹೆಣ್ಣು', 'ಶಕ್ತಿ' ಎಂದು ಗುರುತಿಸುತ್ತಾರೆ. ಎಲ್ಲ ನದಿಗಳ ಹೆಸರುಗಳು ಸ್ತ್ರೀಲಿಂಗ ವಾಚಕ, 'ಗಂಗೆ' 'ಭಾಗೀರಥಿ' ಮಾತ್ರ ಜನಪದರು ನೀರಿಗೆ ಬಳಸುವ ಪ್ರಮುಖ ಹೆಸರುಗಳು'ಗಂಗಾಜಲ' ವೆಂಬ ದ್ವಿರುಕ್ತಿ ಪ್ರಯೋಗ ಜನಪದರ ಬಾಯಲ್ಲಿದೆ. ಕೃಷ್ಣಾ, ಕಾವೇರಿ, ಸಿಂಧು, ಯಮುನಾ, ಗೋದಾವರಿ ಮುಂತಾಗಿ ಎಲ್ಲ ನದಿಗಳ ಹೆಸರುಗಳ ಹೆಣ್ಣುಮಕ್ಕಳಿಗೆ ಇಟ್ಟಿರುವುದನ್ನು ಗಮನಿಸಬಹುದಾಗಿದೆ

ನೀರು ಪವಿತ್ರ, ಅದರಲ್ಲಿ ನದಿಗಳ ನೀರನ್ನು ಇನ್ನೂ ಪವಿತ್ರವೆಂದು ಪರಿಗಣಿಸಲಾಗುತ್ತದೆ. ಅದು ಸ್ಪರ್ಶಮಾತ್ರದಿಂದ ಅನ್ಯರನ್ನು ಪವಿತ್ರಗೊಳಿಸುತ್ತದಂತೆ. ಅದಕ್ಕಾಗಿ ನದಿಗಳಲ್ಲಿ ಸ್ನಾನ, ಪುಣ್ಯಸ್ನಾನ ಹುಣ್ಣಿಮೆ-ಅಮಾವಾಸ್ಯೆ ಮತ್ತು ಗ್ರಹಣಾದಿ ದಿನಗಳಲ್ಲಿ ಜನರು ನದಿಗಳಲ್ಲಿ ಸಮೂಹ ಸ್ನಾನ ಮಾಡುತ್ತಾರೆ. ಇದರಿಂದ ಪಾಪ ಪರಿಹಾರವಾಗುತ್ತದೆಂಬುದು ಜನಪದರ ನಂಬುಗೆ.

ಜಲವಿಲ್ಲದೆ ಜೀವನ ಸಾಗದೆಂಬುದನ್ನರಿತ ಮಾನವ ಅದನ್ನು 'ಪೂಜ್ಯ' ಎಂದು ಪರಿಗಣಿಸುವುದರ ಜೊತೆಗೆ, ಅದರ ಅದ್ಭುತ ಶಕ್ತಿಗೆ ಅಂಜಿ ಬಲಿಗಳನ್ನು ಕೊಡಹತ್ತಿದ. ಪ್ರಾಣಿಬಲಿಯಷ್ಟೇ ಅಲ್ಲದೆ, ಮಾನವ ಬಲಿಯನ್ನು ಕೊಡುವ ಸಂಪ್ರದಾಯಗಳು ಬೆಳೆದು ಬಂದವು. (ಕಲ್ಲನ ಕೇರಿ ಮಲ್ಲನಗೌಡನ ಕಥೆ) ಈ ಬಲಿ ಮನುಕುಲದ ಕಲ್ಯಾಣಕ್ಕೆ ಎಂಬ ಸಾಂತ್ವನವನ್ನು ಸಮಾಜ ಪ್ರೋತ್ಸಾಹಿಸಿದಂತಿದೆ. ಈಗಲೂ ಅಣೆಕಟ್ಟು ಮೊದಲಾದ ಜಲಾಶಯಗಳನ್ನು ಕಟ್ಟುವಾಗ ಮಾನವ ಬಲಿ ಕೊಡುತ್ತಾರೆಂಬ ವದಂತಿಗಳಿವೆ. ಬಾವಿ, ಕೆರೆಗಳಲ್ಲಿ ಯಾರಾದರೂ ಆಕಸ್ಮಿಕವಾಗಿ ಬಿದ್ದು ಸತ್ತರೂ ಬಲಿಕೊಡದ್ದಕ್ಕೆ ಅದು 'ಆರ' ತೆಗೆದುಕೊಂಡಿತು ಎಂದೇ ಜನರ ಕಲ್ಪನೆ. ಬಾವಿ ತೋಡಿಸಿದಾಗ ಕೆಲವರು ಇಂದೂ ಕುರಿ, ಹೋತಿನ ಬಲಿ ಕೊಡುವುದನ್ನು ಕಾಣುತ್ತೇವೆ. ಸಾಮೂಹಿಕ ಜಲಾಶಯ ಕಟ್ಟುವಾಗ ಏನಾದರೂ ದುರಂತ ಸಂಭವಿಸಿದಾಗಲೂ ಇದೆಲ್ಲ ಬಲಿಕೊಡದ್ದಕ್ಕೇ ಎಂದು ಜನರಾಡಿಕೊಳ್ಳುತ್ತಾರೆ.

ಮನುಷ್ಯರಿಗೆ ಪ್ರಾಣಿಗಳಿಗೆ ನೀರನ್ನು ನೀಡಿದ ಪುಣ್ಯ ಬಹಳ ದೊಡ್ಡದೆಂಬ ನಂಬುಗೆ, ನೀರಿಲ್ಲದ ಈ ಕಾಲದಲ್ಲಿಯೂ ಜನಪದರಲ್ಲಿ ಜೀವಂತವಾಗಿದೆ. ನೀರನ್ನು ಬೇಡಿ ಬಂದವರನ್ನು ಹಾಗೇ ಕಳಿಸುವುದು ಮಹಾಪಾಪ ಎಂದು ಹೇಳುತ್ತಿದ್ದರು. ಸಂತೆ ಜಾತ್ರೆಗೆ ಬೇಕಾದಷ್ಟು ಜನ ಬಂದರೂ ಊರಿನ ಯಾವ ಮನೆಯಲ್ಲೂ ಅವರಿಗೆ ನೀರು ಸಿಗುತ್ತಿತ್ತು. ಇಂಥ ಸಂದರ್ಭಗಳಲ್ಲಿ ಮನೆಯ ಕಟ್ಟೆಯ ಮೇಲೆ ಹರಿವಿಯನ್ನೋ ರಂಜಣಿಗೆಯನ್ನೋ ಇಟ್ಟುಕೊಂಡು ಮನೆಯ ಮುದುಕಿ ಇಲ್ಲವೆ ಮಕ್ಕಳು ಬಂದವರಿಗೆ ನೀರು ನೀಡಲೆಂದೇ ಕುಳಿತಿರುತ್ತಿದ್ದರು.

ನೀರಡಿಸಿ ಬಂದ ದನಕರುಗಳಿಗೆ 'ಹ್ಯಾಳ' 'ಡೋಣಿ' ಗಳ ವ್ಯವಸ್ಥೆ ಮಾಡಿ ಯಾವಾಗಲೂ ಅವುಗಳನ್ನು ತುಂಬಿಯೇ ಇಡುತ್ತಿದ್ದರು. ಬಾವಿಗೆ ನೀರಿಗೆ ಬಂದವರು ಡೋಣಿಯಲ್ಲಿ ನೀರಿರದಿದ್ದರೆ ಮೊದಲು ಅದನ್ನು ತುಂಬಿ, ತಮ್ಮ ಮನೆಗೆ ನೀರು ಒಯ್ಯುತ್ತಿದ್ದರು. ತಾಯಿಲ್ಲದ ತವರಿಗೆ ಬಂದು ಹೋಗುವ ಹೆಣ್ಣುಮಗಳ ಸ್ಥಿತಿಯನ್ನು 'ನೀರಿಲ್ಲದ ಕೆರೆಗೆ ಕರು ಬಂದು ತಿರುಗುವ' ಕರುಣಾಜನಕ ಶಬ್ದ ಚಿತ್ರ ಬಿಡಿಸಿ ಬಿಂಬಿಸುತ್ತಾಳೆ, ಜನಪದ ಗರತಿ. ಕಾಗೆ, ಗುಬ್ಬಿ ಮೊದಲಾದ ಹಕ್ಕಿ ಪಕ್ಕಿಗಳಿಗೆ ಮನೆಯ ಮುಂದಿನ ಮರಕ್ಕೊ ಗೋಡೆಯ ಗೂಟಕ್ಕೊ 'ನೆಲುವು' ತೂಗೂಹಾಕಿ ಅದರಲ್ಲಿ 'ಪರ್‍ನಾಣ' (ಮಣ್ಣಿನ ಅಗಲ ಪಾತ್ರೆ) ಇಟ್ಟು ನೀರು ಹಾಕಿರುತ್ತಿದ್ದರು. ಅವು ಸರಿಯಾದ ವೇಳೆಗೆ ಬಂದು ಕುಡಿದು ಹೋಗುತ್ತಿದ್ದವು.

ಊರಿಂದೂರಿಗೆ ದೂರದ ಹೊಲಗಳಿಗೆ ಹೋಗುವವರ ಸೌಲಭ್ಯಕ್ಕಾಗಿ 'ಅರವಟ್ಟಿಗೆ' ಇಡುವ ಸಂಪ್ರದಾಯ ಎಲ್ಲಾ ಹಳ್ಳಿಗಳಲ್ಲಿತ್ತು. ಊರವರು ಅದಕ್ಕಾಗಿಯೇ ಜಂಗಮರಿಗೆ ಒಂದು ಜಮೀನನ್ನೇ ಬಿಟ್ಟುಕೊಟ್ಟಿರುತ್ತಿದ್ದರು. ಬೇಸಿಗೆಯಲ್ಲಿ ಹಾದಿಹೋಕರಿಗೆ ನೀರು ನೀಡುವುದೇ ಅವರ ಕೆಲಸ. 'ಅರವಟ್ಟಿಗೆ ಹೊಲ' ಎಂದು ಇಂದೂ ಹಳ್ಳಿಗಳಲ್ಲಿ ಹೇಳುತ್ತಾರೆ. ಉಳ್ಳವರು ಬಾವಿ ಕೆರೆ ಕಟ್ಟಿಸುವುದನ್ನು 'ಧರ್ಮ'ದ ಕಾರ್ಯವೆಂದು ಮಾಡುತ್ತಿದ್ದರು. 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು'......' ಎಂಬ ಲಕ್ಷ್ಮೀಧರಾಮಾತ್ಯನ ಶಾಸನವನ್ನು ನೆನೆಯಬಹುದು. ವ್ಯಕ್ತಿಯ ಹೆಸರಿನ ಕೆರೆ ಬಾವಿಗಳು ಊರೂರಿಗೆ ಕಾಣದೊರೆಯುತ್ತವೆ.

ನೀರನ್ನು ಕುರಿತ ಹಲವಾರು ಕಲ್ಪನೆಗಳು, ಐತಿಹ್ಯಗಳು ಪವಾಡಗಳಾಗಿ ಪುರಾಣಕಾವ್ಯಗಳಲ್ಲಿ ಉಳಿದುಕೊಂಡು ಬಂದಿವೆ. ಜಲಕನ್ನೆಯರ ಕಲ್ಪನೆ ಹಲವಾರು ಜನಪದ ಕಥೆಗಳಲ್ಲಿ ಕೇಳಿಬರುತ್ತದೆ. ಬಾವಿಗಳಲ್ಲಿ ಹೊಂಡಗಳಲ್ಲಿ ಜಕಣಿಯರು ಇರುವುದನ್ನು ಹಲವಾರು ಹಳ್ಳಿಗರು ಇಂದೂ ನಂಬುತ್ತಾರೆ.

ಅಕ್ಕ ತಂಗ್ಯಾರಾಟ ಅಕ್ಯಾಗ ಗೋದ್ಯಾಗ

ಜಕಣ್ಯಾರ ಆಟ ಜಲದಾಗ! ಹಳಕಟ್ಟಿ

ಈರಣ್ಣ ನಿನ್ನಾಟ ಹಲಗ್ಯಾಗ!

'ಜಕಣೀ ಬಾವಿ' ಎಂಬ ಹೆಸರಿನ ಬಾವಿಗಳು ಬಹಳಷ್ಟು ಹಳ್ಳಿಗಳಲ್ಲಿ ಇರುವುದನ್ನು ನೆನೆಯಬೇಕು. ಈ ಜಲಕನ್ನೆಯರು ಒಳಿತಿಗೂ ಕೆಡುಕಿಗೂ ಕಾರಣರಾದುದನ್ನು ಹಲವಾರು ಐತಿಹ್ಯಗಳು ಪುಷ್ಟೀಕರಿಸುತ್ತವೆ. ಜಲದೇವತೆಯರನ್ನು ಕುರಿತು ಎಷ್ಟೋ ಕಾವ್ಯಗಳಲ್ಲಿ ಪ್ರಸ್ತಾಪಗಳಿವೆ. ಆಧುನಿಕ ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' ದಲ್ಲಿ ಜಲದೇವತೆಗಳ ಉಲ್ಲೇಖವಿದೆ.

ಗ್ರಹಣದ ಗಳಿಗೆಯಲ್ಲಿ, ಪುಣ್ಯಸ್ನಾನದ ಕಾಲದಲ್ಲಿ ನೀರಲ್ಲಿ ನಿಂತು ಜಪತಪ ಮಾಡುವುದನ್ನು ಇಂದೂ ಕಾಣುತ್ತೇವೆ. ನೀರಲ್ಲಿ ತಪ ಮಾಡುವುದನ್ನು ಜನಪದ ಸಾಹಿತ್ಯವೂ ಹೇಳುತ್ತದೆ.

ಯಾರೂ ಇಲ್ಲವೆಂದು ನೀರ ಮುಣುಗಲು ಹ್ವಾದೆ

ನೀರಾಗ ನನಗುರುವು ತಪ ನಿಂತ! ಹೇಳ್ಯಾನ ನಾ

ನಿರತಿನ ಮಗಳ ತಿರಗವ್ವ!!

ನೀರ ಮೇಲೆ ನಡೆದು ನದಿ ದಾಟಿದ, ನೀರ ಮೇಲೆ ಕಂಬಳಿ, ಹಚ್ಚಡ ಹಾಸಿ ಇನ್ನೊಂದು ದಡ ಸೇರಿದ ಐತಿಹ್ಯಗಳು ಸ್ಥಳೀಯ ಪುರಾಣಗಳಲ್ಲಿ ಸಾಕಷ್ಟು ಕಾಣದೊರೆಯುತ್ತವೆ. 'ಜಲದಿವ್ಯ' ಕುರಿತ ಉಲ್ಲೇಖಗಳ ಜೊತೆ ಅದು ಇಂದೂ ಜನಪದರಲ್ಲಿ ಜೀವಂತವಿರುವುದನ್ನು ಗಮನಿಸಬಹುದು.'ಜಲಮಂತ್ರ' ಪಠಿಸಿ ಸಿದ್ಧಿ ಸಾಧಿಸಿದ ವಿಚಾರಗಳೂ ಸಮುದ್ರದ ತಳಕ್ಕೆ ಹೋಗಿ ಬಂದ ವಿವರಗಳೂ ಜನಪದ ಕಥೆಗಳಲ್ಲಿ ಸಾಕಷ್ಟಿವೆ. ದುರ್ಯೋಧನ 'ಜಲಮಂತ್ರ' ಪಠಿಸುತ್ತ ಸರೋವರದಲ್ಲಿ ಕುಳಿತು ಕಾಲಹರಣ ಮಾಡಿದ ವಿಚಾರ ಭಾರತದ ಕಥೆಯಲ್ಲಿ ಜನಜನಿತವಾಗಿದೆ.

ಜಲದಲ್ಲಿ ಅಗಣಿತ ಜೀವಿಗಳಿದ್ದರೂ ಜನಪದರು ಅವುಗಳಿಗೆ ತಮ್ಮದೇ ಆದ ಪ್ರಾದೇಶಿಕ ಹೆಸರುಗಳನ್ನು ಕೊಟ್ಟಿದ್ದಾರೆ. ನೀರ್ವಕ್ಕಿ, ನೀರ್ಗುದುರೆ, ನೀರ್ನಾಯಿ, ನೀರ್ಹಾವು, ನೀರಾನೆ, ನೀರ್ಬೆಕ್ಕು, ನೀರ್ಗೋಳಿ ಮುಂತಾಗಿ. ಸಸ್ಯಗಳನ್ನು ನೀರ್ಗಸ, ಅಂತರಗಂಗೆ, ಮೊದಲಾಗಿ ಹೇಳುತ್ತಾರೆ. ಅದರಂತೆ ನೀರಿನ ಸುಳಿಯನ್ನು ಗುರುತಿಸಿ ಅದಕ್ಕೆ 'ತಿರುಗುಣಿ' ಎಂದು ಹೇಳುತ್ತಾರೆ. ಸುಳಿಗೆ ಸಿಕ್ಕು ಸತ್ತ ಸಾಕಷ್ಟು ಉದಾಹರಣೆಗಳೂ ಜನಪದದಲ್ಲಿ ನಿದರ್ಶನಕ್ಕಿವೆ. ನೀರುಪ್ಪು, ನೀರುಳ್ಳಿ, ನೀರ್ಮಜ್ಜಿಗೆ, ನೀರತೇರು ಹೀಗೆ ನೀರಿನಿಂದ ಆರಂಭವಾಗುವ ಹಲವಾರು ಪದಗಳನ್ನು ಬಳಸುತ್ತಾರೆ.

ಕಾಲಿಗೆ ನೀರು ನೀಡುವ ಸಂಪ್ರದಾಯವನ್ನಂತೂ ಜನಪದರು ಹಲವಾರು ಸಂದರ್ಭಗಳಲ್ಲಿ ಪಾಲಿಸುತ್ತ ಬಂದಿರುವದು ಅವರ ವೈಜ್ಞಾನಿಕ ದೃಷ್ಟಿಗೆ ಇವು ಉದಾಹರಣೆಗಳಾಗುತ್ತವೆ. ಹೊರಗೆ ಹೋದವರು ಮನೆಯೊಳಗೆ ಬರುವಾಗ ಹೆಣ್ಣುಮಕ್ಕಳು ಕಾಲಿಗೆ ನೀರು ಕೊಡುವುದು ರೂಢಿ. ಬರಿಗಾಲಿನಿಂದ ಹೊರಗೆ ಬಂದರೆ ಅಂಗಾಲಿನ ಹೊಲಸು ಕೀಟಾಣು ಹೋಗಲಾಡಿಸಲು; ಚಪ್ಪಲಿ ಕೆರವು ಮೆಟ್ಟಿದ್ದರೆ ಅವು ತೊಗಲು, ಅಪವಿತ್ರವೆಂದು ಮತ್ತು ಹೊರಗಿನ ಧೂಳಿಕಣ ರೋಗಾಣು ಹೋಗಲಾಡಿಸಲು ಕಾಲು ಮುಖ ತೊಳೆದುಕೊಂಡೇ ಒಳಬರುತ್ತಿದ್ದರು. ಊರಿನಿಂದ ಬಂದವರನ್ನು, ಕೈ ಕಾಲಿಗೆ ನೀರು ನೀಡಿಯೇ ಸ್ವಾಗತಿಸುತ್ತಿದ್ದರು. ದಾರಿ ದಣಿವನ್ನು ಇದು ಕಡಿಮೆ ಮಾಡುತ್ತಿತ್ತು. ಇದೆಲ್ಲ ಗೌಣವಾಗಿ ನೀರು ಕೊಡುವುದೊಂದು ಗೌರವದ ಸಂಕೇತವಾಗಿ ಪರಿಣಮಿಸಿತು. ಬಾಣಂತಿ, ರೋಗಿಗಳನ್ನು ನೋಡಲು ಬಂದವರಂತೂ ಕೈ ಕಾಲು ಮುಖ ತೊಳೆದುಕೊಳ್ಳದೆ ಮಗು - ಬಾಣಂತಿ ಯಾರನ್ನೂ ಮುಟ್ಟುತ್ತಿರಲಿಲ್ಲ. ಸಂತೆ-ಪೇಟೆಯಿಂದ ಬಂದವರನ್ನು ನೀರು ಸಿಂಪಡಿಸಿಯೇ ಮನೆಯೊಳಕ್ಕೆ ಬರಗೊಡುತ್ತಿದ್ದರು. ಮೂತ್ರ ವಿಸರ್ಜನೆ ಮಾಡಿ ಒಳಬರುವಾಗಂತೂ ಕಾಲು ಮಡಿ ಮಾಡಿಕೊಂಡೇ ಬರುವುದು. ಅದಕ್ಕಂತೆ ಮೂತ್ರಕ್ಕೆ 'ಕಾಲ್ಮಡಿ' ಎಂದೇ ಜನಪದರು ಕರೆಯುತ್ತಾರೆ.

'ಆಡಿ ಬಾ ನನ ಕಂದ ಅಂಗಾಲು ತೊಳೆದೇನ' ಎನ್ನುವ ಗರತಿಯ ಹಾಡು ನೆನಪಾಗುತ್ತದೆ. ಹೊಸತಾಗಿ ಮನೆಗೆ ಬರುವ ಸೊಸೆ, ಕೊಂಡ ಎತ್ತು ಆಕಳುಗಳಿಗೆ ಕಾಲಿಗೆ ನೀರು ಹಾಕಿಯೇ ಹೊಸ್ತಿಲಿನೊಳಗೆ ಬಲಗಾಲನ್ನಿಟ್ಟು ಬರುವಂತೆ ನೋಡಿಕೊಳ್ಳುತ್ತಿದ್ದರು. ಸ್ವಾಮಿಗಳು ಮನೆಗೆ ಬಂದರೆ ತುಂಬಿದ ಕೊಡವನ್ನೇ ಅವರ ಪಾದಕ್ಕೆ ಸುರುವಿ ಗೌರವದಿಂದ ಒಳಗೆ ಕರೆದುಕೊಳ್ಳುತ್ತಾರೆ. ದೇವರು-ದಿಂಡರ ಪಾಲಕಿ ಮನೆಯ ಮುಂದೆ ಹಾದು

ಹೋಗುತ್ತಿದ್ದರೆ, ಪ್ರತಿಯೊಂದು ಮನೆಯವರೂ ತುಂಬಿದ ಕೊಡವನ್ನು ತಂದು ಪಲ್ಲಕ್ಕಿ ಹೊತ್ತವರ ಕಾಲಿಗೆ ಸುರುವುತ್ತಾರೆ. ಓಣಿಯ ತುಂಬ ನೀರಿನ ಹಳ್ಳ ಹರಿಯುತ್ತದೆ. ಪಲ್ಲಕ್ಕಿ ಹೊತ್ತವರು, ದೇವರಿಗೆ ಛತ್ರ - ಚಾಮರ ಹಿಡಿದವರು ಕಲಶ ಆರತಿಗಳನ್ನು ಹಿಡಿದು ಹಿಂಬಾಲಿಸಿದ ಹೆಣ್ಣು ಮಕ್ಕಳು ಎಲ್ಲರೂ ಬರಿಗಾಲಿನಿಂದ ಇರುತ್ತಿದ್ದರಾದ್ದರಿಂದ, ಬಿಸಿಲಲ್ಲಿ ಅವರ ಕಾಲು ಸುಡಬಾರದೆಂಬುದಕ್ಕೆ ಈ ವ್ಯವಸ್ಥೆ ಇರಬೇಕೆನ್ನಿಸುತ್ತದೆ. ಆದರೆ ದೇವರ ಸೇವೆಯ ಹೆಸರಿನಲ್ಲಿ ಅದನ್ನೊಂದು ಸಂಪ್ರದಾಯವಾಗಿ ಬೆಳೆಸಿಕೊಂಡು ಬಂದರು.

ನಸುಕಿನಲ್ಲಿ ತಲಬಾಗಿಲು ತೆರೆದೊಡನೆ ಹೊಸ್ತಿಲಕ್ಕೆ ನೀರು ಹಾಕುವ ರೂಢಿಯೊಂದಿದೆ. ಇದಕ್ಕೆ ಕಾರಣ ಕೇಳಿದರೆ ದೆವ್ವ, ಪಿಶಾಚಿ ನೀರು ದಾಟಿ ಒಳಗೆ ಬರಬಾರದೆಂದು ಹಾಗೆ ಮಾಡುತ್ತೇವೆಂದು ನನ್ನ 'ತಾಯಿ' ಹೇಳುತ್ತಿದ್ದರು. ಆದರೆ, ರಾತ್ರಿಯಲ್ಲಿ ಹುಳು ಹುಪ್ಪಡಿಗಳು ಹಾಯ್ದಾಡುವ ಆ ಸ್ಥಳದಲ್ಲಿ ಕುಳಿತಿದ್ದರೆ ನೀರು ಹಾಕಿದಾಗ ಅವು ಆ ಸ್ಥಳ ಬಿಟ್ಟು ಕದಲಲಿ ಎನ್ನುವುದೇ ಇದರ ಆಶಯ ಇರಬಹುದು.

ಪರ ಊರಿಗೋ, ಯಾವುದೋ ಕೆಲಸಕ್ಕೋ ಹೊರಟಿದ್ದರೆ ನೀರು ತುಂಬಿದ ಕೊಡ ಹೊತ್ತು ಯಾರಾದರೂ ಎದುರಿಗೆ ಬಂದರೆ ಪ್ರವಾಸ, ಕೆಲಸ ಯಶಸ್ವಿಯಾಗುತ್ತದೆಂಬ ನಂಬುಗೆ ಜನಪದರಲ್ಲಿ ದಟ್ಟವಾಗಿದೆ. ತುಂಬಿದ ಕೊಡವನ್ನು ಶುಭ ಸಂಕೇತವೆಂದು ಪರಿಗಣಿಸಲಾಗುತ್ತದೆ. ಹೆಣ್ಣು ಮಕ್ಕಳು ಗಂಡನ ಮನೆಗೋ ತವರಿಗೋ ಹೊರಟು ನಿಂತಾಗ ಎದುರಿಗೆ ತುಂಬಿದ ಕೊಡ ಬಂದರೆ ಅದರಲ್ಲಿಯ ನೀರು ತೆಗೆದುಕೊಂಡು ಬಾಯಿಗೆ ಹಾಕಿ ಮೈಗೆ ಚಿಮುಕಿಸಿಕೊಳ್ಳುತ್ತಿದ್ದರು. ಅದನ್ನು ಬಲಗೊಂಡು ದಾರಿ ತುಳಿಯುತ್ತಿದ್ದರು. ಅದೇ ಬರಿಗೊಡ ಅಶುಭ. ಬರಿಗೊಡವನ್ನು ಮನೆಯೊಳಕ್ಕೆ ತರಗೊಡುತ್ತಿರಲಿಲ್ಲ. ತರಬೇಕಾದರೆ ಅದರಲ್ಲಿದ್ದ ನಾಲ್ಕು ಹನಿ ನೀರನ್ನು ಹೊಸ್ತಿಲಕ್ಕೆ ಹಾಕಿ ಅದನ್ನು ಒಳಗೆ ತಂದಿಡುವದು ರೂಢಿ.

ನೀರು ಒಂದೇ ಆದರೂ ಸಂದರ್ಭ ಸಂಪರ್ಕಕ್ಕನುಗುಣವಾಗಿ ಅದು ಬೇರೆ ಬೇರೆ ಹೆಸರಿನಿಂದ ಪ್ರಾಮುಖ್ಯತೆ ಪಡೆಯುತ್ತದೆ. 'ಬೆದರು ನೀರು' 'ಬೆರಕಿ ನೀರು', 'ಸುರಗಿ ನೀರು', ಅಂತರ್ನೀರು, 'ತೀರ್ಥ', 'ಪಾದೋದಕ' ಮುಂತಾಗಿ ಗುರುತಿಸಲಾಗುತ್ತದೆ.

### ಬೆರಕಿ ನೀರು

ಬಿಸಿ ನೀರಿನಲ್ಲಿ ತಣ್ಣೀರನ್ನು ಕೂಡಿಸಿದರೆ ಅದು ಬೆರಿಕೆ ನೀರಾಗುತ್ತದೆ. ಅದರಂತೆ ಭಾವಿಯ ನೀರು ಕೆರೆಯ ನೀರು ಕೂಡಿದರೂ ಬೆರಿಕೆಯಾಗುತ್ತದೆ. ಈ ಬೆರಿಕೆ ನೀರು ಕುಡಿಯಲು ಯೋಗ್ಯವಲ್ಲ. ಬಳಕೆಗೆ ಸ್ನಾನಕ್ಕೆ ಮಾತ್ರ ಸರಿ. ಆರೋಗ್ಯ ಶಾಸ್ತ್ರದ ದೃಷ್ಟಿಯಿಂದಲೂ ಈ ರೀತಿಯ ಬೆರಿಕೆ ನೀರು ಪ್ರಕೃತಿಯ ಮೇಲೆ ಪರಿಣಾಮ ಬೀರುತ್ತದೆ. 'ಬೆರಿಕೆ' ಅನ್ನುವುದು ಕೆಲವು ಜನರ ಸ್ವಭಾವಕ್ಕೆ ವಿಶೇಷಣವಾಗಿ ಪ್ರಯೋಗವಾಗುತ್ತದೆ. ನಿಜವಾಗಿ ನೋಡಿದರೆ 'ಕ್ರಾಸಬ್ರೀಡ' ಅನ್ನುವ ಅರ್ಥದ ಬೈಗುಳವೇ ಇದಾಗಿದೆ.

### ಬೆದರು ನೀರು

ಕೂಸುಗಳಿಗೆ, ಎರೆಯುವಾಗ ಒಂದು ತಬಿಂಗೆ ತಣ್ಣೀರು ಇನ್ನೊಂದು ತಂಬಿಗೆ ಬಿಸಿನೀರು ಹಾಕುತ್ತಾರೆ. ಈ ಕ್ರಮದಿಂದ ಹಾಕುವ ನೀರಿಗೆ 'ಬೆದರು ನೀರು' ಎಂದು ಹೆಸರು. ಕೂಸುಗಳು ಒಮ್ಮೆ ತಂಪು ಮರುಗಳಿಗೆಯಲ್ಲೇ ಬಿಸಿ ಅನುಭವ ಪಡೆದು ಬೆದರದೇ

ಇರಬೇಕೆಂಬುದೇ ಇದರ ಉದ್ದೇಶ. ಸುಖ-ದುಃಖ ಎರಡನ್ನು ಸಹಿಸುವ ಶಕ್ತಿ ಅವಕ್ಕೆ ಬರಬೇಕು. ಅದಕ್ಕಾಗಿ ಅಂಜಿಕೆ ಕಳೆಯಲು ಈ ಬೆದರು ನೀರನ್ನು ಕೂಸುಗಳಿಗೆ ಹಾಕುವ ರೂಢಿ ಬೆಳೆದು ಬಂದಿದೆ. ನಿದ್ರೆ ಹತ್ತಿದವನನ್ನು ಮೂರ್ಛೆ ಹೋದವನನ್ನು ಎಚ್ಚರಿಸಲು ತಣ್ಣೀರು ಚಿಮುಕಿಸುವುದನ್ನು ಜ್ಞಾಪಿಸಿಕೊಳ್ಳಬಹುದು. ಕೂಸು ಹುಟ್ಟುತ್ತಲೂ ತಣ್ಣೀರಲ್ಲೇ ಅದನ್ನು ತೊಳೆಯುತ್ತಾರೆ. ಕಾರಣ ಇಂದ್ರಿಯಗಳಿಗೆ ಪ್ರಚೋದನೆ ನೀಡುವುದೇ ಆಗಿದೆ. ಮೆದುಳನ್ನು ಚುರುಕುಗೊಳಿಸಲು, ಅಥವಾ ಮೆದುಳು ಮತ್ತು ಇಂದ್ರಿಯಗಳಿಗೆ ಸಂಪರ್ಕ ಕಲ್ಪಿಸಲು ಹೀಗೆ ಮಾಡಲಾಗುತ್ತಿದೆ. 'ಬೆದರು ನೀರೂ' ಇದೇ ಕಾರ್ಯ ಮಾಡುತ್ತದೆ.

**ತೊಳೆ ನೀರು**

ತಂಬಿಗೆಯಲ್ಲಿ ಹಿಂಡಿದ ಹಾಲನ್ನು ಗಡಿಗೆಗೆ ಹಾಕಿ ಕಾಸಲಿಕ್ಕೆ ಇಡುವಾಗ ತಂಬಿಗೆಗೆ ಹತ್ತಿದ ಹಾಲಿಗೆ ಸ್ವಲ್ಪ ನೀರು ಸೇರಿಸಿ, ಅಲುಗಾಡಿಸಿ ಗಡಿಗೆಯ ಹಾಲಿಗೆ ಹಾಕುತ್ತಾರೆ. ಈ ನೀರನ್ನು 'ತ್ವಾಳೇದ ನೀರು' ಎಂದು ಹೇಳುತ್ತಾರೆ. ಈ ಕ್ರಿಯೆಗೆ 'ತ್ವಾಳೇರಿ ಮಾಡುವುದು' ಎನ್ನುತ್ತಾರೆ. ಹೀಗೆ ತ್ವಾಳೇರಿ ಮಾಡಿದ ಹಾಲನ್ನು ಮಾರಾಟ ಮಾಡುತ್ತಿರಲಿಲ್ಲ, ನೀರು ಸೇರಿಸಿದ ಹಾಲನ್ನು ಮಾರುವವರನ್ನು ತೀರ ಕೀಳಾಗಿ ಕಾಣುತ್ತಿದ್ದರು. 'ಅಕಿ ಏನ, ತ್ವಾಳೇರಿ ಹಾಲ ಮಾರಿ ಬಾಳೇ ಮಾಡಕಿ' ಅನ್ನುವ ಮಾತುಗಳು ಜನಪದರಲ್ಲಿವೆ. ಭಾಂಡೆಗೆ ಹತ್ತಿದ ಹಾಲನ್ನು ನೀರಿನಿಂದ ತೊಳೆದು ಮೂಲ ಹಾಲಿಗೆ ಸೇರಿಸುವ ಈ ನೀರು 'ತೊಳೆ ನೀರು'.

**ತೀರ್ಥ, ಪಾದೋದಕ**

ದೇವರ ಮೂರ್ತಿಗೆ ಅಭಿಷೇಕ ಮಾಡಿದ ನೀರನ್ನು 'ತೀರ್ಥ' ಎಂದು ಭಕ್ತರಿಗೆ ಚಮಚಿಯಿಂದ ಕೊಡುತ್ತಾರೆ. ಇದು ಪವಿತ್ರ 'ಜಲ' ಬಾಯಿಗೆ ಹಾಕಿಕೊಂಡು ಮೈ ಎಲ್ಲ ಸವರಿಕೊಳ್ಳುತ್ತಾರೆ. ಅದರಂತೆ 'ಸ್ವಾಮಿ'ಗಳ ಪಾದ ತೊಳೆದು ಪಾದ ಪೂಜೆ ಮಾಡುವ ಧಾರ್ಮಿಕ ವಿಧಿ ವಿಧಾನಗಳಿವೆ. ಅಂಥವರ ಪಾದ ತೊಳೆದ ನೀರನ್ನು 'ಪಾದೋದಕ, ಧೂಳ ಪಾದಕ' ಎನ್ನುತ್ತಾರೆ. ಈ ಪಾದೋದಕವನ್ನು ಮನೆಯಲ್ಲೆಲ್ಲ ಸಿಂಪಡಿಸಿದರೆ ಮನೆ ಶುದ್ಧೀಕರಣಗೊಳ್ಳುತ್ತದಂತೆ! ಅದನ್ನು ಬಾಯಿಗೆ ಹಾಕಿಕೊಂಡು ಶುದ್ಧರಾಗುತ್ತೇವೆ ಎಂಬ ಅನಾರೋಗ್ಯಕರ ಮೂಢನಂಬುಗೆ ಜನಪದರಲ್ಲಿದೆ. ಇದು ರೋಗಾಣುಗಳನ್ನು ಸ್ವೀಕರಿಸುವ ಅಂಧಶ್ರದ್ಧೆ, ಅದರಂತೆ ಮಂತ್ರೋದಕವೂ ಇದೆ.

**ಸುರಿಗೆ ನೀರು**

ಮದುವೆಯಲ್ಲಿ ಅಕ್ಷತೆಯ ಮುನ್ನಾದಿನ ರಾತ್ರಿ ವಧು-ವರರನ್ನು ಕೂರಿಸಿ ನಾಲ್ಕೂ ಕಡೆಗೆ ಕಲಶಗಳನ್ನಿಟ್ಟು ನೂಲು ಸುತ್ತಿ ಅವರಿಗೆ ಅರಿಶಿಣ ಹಚ್ಚುತ್ತಾರೆ. ಅನಂತರ ಎಣ್ಣೆ ಹಚ್ಚಿ ಎರೆಯುತ್ತಾರೆ. ಈ ನೀರಿಗೆ 'ಸುರಗಿಯ ನೀರು' ಎನ್ನುತ್ತಾರೆ. ಸುರಗಿಯ ನೀರು ಬಿದ್ದೊಡನೆ ಮದುಮಕ್ಕಳ ಬೆಳವಣಿಗೆ ತೀವ್ರವಾಗುತ್ತದೆಂಬುದು ಒಂದು ನಂಬುಗೆ. ಮದುವೆಯಲ್ಲಿ ವರನಿಗೆ ಕೊಡುವ ಸಾಮಾನುಗಳನ್ನು 'ಸುರಿಗೆಯ ಸಾಮಾನು' ಎನ್ನುತ್ತಾರೆ. ಅವನಿಗೆ ಕೊಡುವ ಕೊಡವನ್ನು 'ಸುರಿಗೆಯ ಕೊಡ' ಎಂದು ಹೇಳುತ್ತಾರೆ. ಆ ಕೊಡ ಹೊರುವ ಗೌರವ

ವಧುವಿನ ಅಕ್ಕ-ತಂಗಿಯರಿಗೆ ಸಲ್ಲುತ್ತದೆ. ಅದನ್ನು ಹೊತ್ತವರಿಗೆ ವರನ ಕಡೆಯವರು ಒಂದು ಸೀರೆ ಉಡಿಸುತ್ತಾರೆ. ಅದನ್ನು 'ಸುರಿಗೆಯ ಸೀರೆ' ಎನ್ನುವರು.

## ಧಾರಿ ನೀರು

ಅಕ್ಷತೆ ಬಿದ್ದೊಡನೆ ಮಗಳನ್ನು ಧಾರೆ 'ಎರೆದುಕೊಡುವ' ವಿಧಾನವೊಂದಿದೆ. ಮಗಳನ್ನು ಅಳಿಯನಿಗೆ ಸಮರ್ಪಿಸುವುದು. ಈ ಧಾರೆ ಎರೆದುಕೊಟ್ಟೊಡನೆ ಮಗಳ ಮೇಲೆ ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಹೀಗೆನ್ನುವುದಕ್ಕಿಂತ ಮಗಳ ರಕ್ಷಣೆಯ ಹೊಣೆಯನ್ನು ಅಳಿಯನಿಗೆ ವಹಿಸಿಕೊಡುತ್ತಾರೆ ಎನ್ನುವುದು ಹೆಚ್ಚು ಸೂಕ್ತ. ಅಳಿಯ -ಮಗಳ ಪಾದಕ್ಕೆ ನೀರಿನ ಧಾರೆ ಎರೆವಾಗ ದಂಪತಿಗಳು ಕಣ್ಣೀರು ಸುರಿಸುತ್ತಾರೆ. ಬಲಿ ಚಕ್ರವರ್ತಿ ತನ್ನೆಲ್ಲವನ್ನೂ ಇಂದ್ರನಿಗೆ ಧಾರೆ ಎರೆದು ಕೊಟ್ಟುದನ್ನು ಇಲ್ಲಿ ಸ್ಮರಿಸಬಹುದು. ತನ್ನ ಹಕ್ಕನ್ನು ಬಿಟ್ಟು ಕೊಡುವುದರ ಸಂಕೇತ ಈ ನೀರಧಾರೆ.

## ನೀರು ಮಾಡುವುದು

ಮದುವೆ ಮುಗಿದೊಡನೆ ದಂಪತಿಗಳನ್ನು ಸ್ನೇಹಿತರು ಸಂಬಂಧಿಕರು 'ನೀರಿ'ಗೆಂದು ಕರೆಯುತ್ತಿದ್ದರು. ತಮ್ಮ ಮನೆಯಲ್ಲಿ ಅವರನ್ನು ಎರೆದು ಆರತಿ ಮಾಡಿ ಶ್ಯಾವಿಗೆ ಊಟ ಮಾಡಿಸಿ ಕಳಿಸುತ್ತಿದ್ದರು. ಹೀಗೆ ಐದು 'ನೀರು' ಗಳಾಗಬೇಕು. ಆಗ ನವ ದಂಪತಿಗಳು ತಮ್ಮ ಕೈಕಂಕಣ ಬಿಚ್ಚಿ ಹಂದರಗಂಬಕ್ಕೆ ಕಟ್ಟಿ ಬೇಕಾದ ಕಡೆ ತಿರುಗಾಡಬಹುದಿತ್ತು. ಅವರೆಗೆ ಅವರು ಊರು-ಕೇರಿಗೆ ಹೋಗುವುದನ್ನು ನಿಯಂತ್ರಿಸಲಾಗುತ್ತಿತ್ತು. ಹಚ್ಚಿದ ಅರಿಶಿಣ ತೊಳೆದು ಹೋಗಬೇಕು. ಆಗ 'ಹಸಿಮೈ' ಹೋಗಿ ಮೊದಲಿನ ಮೈ ಆಗುತ್ತದೆಂಬ ಕಲ್ಪನೆ. ಅರಿಶಿಣ ಹಚ್ಚಿದ ಹಸಿಮೈಯಲ್ಲಿ 'ಗಾಳಿ' 'ಭೂತ' ಸೇರುತ್ತವೆಂಬ ಮೂಢನಂಬಿಕೆ ಇದಕ್ಕೆ ಕಾರಣವಾಗಿತ್ತು. ನಿಜವಾಗಿ ನೋಡಿದರೆ ನಾಲ್ಕೈದು ಮನೆ ತಿರುಗಾಡಿ, ಕೂಡಿ ಸ್ನಾನ, ಊಟ ಮಾಡಿ ನವದಂಪತಿಗಳು ಹತ್ತಿರ ಬರಲಿ ಎಂಬುದಕ್ಕೆ ಈ ವಿಧಾನ ಇರಬಹುದಾಗಿದೆ.

## ಗಂಗಾಜಲ

ನೀರಿಲ್ಲದೆ ಯಾವ ಸಂಸ್ಕಾರಗಳೂ ಇಲ್ಲ. 'ಅಪುತ್ರಸ್ಯ ಗತಿರ್ನಾಸ್ತಿ'. ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲವೆಂಬುದೊಂದು ಮೂಢನಂಬಿಕೆ. ಪ್ರಾಣ ಹೋಗುವಾಗ ಬಾಯಿಗೆ ನೀರು ಬಿಡಲಿಕ್ಕಾದರೂ ಒಬ್ಬ ಮಗನ ಅವಶ್ಯಕತೆಯನ್ನು ಶಾಸ್ತ್ರವಾಗಿಸಿದ್ದರು. ಪ್ರೀತಿಯವರು ಬಾಯಿಗೆ ನೀರು ಬಿಡುವವರೆಗೆ ಪ್ರಾಣ ಹೋಗುವದಿಲ್ಲವೆಂಬುದೊಂದು ನಂಬುಗೆ. ಸಾಯುವಾಗ ಬಾಯಾಗ ಮುಕ್ಕನೀರು ಹಾಕುವವರೂ ಗತಿ ಇಲ್ಲದವರ ಬದುಕಿಗಿಂತ ಸಾವನ್ನೇ ತೀರ ದಾರುಣವೆಂದು ಪರಿಗಣಿಸಲಾಗುತ್ತಿತ್ತು. ಆದಕ್ಕಾಗಿ ಕೊನೆಯ ಗಳಿಗೆಯಲ್ಲಿ ಗಂಗಾಜಲವನ್ನು ಬಾಯಿಗೆ ಬಿಡುತ್ತಾರೆ. ಗಂಗಾಜಲ ತುಂಬಿ ಬೆಸೆದ ತಾಮ್ರದ ಗಿಂಡಿಗಳು ಬಹಳಷ್ಟು ಬ್ರಾಹ್ಮಣರ ಜಗಲಿಗಳ ಮೇಲೆ ಪೂಜೆಗೊಳ್ಳುತ್ತಿರುತ್ತವೆ. ಇಡೀ ಭರತಖಂಡದಲ್ಲಿ ಗಂಗಾಜಲವನ್ನು ಪವಿತ್ರ, ಪೂಜ್ಯವೆಂದು ಪರಿಗಣಿಸಲಾಗುತ್ತದೆ.

ಬ್ರಾಹ್ಮಣರು ಊಟಕ್ಕೆ ಕುಳಿತಾಗ ಅನ್ನದ ತುತ್ತಿಗೂ ಮೊದಲು ಅಂಗೈಯಲ್ಲಿ ನಾಲ್ಕಾರು ಹನಿ ನೀರು ಹಾಕಿಕೊಂಡು ಒಣಗಿದ ಅಂಗಳನ್ನು ಒದ್ದೆ ಮಾಡಿಕೊಳ್ಳಲು ಬಾಯಿಗೆ

ಹಾಕಿಕೊಳ್ಳುತ್ತಾರೆ. ಅದಕ್ಕೆ 'ಆಪೋಶನ' ಎನ್ನುತ್ತಾರೆ. ಅದರಂತೆ ಮನೆಯಲ್ಲಿ ಮದುವೆ ನಿಶ್ಚಯವಾದ ಕೂಡಲೇ ಬಂಧು, ಮಿತ್ರರು ಒಂದು ಗಡಿಗೆಯಲ್ಲಿ ನೀರನ್ನು ತಂದುಕೊಟ್ಟು, ತಮ್ಮೆಲ್ಲರ ಸಹಕಾರವನ್ನು ಸೂಚಿಸುತ್ತಾರೆ. ಇದಕ್ಕೆ 'ಗಡಿಗೆ ನೀರು' ಎಂದು ಹೇಳುತ್ತಾರೆ. ಬಿಸಿಲಲ್ಲಿ ಬಸವಳಿದು ಬಂದವರಿಗೆ 'ಬೆಲ್ಲ-ನೀರು' ಕೊಡುವ ಸಂಪ್ರದಾಯ ಹಳ್ಳಿಗಳಲ್ಲಿದೆ.

## ಎಳ್ಳುನೀರು

ಶವ ಸಂಸ್ಕಾರದ ಸಮಯದಲ್ಲಿ ಸುಡುವ ಶವವನ್ನು ಕಟ್ಟಿಗೆಯ ಮೇಲೆ ಮಲಗಿಸಿ ಬಾಯಿಗೆ ಎಳ್ಳು ಮಿಶ್ರಿತ ನೀರನ್ನು ಹಾಕುತ್ತಾರೆ. ಎಳ್ಳುನೀರು ಬಿಡುವುದೆಂದರೆ ಅವನನ್ನು ಮರೆತು ಬಿಡುವುದೆಂದೇ ಅರ್ಥ. ಅದಕ್ಕೂ ಮೊದಲು ಮಗ ಶವದ ಸುತ್ತ, ಮಣ್ಣಿನ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ಹೆಗಲ ಮೇಲಿಟ್ಟುಕೊಂಡು ಸುತ್ತುತ್ತಾನೆ. ಪ್ರತಿ ಸುತ್ತಿಗೂ ಅದಕ್ಕೊಂದು ತೂತು ಹಾಕಿ ನೀರು ಶವದ ಕಟ್ಟಿಗೆಯ ಸುತ್ತು ಬೀಳುವಂತೆ ನೋಡಿಕೊಳ್ಳುತ್ತಾರೆ. ಮೂರೋ ಐದೋ ಸುತ್ತಾದೊಡನೆ ಬಿಂದಿಗೆಯನ್ನು ಒಗೆದು ಒಡೆಯುತ್ತಾರೆ.

ಶವ ಸಂಸ್ಕಾರದಲ್ಲಿ ನೀರನ್ನು ಒಂದೊಂದು ಧರ್ಮದವರು ಒಂದೊಂದು ರೀತಿಯಲ್ಲಿ ಬಳಸುತ್ತಾರೆ. ಮಹಮ್ಮದೀಯರು ಬಾರೀಗಿಡದ ಎಲೆ ಮಿಶ್ರಿತ ನೀರಿನಿಂದಲೇ ಹೆಣವನ್ನು ತೊಳೆಯುತ್ತಾರೆ. ವ್ಯಕ್ತಿ ಪ್ರಾಣಬಿಟ್ಟ ಸ್ಥಳದಲ್ಲಿ ಕೆಲವರು ದೀಪ ಹಚ್ಚಿಟ್ಟರೆ, ವೀರಶೈವರು ಆ ಸ್ಥಳವನ್ನು ಶುದ್ಧೀಕರಿಸಿ ಅಲ್ಲೊಂದು ತಂಬಿಗೆಯನ್ನು ನೀರಿನಿಂದ ತುಂಬಿ ಇರಿಸುತ್ತಾರೆ, ಮಣ್ಣುಕೊಟ್ಟು ಬಂದವರು ಅದಕ್ಕೆ ನಮಸ್ಕರಿಸಿ ತಮ್ಮ ಮನೆಗಳಿಗೆ ಮರಳುತ್ತಾರೆ.

## ನೀರೋಕುಳಿ

ಜಾತ್ರೆಯ ಅಂಗವಾಗಿ ಓಕುಳಿ ಆಡುವುದೊಂದು ಸಂಪ್ರದಾಯ. ಓಕಳಿಗಳಲ್ಲಿ ಮೂರು ತೆರ. ಹಾಲೋಕುಳಿ, ನೀರೋಕುಳಿ ಮತ್ತು ಬಣ್ಣದೋಕುಳಿ, ಬಣ್ಣದೋಕುಳಿಯನ್ನು ಹೋಳೀ ಹುಣ್ಣಿಮೆಯಲ್ಲಿ ಆಡುತ್ತಾರೆ. ನೀರೋಕುಳಿ ಹನುಮಂತ ದೇವರ ಜಾತ್ರೆಗಳಲ್ಲಿ ನಡೆಯುತ್ತದೆ. ಪರಸ್ಪರರಿಗೆ ನೀರು ಗೊಜ್ಜುವ ನೀರಾಟವದು.

## ಅಂತರ್ನೀರು

ಹೆರಿಗೆ ತಡವಾದರೆ ಅಂತರ ನೀರು ಕುಡಿಸಿದರೆ ಬೇಗ ಹೆರಿಗೆಯಾಗುತ್ತದೆಂಬ ನಂಬುಗೆ ಜನಪದರಲ್ಲಿ ಬಲವಾಗಿತ್ತು. ಬಾವಿ ಅಥವ ಕೆರೆಯಿಂದ ಬೇನೆ ತಿನ್ನುತ್ತಿರುವ ಹೆಣ್ಣುಮಗಳ ಮನೆಯತನಕ, ಜನರು ಸಾಲಾಗಿ ನಿಂತು ಬಾವಿಯಲ್ಲಿ ನೀರು ತುಂಬಿದ ತಂಬಿಗೆಯನ್ನು ಒಬ್ಬರ ಕೈಯಿಂದ ಒಬ್ಬರಿಗೆ ಹೆಜ್ಜೆ ಕಿತ್ತಿಡದೆ ಸಾಗಿಸುವುದು. ಈ ನೀರಿಗೆ ಅಂತರ- ನೀರು ಎನ್ನುತ್ತಿದ್ದರು. ಈ ಕಾರ್ಯಕ್ಕೆ ಪ್ರಾಥಮಿಕ ಶಾಲೆಯ ಮಕ್ಕಳನ್ನು ಬಳಸಲಾಗುತ್ತಿತ್ತು. ಸಾಮಾಜಿಕರ ಬೇಡಿಕೆ ಪೂರೈಸಲು ನಮ್ಮ ಗುರುಗಳು ನಮ್ಮನ್ನು ಈ ಕಾರ್ಯಕ್ಕೆ ಹಲವಾರು ಸಾರಿ ಕರೆದೊಯ್ಯುತ್ತಿದ್ದುದು ನನಗೆ ನೆನಪಿದೆ. ಒಬ್ಬ ಹೆಣ್ಣುಮಗಳ ನೋವಿನಲ್ಲಿ ಇಡೀ ಸಮಾಜ ಪಾಲ್ಗೊಳ್ಳುವ ಸಹಾನುಭೂತಿ ಇಲ್ಲಿ ಎದ್ದು ಕಾಣುತ್ತಿತ್ತು. ಆದರೆ ಈ ಅಂತರ ನೀರು ವೈಜ್ಞಾನಿಕ ವಿಚಾರ ಮಾತ್ರ ಅಲ್ಲ.

**ತೆಪ್ಪ ಬಿಡುವುದು**

ಇದೊಂದು ಹರಕೆಯ ವಿಧಾನ. ಕೆಲವರಿಗೆ ಹುಟ್ಟಿದ ಮಕ್ಕಳು ಸಾಯುತ್ತವೆ. ಅಥವಾ ಬಹಳ ದಿನ ಮಕ್ಕಳಾಗುವುದಿಲ್ಲ. ಅಂಥ ತಾಯಂದಿರು ಹುಟ್ಟುವ ಮಗುವನ್ನು ತನ್ನ ಮುಂದೆ ತೆಪ್ಪ ತೇಲಿಸುತ್ತೇನೆಂದು ದೇವರಿಗೆ ಹರಕೆ ಹೊರುತ್ತಾರೆ. ಹಾಗೆ ಹರಕೆ ಹೊತ್ತವರು ಆ ಮಕ್ಕಳನ್ನು ಗುಡಿಯ ಮುಂದಿನ ಹೊಂಡದಲ್ಲಿ ತೆಪ್ಪಕಟ್ಟಿ, ಅದರ ಮೇಲೆ ಮಗುವನ್ನು ಮಲಗಿಸಿ ದೇವರ ಕಡೆಯ ದಡಕ್ಕೆ ತಲುಪಿಸುತ್ತಾರೆ. ಆ ದೇವರ ಜಾತ್ರೆ ಉತ್ಸವಗಳಲ್ಲಿ ಈ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ಬಾದಾಮಿಯ ಬನಶಂಕರಿ ದೇವಸ್ಥಾನದ ಮುಂದಿನ ದೊಡ್ಡ ಹೊಂಡದಲ್ಲಿ ಈಗಲೂ ಈ ಹರಕೆ ತೀರಿಸುತ್ತಿರುವವರನ್ನು ಕಾಣಬಹುದಾಗಿದೆ. ಇದು ಜಲದೇವತೆಗೆ ಮಗುವನ್ನು ಅರ್ಪಿಸುವ ಸಂಕೇತವೋ ಏನೋ!

**ಹುಳಿನೀರು**

ಒಕ್ಕಲಿಗರು ಅಗಿಗಳನ್ನು ನೀರು ಬಿಟ್ಟು ಮಡಿಗಳಲ್ಲಿ ಹಚ್ಚುತ್ತಾರೆ. ಆಗ ತುಳಿದಾಡಿ ನೆಲಗಟ್ಟಿಯಾಗಿರುತ್ತದೆ. ಎರಡು ಮೂರು ದಿನ ಬಿಟ್ಟು ಹಚ್ಚಿದ ಅಗಿಗಳಿಗೆ ಮೊದಲ ಸಲ ನೀರು ಕೊಡುತ್ತಾರೆ. ಅದನ್ನು ಹುಳಿನೀರು ಬಿಡುವುದು ಎನ್ನುತ್ತಾರೆ. ಕೃಷಿಕರು ಮುಂಜಾನೆ ಹುಲ್ಲಿನ ಮೇಲೆ ಇಬ್ಬನಿ ನೀರನ್ನು 'ಪನ್ನೀರು' ಎಂದು ಕರೆದರೆ ಹಸಿಟೆಂಗಿನ ನೀರನ್ನು 'ಎಳೆನೀರು' ಎಂದು ಹೇಳುತ್ತಾರೆ. ಹೀಗೆ ಪ್ರಾದೇಶಿಕವಾಗಿ ಇನ್ನೂ ಹಲವಾರು ತರದ ನೀರನ್ನು ಗುರುತಿಸಬಹುದಾಗಿದೆ. ಕೃತ್ರಿಮ ನೀರುಣಿಸುವ ಭೂಮಿಗೆ 'ನೀರಾವರಿ ಭೂಮಿ' ಎನ್ನುತ್ತಾರೆ. 'ನೀರುಣಿಸು' ಪದವನ್ನು ನೋಡಬಹುದು.

**ನೀರ್ಬಳಕೆ**

ಜನಪದದಲ್ಲಿ 'ನೀರ್ಬಳಕೆ' ಎಂಬ ಪದವಿದೆ. ಜಾತಿಯ ಒಳಪಂಗಡದವರಲ್ಲಿ ಊಟೋಪಚಾರ ಮೊದಲಾದ ಎಲ್ಲ ವ್ಯವಹಾರಗಳಾಗುತ್ತವೆ. ಆದರೆ ಪರಸ್ಪರರಲ್ಲಿ ಹೆಣ್ಣು - ಗಂಡಿನ ಕೊಡುಕೊಳ್ಳುವಿಕೆ, ಅಂದರೆ ರಕ್ತ ಸಂಬಂಧ ಆಗುವುದಿಲ್ಲ. ಈ ಸಂಬಂಧಕ್ಕೆ 'ನೀರ್ಬಳಕೆ' ಎಂದು ಹೇಳಲಾಗುತ್ತದೆ.

**ನೀರಿಗೆ ಅರ್ಪಣ**

ಗಣೇಶ, ಜೋಕುಮಾರರಂಥ ನಿಯತಕಾಲಿಕ ದೇವರನ್ನು ನೀರಿಗರ್ಪಿಸುತ್ತಾರೆ. ಮೊಹರಂದ ಕೊನೆಯ ದಿನವನ್ನು ದೇವರು ಹೊಳಿಗೆ ಹೋಗುವ ದಿನವೆಂದು ಗುರುತಿಸುತ್ತಾರೆ. ಮಂಗಲ ಕಾರ್ಯಗಳಲ್ಲಿ ಬಳಸಿದ ಹಾರ, ದಂಡೆ, ಬಾಸಿಂಗ ಮುಂತಾದವುಗಳನ್ನು ನದಿಗಳಿಗೆ ಅರ್ಪಿಸುವುದನ್ನೂ, ನದಿಗಳಲ್ಲಿ ನಾಣ್ಯ ಹಾಕುವುದನ್ನು ಇಂದೂ ನೋಡಬಹುದಾಗಿದೆ. ಸತ್ತವರ ಎಲುಬುಗಳನ್ನು ನದಿಗೆ ಬಿಡುವ ಕರ್ಮ ಸರ್ವವಿದಿತ.

**ಜಲಶೋಧ**

ಆದಿಮಾನವನಿಂದ ಇಂದಿನವರೆಗೆ ಜಲಶೋಧದಲ್ಲಿ ಮನುಷ್ಯ ತೊಡಗಿದ್ದಾನೆ. ಭೂಮಿಯ ಮೇಲಿನ ನೀರನ್ನೆಲ್ಲ ಮುಗಿಸಿ ಅಂತರ್‌ಜಲಕ್ಕೆ ಕೈ ಇಕ್ಕಿದ್ದಾನೆ. ಈಗ ಸುಮಾರು

ಮೂವತ್ತು ನಲವತ್ತು ವರ್ಷಗಳ ಹಿಂದೆ, ಹತ್ತು ಅಡಿ ಅಗಿದರೆ ಸಾಕಾಗಿತ್ತು, ನೀರಿನ ಸೆಲೆಗಳು ಧುಮ್ಮಿಕ್ಕಿ ಹರಿಯುತ್ತಿದ್ದವು. ಮಳೆಗಾಲದಲ್ಲಂತೂ ಎಲ್ಲೆಂದರಲ್ಲಿ ಬುಗ್ಗೆಗಳು ಚಿಮ್ಮುತ್ತಿದ್ದವು. ಈಗ ಮುನ್ನೂರು ನಾನ್ನೂರು ಅಡಿ ಬೋರು ಹಾಕಿದರೂ ನೀರು ಸಿಕ್ಕುವುದು ದುಸ್ತರವಾಗಿದೆ. ಅಂತರ್ಜಲಶೋಧಕ್ಕೆ ಹಲವಾರು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿದ್ದಾರೆ, ಆದರೂ ನೀರು ಸಿಕ್ಕುತ್ತಿಲ್ಲ.

ಈ ಅಂತರ್ಜಲಶೋಧಕ್ಕೆ ಹಲವಾರು ಜಾನಪದ ವಿಧಾನಗಳನ್ನು ಈಗಲೂ ಅಳವಡಿಸುತ್ತಾರೆ. ನೀರು ಹೇಳುವವರು ಊರೂರಿಗೂ ಇರುತ್ತಾರೆ. ಇನ್ನೂ ಇಂಥವರನ್ನೇ ನಂಬಿದ ಇಂಜಿನಿಯರರು ಇದ್ದಾರೆ. ಭೂಮಿಯ ರಚನೆ, ಮಣ್ಣಿನ ಗುಣ ಮತ್ತು ಅಲ್ಲಿ ಬೆಳೆವ ಸಸ್ಯಗಳನ್ನಾಧರಿಸಿ ನಿಶ್ಚಯವಾಗಿ ಅಂತರ್ಜಲದ ಆಕರಗಳನ್ನು ಹೇಳುತ್ತಾರೆ. ಒಂದು ರೀತಿಯ ಅಂಜನ ಹಚ್ಚಿಕೊಂಡು ನೋಡುವವರಿಗೆ ಭೂಮಿಯ ಒಳಗೆ ಹರಿವ ನೀರು ಕಾಣುತ್ತದಂತೆ ನೀರಿನ ಹರಿವ ಸದ್ದು ಕೇಳುತ್ತದಂತೆ! ಇವೆಲ್ಲ ನಂಬಲಾಗದ ಮಾತು. ಆದರೆ ಬೇವು, ಬನ್ನಿ, ಎಕ್ಕೆಯ ಗಿಡಗಳಿರುವಲ್ಲಿ ಅಂತರ್ಜಲ ಇರುತ್ತದೆಂಬುದು ಅನುಭವ ಸತ್ಯವಂತೆ. ಪದರುಗಳಲ್ಲಿನ ನೆಲ, ಕೆಂಪುಮಣ್ಣಿನಲ್ಲಿ ನೀರಿರುತ್ತದೆಂಬುದು ಬಹಳ ಜನರ ನಂಬಿಕೆ. ಆದರೆ ಅಂತರ್ಜಲ ಹುಡುಕಲು ಬೇವಿನ ಗಿಡದ ಹಸಿಕವಲೊಂದನ್ನು ಹಿಡಿದು ನೀರು ಬೇಕಾದ ನೆಲದಲ್ಲಿ ತಿರುಗಾಡುತ್ತಾರೆ. ನೀರಿದ್ದಲ್ಲಿ ಬೇವಿನ ಟೊಂಗೆ ವಾಲುತ್ತದಂತೆ. ಈ ಅನುಭವ ಕವಲು ಹಿಡಿದವನಿಗೆ ಆಗುತ್ತದೆ. ಇಂದೂ ತಜ್ಞ ಎಂಜಿನಿಯರರು ಈ ವಿಧಾನವನ್ನು ಅನುಸರಿಸುವುದನ್ನು ನಾನು ನೋಡಿದ್ದೇನೆ.

ಜನಪದರು ನೀರಿಗಾಗಿ ಮಳೆರಾಜನನ್ನುಳಿದು ಮತ್ತಾರನ್ನೂ ವಿಶೇಷವಾಗಿ ನಂಬಿದವರಲ್ಲ, ಮಳೆ ಬರದಿದ್ದಾಗ 'ವಾರ' ಮಾಡಿ ಎಲ್ಲ ದೇವರಿಗೂ ನೀರು ಹಾಕುತ್ತಾರೆ. ಬೋನ ಹಿಡಿಯುತ್ತಾರೆ. 'ಸಪ್ತಾಹ' ಮಾಡಿ ಗ್ರಾಮದೇವರ ಎದುರು ಒದ್ದೆ ಉಡುಗೆಯಲ್ಲಿ ನಿಂತು ಒಬ್ಬರ ನಂತರ ಒಬ್ಬರಂತೆ ಬಿಟ್ಟೂ ಬಿಡದೆ ಭಜನೆ ಮಾಡುತ್ತಾರೆ. 'ಸಪ್ತಾಹ' ಮುಗಿಯುವುದರೊಳಗೆ ಮಳೆ ಬರುತ್ತದೆಂಬ ನಂಬುಗೆ, 'ಗುಳ್ಳವ್ವ', 'ನುರುಚಿ'ಯರ ಪೂಜೆಯಷ್ಟೇ ಅಲ್ಲದೆ ಇತ್ತಿತ್ತಲಾಗಿ ಕತ್ತೆ ಮೆರವಣಿಗೆಯನ್ನು ಮಾಡುತ್ತಾರೆ. ಹಲವಾರು ಹಿರಿಯರು ಸ್ವಾಮಿಗಳು ಮಳೆಗಾಗಿ ತಪಸ್ಸು ಮಾಡಿದ, ಮಾಡುವ ಉದಾಹರಣೆಗಳೂ ಇವೆ. 'ಜೋಕುಮಾರ' ಸತ್ತ ಮೂರು ದಿವಸಕ್ಕೆ ತಪ್ಪದೆ ಮಳೆ ಬರುತ್ತದೆಂಬುದೊಂದು ಬಲವಾದ ನಂಬುಗೆ. ಒಟ್ಟಿನಲ್ಲಿ ಮಳೆರಾಯನನ್ನು ಮೆಚ್ಚಿಸುವ ಹಲವರು ವಿಧಾನಗಳನ್ನು ಜನಪದರು ಅನುಸರಿಸುತ್ತಾರೆ.

'ಹವೆ' 'ನೀರು' 'ರೊಟ್ಟಿ' ಭಾರತದ ಎಲ್ಲ ಭಾಷಾಕೋಶದ ಪದಗಳಾಗಿ ಭಾರತದ ಉದ್ದಗಲದ ಎಲ್ಲ ಜನಪದರ ನಾಲಗೆಯಲ್ಲಿ ಇವೆ. ಈ ಮೂರು ಶಬ್ದ ಗೊತ್ತಿರದ ಭಾರತೀಯನೇ ಇಲ್ಲ, ಯಾಕೆಂದರೆ ಈ ಮೂರಿರದೆ ಜೀವವೇ ಇಲ್ಲ. ಸಾಹಿತ್ಯದಲ್ಲಂತೂ, ಸಮುದ್ರ, ಜಲಕೇಳಿ, ಮಳೆಗಳ ವರ್ಣನೆ ವಿಪುಲವಾಗಿ ಮೂಡಿ ಬಂದಿದೆ. ನೀರನ್ನು ಕುರಿತು ಹಲವಾರು ಗಾದೆ ಮಾತುಗಳು, ಪಡೆನುಡಿಗಳು ಅರ್ಥವತ್ತಾದ ಅಭಿವ್ಯಕ್ತಿಗಳಾಗಿ ಭಾಷೆಯನ್ನು ಶ್ರೀಮಂತಗೊಳಿಸಿದೆ.

**ಗಾದೆಗಳು**

'ಊರಿಗೆ ಬಂದಾಕಿ ನೀರಿಗಿ ಬರೋದಿಲ್ಲೇನು' ? 'ನೀರಿಲ್ಲದ್ದು ಊರಲ್ಲ, ನಾರಿ ಇಲ್ಲದವನ ಸಂಸಾರ ಅಲ್ಲ', 'ನೀ ನನ್ನ ನೀರಾಗ ನಿಲ್ಲಿಸಿದ್ರ ನಾ ನಿನ್ನ ಊರಾಗ ನಿಲ್ಲಿಸ್ತೇನು', (ಬಾಳೆ ಹೇಳುವ ಮಾತು) 'ಕೂಳ ಕುತ್ತ, ನೀರ ಪಿತ್ತ', 'ತಗ್ಗಿದ್ದಲ್ಲೇ ನೀರ ನಿಲ್ಲ್ಯುತತೆ, ನೀರಾನ ಕಪ್ಪಿ ನೀರ ಕುಡದ್ರೂ ಬತ್ತು, ಕುಡೀದಿದ್ರೂ ಬತ್ತು', ನೀರಿನ ನೆಲಿ ಕುದರಿ ನೆಲಿ, ಮತ್ತು ಹೆಣ್ಣಿನ ನೆಲಿ ತಿಳಿದಿಲ್ಲತ್ತ' 'ಎತ್ತ ಏರಿಗೆಳದ್ರ ಕ್ವಾಣ ನೀರಿಗೆಳೀತಂತೆ, ನೀರಿನದು ನೀರಿಗೆ, ಹಾಲಿನದು ಹಾಲಿಗೆ, ನೀರು ಬೇರಿನ ನಂಟು, 'ನೀರು ಹೊರು ನಿವಾಳಿಗಿ ಊರ ಉಸಾಬರಿ ಯಾಕ? 'ನೀರು ಸೇದಿದ ಹಾಗೆ ಬರುತ್ತದೆ, ಮಾತು ಆಡಿದ ಹಾಗೆ ಬರುತ್ತದೆ. ನೀರು ಹಳ್ಳ ಸೇರದೆ ದಿನ್ನೆ ಏರಿತ್ತೆ?' ಹೀಗೆ ಹಲವನ್ನು ನೋಡಬಹುದಾಗಿದೆ.

**ಪಡೆನುಡಿಗಳು**

ನೀರು ಗೊತ್ತಿರು (ಸಾಮರ್ಥ್ಯ ತಿಳಿದಿರು) ನೀರಾಗ ಹಾಕು (ಹಾಳು ಮಾಡು) ನೀರು ಕುಡಿಸು (ಕಷ್ಟ ಕೊಡು) ಕರಗಿ ನೀರಾಗು (ಅನುಕಂಪ ಪಡು) 'ನೀರಾಗ ಇಳದಂಗಾಗು' (ಗಾಬರಿಯಾಗು) ನೀರು ಬಿಡು(ಇಲ್ಲೆಂದು ಮರೆತುಬಿಡು) ಬೇರಿಗೆ ಬಿಸಿನೀರು ಬಿಡು (ಗೊತ್ತಾಗದಂತೆ ಹಾನಿ ಮಾಡು) ಕಳ್ಳಿಗೆ ಮುಕ್ಕ ನೀರು ಹಾಕು(ಕಷ್ಟ ಕೊಡು) ಹಾದಿಗೆ ನೀರು ಚೆಲ್ಲು (ಇಲ್ಲೆಂದು ತಿಳಿ) 'ಏಳ ಹೊಳಿ ನೀರ ಕುಡಸು' (ಬಹಳಷ್ಟು ಕಷ್ಟ ಕೊಡು) ಎಳ್ಳು ನೀರು ಬಿಡು (ಸತ್ತಂತೆ ಎಂದು ತಿಳಿ) ಹೊಳ್ಯಾಗ ಹುಣಸೀ ಹುಣ್ಣಿ ತೊಳಿ(ವ್ಯರ್ಥವಾಗು) ನೀರ ಮೇಲಿನ ಗುಳ್ಳಿ (ಅನಿಶ್ಚಿತ) ನೀರಕ್ಕರ (ಉಳಿಯಲಾರದ್ದು) ನೀರೊಳಗೆ ಹೋಮ ಮಾಡು (ವ್ಯರ್ಥ ಹಾಳು ಮಾಡು) ನೀರ ಬಿಟ್ಟು ಮೀನು (ತಳಮಳ ಗೊಳ್ಳು) ನೀರೊಳಗಿನ ಮುಳ್ಳು(ಅರಿಯದೇ ಅಪಾಯ ತರುವದು)

ಸುರಿಯದ ಮಳಿ, ಹರಿಯದ ಹೊಳಿ, ಬತ್ತಿದ ಹಳ್ಳ, ಒಣಗಿದ ಕೆರೆ, ಹಾಳುಬಿದ್ದ ಬಾವಿ ಜನಪದ ಬದುಕಿಗೆ ಬೇರಾದ ನೀರಿನ ಸೆಲೆಯೇ ನಿಂತುಹೋಗಿದೆ. ಹೀಗಾಗಿ ಪ್ರಾಣಿ ಪ್ರಪಂಚ, ಪಕ್ಷಿ ಸಂಕುಲ, ಸಸ್ಯಸಮೂಹಗಳಿಂದ ಸಮೃದ್ಧವಾಗಿದ್ದ ಜಾನಪದ ಜಗತ್ತು ಅಳಿವಿನ ಅಂಚಿನಲ್ಲಿದೆ. ಜೀವ ಜಗತ್ತಿನ ದುರಂತ ದೂರಿಲ್ಲದ ಸ್ಥಿತಿ ಪ್ರಾಪ್ತವಾಗ ಹತ್ತಿದೆ. ನೀರಿಗೆ ಪರ್ಯಾದು ಹುಡುಕುವುದಂತೂ ಸಾಧ್ಯವಿಲ್ಲ. ಜನಪದರು ಮಳೆ ಬಯಸಿ ಮುಗಿಲು ನೋಡುತ್ತಲೇ ಕಣ್ಮುಚ್ಚಿದರು. ಆದರೆ ಮಳೆ ಸುರಿಸಬಹುದಾದ ತಂತ್ರಜ್ಞಾನಕ್ಕೆ ಜೀವಕೋಟಿ ಕಾಯುತ್ತಿರುವುದು ಅನಿವಾರ್ಯವಾಗಿದೆ.

* * * * *

## ಈ ಸಂಚಿಕೆಯ ಲೇಖನದಾರರು

೧) ಡಾ. ಡಿ. ಬಿ. ರಾಮಚಂದ್ರಾಚಾರ್
ಕಾವೇರಿ ಕಾಲೇಜು, ಗೋಣಿಕೊಪ್ಪಲು, ಕೊಡಗು

೨) ಪಿ. ಶಂಕರ ಬಳ್ಳೇಕೆರೆ
ನಂ. ೨೩, ೩ನೇ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು - ೫೭೦ ೦೨೦

೩) ಡಾ. ಅಂಬಳಿಕೆ ಹಿರಿಯಣ್ಣ
ಉಪ ಪ್ರಾಧ್ಯಾಪಕರು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,
ಮೈಸೂರು - ೫೭೦ ೦೦೬

೪) ಡಾ. ವಿ. ಜಿ. ಪೂಜಾರ
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾನಿಲಯ,
ಗುಲಬರ್ಗಾ

೫) ಡಾ. ಡಿ. ಕೆ. ರಾಜೇಂದ್ರ
ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬

೬) ಡಾ. ಎಂ. ಎನ್. ವಾಲಿ
ಶಿವಾನಂದ ಕಾಲೇಜು, ಕಾಗವಾಡ, (ಜಿ. ಬೆಳಗಾವಿ)

೭) ಡಾ. ಎಂ. ಜಿ. ಬಿರದಾರ
ಚಿತ್ಕಳ, ಸೇಡಂ ರೋಡ್, ಗುಬ್ಬಿಕಾಲೋನಿ, ಗುಲಬರ್ಗಾ

## ಅಕಾಡೆಮಿ ಪ್ರಕಟಣೆಗಳು

೧ ಆರಂಭದೆತ್ತು ಐನೂರು

೨ ಆನೆ ಬಂತೊಂದಾನೆ

೩ ಗಾದೆಗಳು

೪ ಪಂಚಲೋಹದ ಕುದುರೆ

೫ ಕರ್ನಾಟಕ ಜಾನಪದ

೬ ಜಾನಪದ ಅಧ್ಯಯನ ವೈಜ್ಞಾನಿಕ ನೆಲೆಗಳು

೭ ಪ್ರಶಸ್ತಿ ಪಡೆದ ಮಹನೀಯರು

೮ ಜನಪದ ಆಟಗಳು

೯ ಗೆಜ್ಜೆ ಮಾತಾಡುತಾವೆ

೧೦ ಜಾನಪದ ಮತ್ತು ಸಮೂಹ ಮಾಧ್ಯಮ

೧೧ ಜಾನಪದ ಸಮಾಲೋಚನ

೧೨ ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು

೧೩ ಜಾನಪದ : ೧೯೯೧

೧೪ ದಕ್ಷಿಣ ಕರ್ನಾಟಕದ ಒಡಪುಗಳು

೧೫ ಗಾದೆಯ ಕಥೆಗಳು

೧೬ ಲಂಬಾಣಿ ಜಾನಪದ ಕಥೆಗಳು

೧೬ ನಡಕೆರಿಯಂಡ ಚಿನ್ನಪ್ಪ

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ


ಅಧ್ಯಕ್ಷರು: ಡಾ. ಜೀ. ಶಂ. ಪರಮಶಿವಯ್ಯ

ಸದಸ್ಯರು

ಡಾ. ಡಿ. ಕೆ. ರಾಜೇಂದ್ರ

ಶ್ರೀ ಡಿ. ಜೆ. ಪದ್ಮನಾಭ

ಶ್ರೀ ಶಿವನಗೌಡ ಮಲ್ಲಪ್ಪ ಕೋಟಿ

ಶ್ರೀ ಉಪ್ಪಳ ಕೃಷ್ಣಮಾಸ್ತರ

ಶ್ರೀ ಬಸವರಾಜ ನೆಲ್ಲಿಸರ

ಶ್ರೀ ಕೃಷ್ಣಪ್ಪ ಕುರುಡಿ

ಡಾ. ಎಚ್. ಜೆ. ಲಕ್ಕಪ್ಪಗೌಡ

ಡಾ. ಎಂ. ಜಿ. ಈಶ್ವರಪ್ಪ

ಡಾ. ಬಿ. ಎ. ವಿವೇಕ ರೈ

ಶ್ರೀ ಗೋವಿಂದ ಮುಕುಂದ ನಾಯಕ

ಡಾ. ಜ್ಯೋತಿ ಹೊಸೂರ

ಡಾ. ಸೋಮಶೇಖರ ಇಮ್ರಾಪುರ

ಶ್ರೀ ಕಾಗೋಡು ಅಣ್ಣಪ್ಪ

ಶ್ರೀಮತಿ ಜಯಶ್ರೀ ಗುತ್ತಲ

ಶ್ರೀ ಬೆಳಗಲ್ ವೀರಣ್ಣ

ಶ್ರೀ ಎ. ಕೆ. ರಾಮೇಶ್ವರ

ಶ್ರೀ ರಂಗಾರೆಡ್ಡಿ ಕೋಡಿರಾಂಪುರ

ಶ್ರೀ ಅಪ್ಪಗೆರೆ ತಿಮ್ಮರಾಜು

ಡಾ. ಸಿದ್ಧಲಿಂಗಯ್ಯ

ಶ್ರೀ ಹ. ಕ. ರಾಜೇಗೌಡ

ಪುಟ್ಟಸಾಮಾಚಾರ್

ಶ್ರೀ ಜಗನ್ನಾಥ್ ಹೆಬ್ಬಾಳೆ

ಶ್ರೀ ಹಿರಿಯಡಕ ಗೋಪಾಲರಾವ್

ಡಾ. ಎಸ್. ಎಸ್. ಭದ್ರಾಪುರ

ಲೆಕ್ಕಾಧಿಕಾರಿ : ಬಿ. ಎನ್. ಭದ್ರಪ್ಪ

ರಿಜಿಸ್ಟ್ರಾರ್ : ಎಂ. ಎಸ್. ಸಿದ್ದೇಗೌಡ